ರಂಗಸಂಪನ್ನರು ಮಾಲಿಕೆ : ೨೧

# ಎಚ್. ಟಿ. ಅರಸು

**ಆರ್. ಜಿ. ಹಳ್ಳಿ ನಾಗರಾಜ್**

**ಕರ್ನಾಟಕ ನಾಟಕ ಅಕಾಡೆಮಿ**

ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ

ಬೆಂಗಳೂರು - ೫೬೦ ೦೦೨

H. T. ARASU : A Monograph in Kannada by
R. G. Halli Nagaraj
Editor, Anveshane, 37/2A, 'Nisarga', Nagarabavi Road, Vijayanagar,
Bangalore - 560040
Published by
B. T. Muni Rajaiah
Registrar, Karnataka Nataka Academy
Ravindra Kalakshetra, J. C. Road, Bangalore - 560 002

| | | |
|---|---|---|
| Chief Editor | : | C. G. Krishnaswamy |
| Editors | : | Dr. Siddhaling Pattanshetti<br>K. V. Nagaraja Murthy,<br>T. Raghu, Hooli Shekhar |
| First Impression | : | March, 2001 |
| Pages | : | 72 |
| Cover Design | : | Krishna Raichur |

© Author

Printed by
Manohar Printing Press, Market, Dharwad - 580 001
Ph : 0836- 790030
Price : Rs. 30/-

| | | |
|---|---|---|
| **ಎಚ್. ಟಿ. ಅರಸು** | : | ರಂಗಸಂಪನ್ನರ ಕಿರು ಜೀವನಚರಿತ್ರೆ |
| ಲೇಖಕರು | : | ಆರ್. ಜಿ. ಹಳ್ಳಿ ನಾಗರಾಜ್ |
| ಪ್ರಕಾಶನ | : | ಬಿ. ಟಿ. ಮುನಿರಾಜಯ್ಯ<br>ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ<br>ರವೀಂದ್ರ ಕಲಾಕ್ಷೇತ್ರ, ಬೆಂಗಳೂರು - ೫೬೦ ೦೦೨ |
| ಪ್ರಧಾನ ಸಂಪಾದಕರು | : | ಸಿ. ಜಿ. ಕೃಷ್ಣಸ್ವಾಮಿ |
| ಸಂಪಾದಕರು | : | ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ<br>ಕೆ. ವಿ. ನಾಗರಾಜಮೂರ್ತಿ,<br>ಟಿ. ರಘು, ಹೂಲಿ ಶೇಖರ್ |
| ಪ್ರಥಮ ಮುದ್ರಣ | : | ಮಾರ್ಚ, ೨೦೦೧ |
| ಮುದ್ರಣ | : | ಮನೋಹರ ಪ್ರಿಂಟಿಂಗ್ ಪ್ರೆಸ್, ಮಾರ್ಕೆಟ್<br>ಧಾರವಾಡ - ೫೮೦ ೦೦೧ |
| ಬೆಲೆ | : | ರೂ. ೩೦/ |

# ಮೊದಲ ಮಾತು

ಕರ್ನಾಟಕ ನಾಟಕ ಅಕಾಡೆಮಿಯು ವರ್ಷದುದ್ದಕ್ಕೂ ನಾಡಿನಾದ್ಯಂತ ಹಾಗೂ ನಾಡಿನ ಹೊರಗಡೆ ರಂಗಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತ ಕನ್ನಡದ ನಾಟಕ ಕ್ಷೇತ್ರವನ್ನು ನಿರಂತರ ವಿಸ್ತರಿಸುತ್ತ ಬಂದಿದೆ. ಇಂಥ ಕಾರ್ಯಗಳ ಜೊತೆಗೆ ನಾಟಕ ಕೃತಿ, ರಂಗ ವಿಮರ್ಶೆ, ರಂಗಕರ್ಮಿಗಳ ಪರಿಚಯ ಇತ್ಯಾದಿ ಕುರಿತ ಕೃತಿಗಳನ್ನೂ ಆಗಾಗ ಪ್ರಕಟಿಸಿದೆ.

ಕನ್ನಡ ನಾಡಿನಲ್ಲಿ ಎಷ್ಟೋ ಜನ ಮಹತ್ವದ ರಂಗಸಂಪನ್ನರು ಆಗಿಹೋಗಿದ್ದಾರೆ. ಜಾನಪದ, ವೃತ್ತಿ ಮತ್ತು ಹವ್ಯಾಸಿ ಎಲ್ಲ ಕ್ಷೇತ್ರಗಳಲ್ಲಿ ರಂಗಭೂಮಿಯ ಶ್ರೇಯಸ್ಸಿಗಾಗಿ ಶ್ರಮಿಸಿದ ಅಸಂಖ್ಯ ವ್ಯಕ್ತಿಗಳ ಬದುಕಿನ ಪರಿಚಯವು ಅವರು ಗತಿಸಿದ ನಂತರ ನಿಧಾನವಾಗಿ ಇತಿಹಾಸದ ಹಿನ್ನೆಲೆಗೆ ಸಿಲುಕುತ್ತ ಹೋಗುತ್ತದೆ. ಅಂಥವರೆಲ್ಲರ ಬದುಕಿನ ಚರಿತ್ರೆಗಳು ಸುಸಂಘಟಿತವಾಗಿ ನಿರೂಪಿತಗೊಳ್ಳಬೇಕು, ಬರೆಯಲ್ಪಡಬೇಕು. ಹಾಗೆಯೇ ಈಗ ನಮ್ಮೊಡನಿರುವ ಮಹತ್ವದ ಸಾಧನೆಗೈದಿರುವ ನಟರು, ನಾಟಕಕಾರರು, ನಿರ್ದೇಶಕರು, ಹಿನ್ನೆಲೆ ರಂಗಕರ್ಮಿಗಳು ಮುಂತಾದ ರಂಗಸಂಪನ್ನ ವ್ಯಕ್ತಿಗಳನ್ನು ಕುರಿತು ಆದಷ್ಟು ಬೇಗನೆ ಕೃತಿಗಳನ್ನು ಪ್ರಕಟಿಸುವ ಮೂಲಕ ಅವರ ನೆಮ್ಮದಿಯ, ಕೀರ್ತಿಯ ಬದುಕಿಗೆ ಇನ್ನಷ್ಟು ಹೆಚ್ಚಿನ ಸುಖವನ್ನು ಕೊಡಲೆತ್ನಿಸಬೇಕೆಂದು ನಿರ್ಧರಿಸಿ, ನಾಟಕ ಅಕಾಡೆಮಿ ಈ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದೆ.

ಈ ನಿಟ್ಟಿನಲ್ಲಿ ಈಗಾಗಲೇ ೧, ಎಚ್. ಎನ್. ಹೂಗಾರ, ೨. ಬಿ. ವಿ. ಕಾರಂತ, ೩. ಮಾಸ್ಟರ್ ಹಿರಣ್ಣಯ್ಯ, ೪. ಆರ್. ನಾಗರತ್ನಮ್ಮ, ೫. ಎಚ್. ಕೆ. ಯೋಗಾನರಸಿಂಹ, ೬. ಬಿ. ಎನ್. ನಾಣಿ, ೭. ಚಿಂದೋಡಿ ಲೀಲಾ, ೮A: ಆರ್. ನಾಗೇಶ್, ೯. ಎಂ. ಎಸ್. ಸತ್ಯು, ೧೦. ಪಿ. ಬಿ. ಧುತ್ತರಗಿ, ೧೧. ಹುನಗುಂದ ಬಾಬಣ್ಣ, ೧೨. ಶ್ರೀನಿವಾಸ ತಾವರಗಿರಿ, ೧೩. ಬಿ. ಆರ್. ಅರಿಷಿಣಗೋಡಿ, ೧೪, ಸುಭದ್ರಮ್ಮ ಮನ್ಸೂರು, ೧೫. ಡಿ. ದುರ್ಗಾದಾಸ, ೧೬. ರಾಜಾನಂದ, ೧೭. ಪ್ರಸನ್ನ, ೧೮. ಕೆ. ಎನ್. ಟೇಲರ್, ೧೯. ಎಂ. ವಿ. ವಾಸುದೇವರಾವ್, ೨. ಗಜಾನನ ಮಹಾಲೆ ಅವರನ್ನು ಕುರಿತು ಪುಸ್ತಿಕೆಗಳು ಪ್ರಕಟಗೊಂಡಿವೆ.

ನಾಟಕ ಅಕಾಡೆಮಿಯ ಸದಸ್ಯರಾದ ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ, ಕೆ. ವಿ. ನಾಗರಾಜಮೂರ್ತಿ ಟಿ. ರಘು ಹಾಗೂ ಹೂಲಿ ಶೇಖರ್ ಅವರುಳ್ಳ ಸಂಪಾದಕ ಸಮಿತಿಯು ಈ ಪುಸ್ತಿಕೆಗಳನ್ನು ಚೆನ್ನಾಗಿ ಸಂಪಾದಿಸಿ ಹೊರತರುವ ಗುರುತರ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಅವರಿಗೆ ನಾಟಕ ಅಕಾಡೆಮಿಯ ಹಾಗೂ ವೈಯಕ್ತಿಕವಾಗಿ ನನ್ನ ಪರವಾಗಿ ಗೌರವ ಕೃತಜ್ಞತೆ ಸಲ್ಲಿಸುತ್ತೇನೆ.

ಈ ಪುಸ್ತಿಕೆಗಳ ಪ್ರಕಟಣೆಗೆ ಒಮ್ಮತದಿಂದ ನಿರ್ಧರಿಸಿದ ಹಾಗೂ ಪ್ರಕಟಣೆಗೆ ಪೂರ್ವದಲ್ಲಿಯೇ ಕೆಲವು ಪುಸ್ತಕಗಳನ್ನು ಮಾರಾಟ ಮಾಡಲು ನೆರವಾದ ನಾಟಕ ಅಕಾಡೆಮಿಯ ಎಲ್ಲ ಸದಸ್ಯರಿಗೆ, ಕೃತಿ ರಚಿಸಿ ಕೊಟ್ಟ ಲೇಖಕರಿಗೆ, ಮುಖಪುಟ ಕಲಾವಿದರಿಗೆ ಹಾಗೂ ಮುದ್ರಕರಿಗೆ ಹಾರ್ದಿಕ ಕೃತಜ್ಞತೆಗಳು.

**ಸಿ. ಜಿ. ಕೃಷ್ಣಸ್ವಾಮಿ**
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

# ಸಂಪಾದಕರ ಮಾತು

ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ರಂಗಭೂಮಿಯು ವ್ಯಕ್ತಿಗಳ ಬದುಕಿನ ಎಲ್ಲ ಆಯಾಮಗಳನ್ನು ಸ್ಪರ್ಶಿಸಿ ಅವರ ಭಾವೋದ್ವೇಗ, ಭಾವೋನ್ಮಿಲನಗಳಿಗೆ ಅಭಿವ್ಯಕ್ತಿಯನ್ನು ನೀಡುವಂತೆ ಕಲಾ ಪ್ರಪಂಚದ ಉಳಿದ ಮಾಧ್ಯಮಗಳು ಮಾಡಲಾರವು. ಕರ್ನಾಟಕದ ಮೂಲೆಮೂಲೆಯಲ್ಲಿ ಜಾನಪದ, ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿ ಈ ದೃಷ್ಟಿಯಿಂದ ಹಲವಾರು ವರ್ಷಗಳ ಇಂದ ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ. ಪ್ರಯೋಗದಿಂದ ಪ್ರಯೋಗಕ್ಕೆ ಬದಲಾಗುತ್ತ, ಬೆಳೆಯುತ್ತ. ಹೊಸಹೊಸದಾಗುತ್ತ ಸಾಗುವ ಸಜೀವ ರಂಗಕಲೆಯನ್ನು ದಾಖಲೆಯ ಕಟ್ಟುಪಾಡಿಗೆ ಸಿಲುಕಿಸುವುದು ಬಲು ಕಷ್ಟದ ಕೆಲಸ.

ಮೊದಲಿನಿಂದಲೂ ಇತಿಹಾಸವನ್ನು ರಕ್ಷಿಸುವ ನಿಟ್ಟಿನಲ್ಲಿ ನಮ್ಮವರು ಯೋಚಿಸಿದ್ದೇ ಕಡಿಮೆ. ಹೀಗಾಗಿ ಅಸಂಖ್ಯ ರಂಗ ಕಲಾವಿದರ ಬದುಕು ಇತಿಹಾಸದ ಪುಟಗಳಲ್ಲಿ ಸೇರಿ ಕಾಲ ಕಳೆದಂತೆ ಮಸಕಾಗುತ್ತ ಹೋದದ್ದು ಸಹಜ. ಈಗಲಾದರೂ ನಾವು ಲಭ್ಯವಿರುವ, ಲಭ್ಯವಾಗುವ ಎಲ್ಲ ವಿವರಗಳನ್ನು ಸಂಗ್ರಹಿಸಿ, ಈಗ ನಮ್ಮೊಡನಿರುವ ಕಲಾವಿದರ ಬದುಕಿನ ವರ್ಣಮಯ ನೆನಪುಗಳನ್ನು ಇತಿಹಾಸದ ಅರ್ಥಪೂರ್ಣ ಪುಟಗಳನ್ನಾಗಿ ಪರಿವರ್ತಿಸಲು ಯತ್ನಿಸುವುದು ಅಗತ್ಯವಾಗಿ ಆಗಬೇಕಾದ ಕಾರ್ಯ.

ಕರ್ನಾಟಕ ನಾಟಕ ಅಕಾಡೆಮಿಯ ಉತ್ಸಾಹಿ ಅಧ್ಯಕ್ಷರಾದ ಸಿ. ಜಿ. ಕೃಷ್ಣಸ್ವಾಮಿಯವರ ಒತ್ತಾಸೆ ಹಾಗೂ ಎಲ್ಲ ಸದಸ್ಯರ ಸಕ್ರಿಯ ಸಹಕಾರದ ಮೇರೆಗೆ ಈ ಸಲದ ಅಕಾಡೆಮಿ ಈ ಕಾರ್ಯದಲ್ಲಿ ದಿಟ್ಟ ಹೆಜ್ಜೆ ಇಟ್ಟಿದೆ. ನಮ್ಮೊಡನಿರುವ ರಂಗಕರ್ಮಿಗಳ ಬಗ್ಗೆ ರಂಗಸಂಪನ್ನರು ಎಂಬ ಮಾಲಿಕೆಯಲ್ಲಿ ಕಿರು ಜೀವನ ಚರಿತ್ರೆಯ ಕೆಲವು ಪುಸ್ತಿಕೆಗಳನ್ನು ಈಗಾಗಲೇ ಪ್ರಕಟಿಸಿದೆ.

ನಾಟಕ ಮೂಲತಃ ಪ್ರದರ್ಶಕ ಕಲೆಯಾದರೂ ಸಾಧ್ಯವಿದ್ದಷ್ಟು ಮಟ್ಟಿಗೆ ಅದನ್ನು ಸಾಹಿತ್ಯ, ಬರವಣಿಗೆ, ವಸ್ತುಸಂಗ್ರಹಣೆ, ವಿಡಿಯೋ ಚಿತ್ರೀಕರಣ, ಧ್ವನಿಮುದ್ರಣ, ನೆನಪು ಸಂಗ್ರಹ ಮುಂತಾದ ರೀತಿಯಲ್ಲಿ ದಾಖಲಿಸುವ ಪ್ರಯತ್ನ ಆಗಬೇಕಾಗಿದೆ. ನಮ್ಮ ರಂಗಭೂಮಿಯ ನಟರು, ನಾಟಕಕಾರರು, ನಿರ್ದೇಶಕರು, ರಂಗಸಂಗೀತಗಾರರು, ಹಿನ್ನೆಲೆ ರಂಗಕರ್ಮಿಗಳು ಮುಂತಾದವರು ಮಾಡಿದ ಐತಿಹಾಸಿಕ ಕೆಲಸಗಳು ಜೀವಂತವಾಗಿ ಆಸಕ್ತ ಓದುಗರಿಗೆ, ಚರಿತ್ರೆಕಾರರಿಗೆ ಲಭಿಸುವಂತಾಗಬೇಕು. ಆಗ ಕತಲೆಗೆ ಸಂದ ನಾಟಕ ಸಾಹಿತ್ಯ ಹಾಗೂ ಪ್ರಯೋಗಗಳ ಎಷ್ಟೋ ಪುಟಗಳು ಮತ್ತೆ, ಬೆಳಕಿಗೆ ಬರುವುದರಲ್ಲಿ ಸಂಶಯವಿಲ್ಲ. ಈಗ ಪ್ರಕಟವಾಗುತ್ತಿರುವ ಈ ಕೃತಿಗಳು ಆಯಾ ರಂಗಸಂಪನ್ನ ಕಲಾವಿದರ ಬಗ್ಗೆ ಕೇವಲ ದಿಕ್ಸೂಚಿಯಂತಿವೆ. ಅವರನ್ನು ಕುರಿತು ಇನ್ನೂ ಎಷ್ಟೋ ವಿಷಯಗಳು, ವಿವರಣೆಗಳು ಹೊರಬರಬೇಕು, ಪ್ರಕಟಗೊಳ್ಳಬೇಕು. ಅಂಥ ಕಾರ್ಯಕ್ಕೆ ಈಗಿನ ಈ ಪ್ರಕಟಣೆಗಳು ನಾಂದಿ ಹಾಗೂ ಪ್ರೇರಕ ರಚನೆಗಳು ಎಂಬುದನ್ನು ಮರೆಯಲಾಗದು. ಇಲ್ಲಿ ನಮೂದಿಸಲಾದ ವಿವರಗಳಿಗೆ ಹಾಗೂ ವ್ಯಕ್ತವಾದ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆಗಾರರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇದು ಎಚ್.ಟಿ. ಅರಸು ಅವರನ್ನು ಕುರಿತು ಆರ್. ಜಿ. ಹಳ್ಳಿ ನಾಗರಾಜ್ ಅವರು ಬರೆದ ಪುಸ್ತಕ ಕನ್ನಡ ವೃತ್ತಿರಂಗಭೂಮಿ ಕಂಡ ಅರಸು ವ್ಯಕ್ತಿತ್ವಗಳಲ್ಲಿ ಒಬ್ಬರಾದ ಹನುಮಸಾಗರದ ತಿಪ್ಪರಾಜು ಮುಂದೆ ಎಚ್.ಟಿ. ಅರಸು ಎಂದೇ ಖ್ಯಾತರಾದರು. ಕರ್ನಾಟಕದ ಉತ್ತರ ಹಾಗೂ ದಕ್ಷಿಣ ಭಾಗಗಳನ್ನು ಏಕರೀತಿ ಪ್ರೀತಿಸಿ ಅನೇಕ ಕಂಪನಿಗಳಿಗೆ, ಮಾಲಿಕರಿಗೆ ಅವರು ಪ್ರಿಯರಾಗಿದ್ದರು. ಮಾ. ಹಿರಣ್ಣಯ್ಯ, ಏಣಗಿ ಬಾಳಪ್ಪ, ಗೋಕಾಕ ಕಂಪನಿಯ ಬಸವಣ್ಣೆಪ್ಪ, ಕಂದಗಲ್ಲ ಹಣಮಂತರಾಯರು ಮುಂತಾದವರು ಮೆಚ್ಚಿದ ಅರಸು ತಾವು `ಅಭಿನಯಿಸಿದ ಯಾವ ಪಾತ್ರಗಳಲ್ಲಿಯೂ ವಿಫಲರಾಗಲಿಲ್ಲ. 'ರಾಜಾ ವಿಕ್ರಮ,' 'ಚಂದ್ರಹಾಸ ', 'ಸಿಂಧೂರ ಲಕ್ಷ್ಮಣ ಮುಂತಾದ ನಾಟಕಗಳನ್ನು ನೆನೆದಾಗಲೆಲ್ಲ ಕಣ್ಣ ಮುಂದೆ ಬರುವ ರಂಗವ್ಯಕ್ತಿತ್ವ ಅರಸು ಅವರದೇ. ಬದುಕಿನಲ್ಲಿ ಅನೇಕ ಕಷ್ಟನಷ್ಟಗಳನ್ನು ಸಹಿಸಿ ಇಂದು ಎಂಬತ್ತರ ಈ ಇಳಿ ವಯಸ್ಸಿನಲ್ಲಿ ಅಧಾತ್ಮದತ್ತ ಒಲವು

ತುಂಬಿಕೊಂಡಿಸುವ ಅರಸು ನಮ್ಮ ವೃತ್ತಿ ರಂಗಭೂಮಿಯ ಇತಿಹಾಸದ ಅವಿಭಾಜ್ಯ ಅಂಗವಾಗಿದ್ದಾರೆ. ಈಗಲೂ ಎಲ್ಲ ಕಲಾವಿದರೂ ಆರಾಧಿಸುವಂತಹ ಕಲಾನುಭವಗಳನ್ನು ಪೋಷಿಸಿಕೊಂಡು ಬಂದಿದ್ದಾರೆ.

ಈ ಮಾಲಿಕೆಯ ಪುಸ್ತಕಗಳನ್ನು ಸಕಾಲದಲ್ಲಿ ಬರೆದು ಕೊಟ್ಟ ಎಲ್ಲ ಲೇಖಕರಿಗೆ ಹಾಗೂ ನಾಟಕ ಅಕಾಡೆಮಿಯ ಮೂಲಕ ಅವನ್ನು ಪ್ರಕಟಿಸುವಲ್ಲಿ ಎಲ್ಲ ರೀತಿಯಿಂದ ನೆರವಾದ ಆತ್ಮೀಯರಾದ ಸಿ.ಜಿ.ಕೆ.ಕೆ.ವಿ. ನಾಗರಾಜಮೂರ್ತಿ, ಹೂಲಿ ಶೇಖರ್, ಟಿ. ರಘು ಮತ್ತು ಬಿ. ಟಿ. ಮುನಿರಾಜಯ್ಯ ಹಾಗೂ ಮನೋಹರ ಮುದ್ರಣಾಲಯದ ರವಿ- ಚಂದ್ರು, ರಕ್ಷಾಪುಟದ ವಿನ್ಯಾಸ ಮಾಡಿಕೊಟ್ಟ ಕೃಷ್ಣ ರಾಯಚೂರು ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಬೆಂಗಳೂರು — **ಸಿದ್ಧಲಿಂಗ ಪಟ್ಟಣಶೆಟ್ಟಿ**

೧೧-೨-೨೦೦೧ — ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ


೧. ಸಂಸ್ಕೃತಿ ಹಾಗೂ ವೃತ್ತಿ ನಾಟಕ ೯
೨. ಖಾನಾವಳಿ : ಅರಸು ನೆಲೆಗೂಡು ೧೧
೩. ಹನುಮಸಾಗರದ ಮಗ್ಗದ ವೃತ್ತಿಯಲ್ಲಿ ೧೩
೪. ಭಕ್ತ ಪ್ರಹ್ಲಾದ ಹಾಗೂ ತಿಪ್ಪರಾಜು ೧೪
೫. ರಂಗಭೂಮಿಯ ಪ್ರೇರಣೆ ಮತ್ತು ಅದರ ಹಿಂದಿನ ಶಕ್ತಿ ೧೫
೬. ವೃತ್ತಿ ಕಂಪನಿಗೆ ಪ್ರಥಮ ಕರೆ ೧೬
೭. ಏಣಗಿ ಬಾಳಪ್ಪ ಅವರಲ್ಲಿ ಕಂಡ ಪ್ರೀತಿ ೧೭
೮. ಗೋಕಾಕ ಕಂಪನಿಗೆ ಪ್ರವೇಶ ೧೮
೯. ತಿಪ್ಪರಾಜು ಎಚ್. ಟಿ. ಅರಸು ಆದ ಸಂದರ್ಭ ೨೦
೧೦. ಕಂದಗಲ್ಲು ಹಣಮಂತರಾಯರ ಸ್ಮರಣೆ ೨೦
೧೧. ಗುರುಸೇವೆಯಿಂದ ದೊರೆತ ಫಲ ೨೧
೧೨. ಎಂ. ಸಿ. ಮಹಾದೇವ ಸ್ವಾಮಿಗಳು ಹಾಗೂ ಕನ್ನಡ ಥೇಟರ್ಸ್ ನಂಟು ೨೬
೧೩. ಹಾಸನದ ದನದ ಜಾತ್ರೆಯಲ್ಲಿ ಅದೃಷ್ಟ ಖುಲಾಯಿಸಿದ್ದು ೨೬
೧೪. ಮುಖ್ಯಮಂತ್ರಿ ಎಸ್. ಆರ್. ಕಂಠಿ ಅವರಿಂದ ಪ್ರಶಂಸೆ ೨೭
೧೫. ಬೆಂಗಳೂರಲ್ಲಿ 'ರಾಜಾ ವಿಕ್ರಮ'ದ ಜಯಭೇರಿ ೨೮
೧೬. ಅನಕ್ಕೃ ಆಶೀರ್ವಾದ ಪಡೆದ ಅರಸು ೨೯
೧೭. ಬಾಲನಟರಾಗಿದ್ದ ಎಂ. ಎಸ್. ರಮೇಶ್ ನೆನಪು ೩೧
೧೮. ಚಂದ್ರಹಾಸ ನಾಟಕದಿಂದ ಮನೆಮಾತು ೩೨
೧೯. ಸಿನಿಮಾ ಮೂಲಕ ಎಚ್. ಟಿ. ಅರಸು ೩೪
೨೦. ಜವಾಹರಲಾಲ್ ನೆಹರು ಪ್ರಶಂಸಿಸಿದ್ದು ೩೫
೨೧. ಅಸೂಯೆಪಟ್ಟವರ ಚಾಡಿ ಮಾತು ೩೬
೨೨. ಮಂಗಳೂರಿನ ಕ್ಯಾಂಪ್‌ನಲ್ಲಿ ೩೭
೨೩. ಮೇಕಪ್‌ನಲ್ಲೂ ಪಳಗಿದ ಕೈ ೩೯
೨೪. ಸಿನಿಮಾ ನಂಟು ೩೯
೨೫. ವಿಮಾನ ಏರಿದ ಅರಸು ೪೧
೨೬. ಕೋರ್ಟ್ ಕಟಕಟೆ ಹತ್ತಿದ ಕತೆ ೪೨
೨೭. ಮನ್ನಾ ಡೇ ದನಿಗೆ ಅಭಿನಯಿಸಿದ್ದು ೪೪
೨೮. ತಂದೆ ಹಾಗೂ ಹೆತ್ತವ್ವನ ಸಾವು ೪೫
೨೯. "ಸಿಂಧೂರ ಲಕ್ಷ್ಮಣ' ನಾಟಕದಲ್ಲಿ ಸೋತು ಗೆದ್ದ ಅರಸು ೪೬
೩೦. ಏಳಿಗೆ ಸಹಿಸದೆ ಒಳಗೇ ಕರುಬಿದ ಮಂದಿ ೪೮
೩೧. ಹಾಸನದಲ್ಲಿ ಜಯಭೇರಿ ಬಾರಿಸಿದ ರಾಜಾ ವಿಕ್ರಮ ೪೯
೩೨. ಶ್ರೀಕಂಠಮೂರ್ತಿಗಳೊಡನಿದ್ದ ಸಂಬಂಧ ೫೦
೩೩. ಮಗಳ ಮದುವೆಗಾಗಿ ಮತ್ತೆ ವೃತ್ತಿ ರಂಗಭೂಮಿಗೆ ೫೨

೩೪. ಸ್ತ್ರೀ ಪಾತ್ರಧಾರಿಗಳು ೫೧
೩೫. ಸಾಂಸಾರಿಕ ಜೀವನ ೫೩
೩೬. ಇತ್ತೀಚಿನ ರಂಗಕಲಾವಿದರಿಗೆ ಕಿವಿಮಾತು ೫೩
೧೭. ಉಪಸಂಹಾರ ೬೦
ಅನುಬಂಧ ೬೩

# ವೃತ್ತಿ ಕಲಾವಿದನ ಬಣ್ಣ - ಬದುಕು:
# ಎಚ್.ಟಿ. ಅರಸು

## ಸಂಸ್ಕೃತಿ ಹಾಗೂ ವೃತ್ತಿ ನಾಟಕ

ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲೆಗೊಂದು ಪರಂಪರೆಯಿದೆ. ಪರಂಪರೆಯೊಳಗಿನಿಂದ ಬಿಚ್ಚಿಕೊಂಡ ಬದುಕು ಇತಿಹಾಸವಾಗಿ ಕಣ್ಣೆದುರು ಪುರಾವೆ ಒದಗಿಸುತ್ತಿದೆ. ಸಾಹಿತ್ಯ ಹಾಗೂ ಕಲೆಯ ಚೌಕಟ್ಟಿನಲ್ಲಿ ತನ್ನ ಹೆಗ್ಗಳಿಕೆ ಸಾರಿದ ಈ ಒಂದೊಂದು ಕ್ಷೇತ್ರಕ್ಕೂ ತನ್ನದೇ ಜೀವ ಮಿಡಿತವಿದೆ. ಸ್ಪಂದನವಿದೆ. ಈ ಸ್ಪಂದನದಲ್ಲಿ ಬದುಕಿನ ಕಹಿ-ಸಿಹಿಗಳೆರಡು ಬೆರೆತ ಬೇವು - ಬೆಲ್ಲವೂ ಇದೆ.

ಕಲೆ ಬದುಕಿನ ಉಸಿರು ಎಂಬುದು ಹಳೆಯ ಮಾತು. ಇವೊತ್ತು ಕಲೆ ಅಭಿನಯಕ್ಕಷ್ಟೇ ಸೀಮಿತವಾಗಿ ಉಳಿದಿಲ್ಲ. ತನ್ನ ಅರ್ಥ ವ್ಯಾಪ್ತಿಯನ್ನು ವಿಸ್ತಾರಗೊಳಿಸಿದ ಹೊಸ ಆವಿಷ್ಕಾರಗಳು, ಹೊಸ ಹೊಸ ಪ್ರಕಾರಗಳು ಕಣ್ಣೆದುರು ಸುಳಿಯುತ್ತಿವೆ.

ಹೀಗಾಗಿ ನಾಟಕ ನಮ್ಮನ್ನು ಸೆಳೆದುಕೊಂಡ ವಿಶಿಷ್ಟ ಪ್ರಕಾರ, ಮಾತು, ಹಾವಭಾವ - ಅಭಿನಯ - ಹಾಡು - ನೃತ್ಯಗಳ ಸಂಗವೇ ನಾಟಕ.

ವೃತ್ತಿ ನಾಟಕ ಮಂಡಳಿಗಳ ಭವಿಷ್ಯ ಭೀಕರವೆಂಬ ವಿಷಯ ತಿಳಿದಿದ್ದರೂ ಸಹ, ಸಂಗೀತ ಮತ್ತು ಅಭಿನಯದ ಗೀಳಿನಿಂದ ಕೆಲವರು, ಸಂಸಾರ ತಾಪತ್ರಯದಿಂದ ಕೆಲವರು, ನಾಟಕದಲ್ಲಿ ಖ್ಯಾತರಾಗಬೇಕೆಂದು ಮತ್ತೆ ಕೆಲವರು ನಾಟಕ ಸಂಸ್ಥೆಗಳಿಗೆ ಸೇರುತ್ತಿದ್ದರು. ನಟರಿಗೆ ಸಮಾಜದಲ್ಲಿ ಗೌರವ ಸ್ಥಾನವಿಲ್ಲವೆಂದು ನಂಬಿದ್ದ ಆ ಕಾಲದಲ್ಲಿ ಉತ್ತಮ ವರ್ಗದ ಜನ ನಾಟಕ ಕಂಪನಿಗಳನ್ನು ಸೇರುತ್ತಿದ್ದುದು ವೃತ್ತಿ ನಾಟಕಗಳ ಯುಗದ ವೈಶಿಷ್ಟ್ಯ.

ವೃತ್ತಿ ನಾಟಕ ಸಂಸ್ಥೆಗಳು ಸ್ಥಳದಿಂದ ಸ್ಥಳಕ್ಕೆ ಸಂಚರಿಸಿ, ಅಭ್ಯಾಸ ಮಾಡಿದ ಕೆಲವೇ ಪೌರಾಣಿಕ ನಾಟಕಗಳನ್ನು ಹೊಸ ಹೊಸ ಸ್ಥಳಗಳಲ್ಲಿ ಪ್ರದರ್ಶಿಸಿ ಜನರನ್ನು ಆಕರ್ಷಿಸಬೇಕಾಗಿದ್ದುದರಿಂದ, ತಮ್ಮ ಅಲೆಮಾರಿ ಜೀವನದಲ್ಲಿ ನಟರ ಹಾಗೂ ಇನ್ನಿತರ ಸಿಬ್ಬಂದಿ ಜನರ ಬಗ್ಗೆ ಹೆಚ್ಚು ಜವಾಬ್ದಾರಿಯನ್ನು ವಹಿಸಬೇಕಾಗಿತ್ತು. ನಾಟಕ ಸಂಸ್ಥೆಗಳು ಪರಸ್ಥಳಗಳಲ್ಲಿ ಬಿಡಾರ ಹಾಕಿದಾಗ ನಟರ ವಾಸಕ್ಕೆ ಮನೆಗಳನ್ನು ಸಾಮಾನ್ಯವಾಗಿ ಬಾಡಿಗೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಹಳೇ ಮೈಸೂರಿನ ಕೆಲವು ಕಡೆಗಳಲ್ಲಿ ಪೂರ್ಣಯ್ಯನವರು ಕಟ್ಟಿಸಿದ ಛತ್ರಗಳಲ್ಲಿಯೇ ರಂಗ ಕಲಾವಿದರು ಉಳಿದುಕೊಳ್ಳುತ್ತಿದ್ದರು. ಅನಿವಾರ್ಯ ಸಂದರ್ಭಗಳಲ್ಲಿ ಥಿಯೇಟರ್‌ಗಳಲ್ಲಿಯೇ ವಾಸಮಾಡುತ್ತಿದ್ದರು. ನಾಟಕಗಳು ರಾತ್ರಿ ಸುಮಾರು ಮೂರು ಗಂಟೆಗಳವರೆಗೂ ನಡೆಯುತ್ತಿದ್ದವು. ಭವ್ಯ ಸೀನರಿಗಳಿಂದ ರಾರಾಜಿಸಿ ಪ್ರೇಕ್ಷಕರನ್ನು ಅದ್ಭುತ ಲೋಕಕ್ಕೆ ಕರೆದೊಯ್ಯುತ್ತಿದ್ದ ರಂಗಮಂಚದ ಎಡಬಲ ಸೈಡ್‌ವಿಂಗ್‌ಗಳ ಭಾರಿ ಪೆಟ್ಟಿಗೆಗಳ ಮೇಲೆಯೂ ಕಲಾವಿದರು ಮಧ್ಯಾಹ್ನದ ಹೊತ್ತು ಮಲಗಿ ನಿದ್ರೆ ಮಾಡುತ್ತಿದ್ದರು; ರಾತ್ರಿಯ ನಾಟಕದ ಮಾಯಾ ಪ್ರಪಂಚವೆಲ್ಲವೂ ಅದೃಶ್ಯವಾಗಿ ರಂಗಭೂಮಿಯ ಒಂದು ಒರಟು ನೆಲ, ಮರಗಳ ಚೌಕಟ್ಟುಗಳಿಂದ ನಿರ್ಮಿಸಿದ್ದ ಸೈಟ್‌ವಿಂಗ್‌ಗಳು, ಮೇಲೆ ಸುರಳಿ ಸುತ್ತಿ ಕಟ್ಟಿದ ಸೀನರಿಗಳು ಬೆಳಗಿನ ಹೊತ್ತು ಥಿಯೇಟರಿನ ಒಳಭಾಗದ ಅತಿಮಬ್ಬಿನಲ್ಲಿ ಕಾಣುತ್ತಾ, ಕಲಾವಿದರ ನೈಜ ಜೀವನ ನಗ್ನವಾಗಿ ಪ್ರಕಟವಾಗುತಿತ್ತು.

ಛತ್ರಗಳು ದೊರಕದ ಸ್ಥಳಗಳಲ್ಲಿ ನಟರು ಹಾಗೂ ನಾಟಕದ ಜನ ತಂಗಲು ಅನುಕೂಲವಾದ ಮನೆಗಳನ್ನು ನಾಟಕ ಕಂಪನಿಯ ಮಾಲೀಕರು ಬಾಡಿಗೆ ತೆಗೆದುಕೊಂಡು ಅದನ್ನು "ಕಂಪನಿಯ ಮನೆ" ಎಂದು ಕರೆಯುತ್ತಿದ್ದರು. ಅಲ್ಲಿ ನಾಟಕ ಸಂಘದ ಸದಸ್ಯರಿಗೂ ವಸತಿ ಹಾಗೂ ಭೋಜನ ವ್ಯವಸ್ಥೆ ಇದ್ದಿತು. ನಾಟಕ ಕಂಪನಿಗಳ ಜನ ಒಂದು ದೊಡ್ಡ ಕುಟುಂಬದವರಂತೆಯೇ ಕಾಣುತ್ತಿದ್ದರು. ನಾಟಕ ಸಂಸ್ಥೆಗಳು ನಟರ ಹಾಗೂ ನಾಟಕದ ಇತರ ಸಿಬ್ಬಂದಿ ವರ್ಗದ ಊಟಕ್ಕೆ ವ್ಯವಸ್ಥೆ ಮಾಡಬೇಕಾಗಿತ್ತು. ಸಾಮಾನ್ಯವಾಗಿ

ಕಂಪನಿ ಮನೆಗಳಲ್ಲಿ ನಟರಿಗೆ ಊಟ, ವಸತಿ, ಶಿಕ್ಷಣ, ನಾಟಕದ ಅಭ್ಯಾಸ, ವಾರಕ್ಕೊಮ್ಮೆ ಭಜನೆ ಇತ್ಯಾದಿ ಪೂಜಾ ಕಾರ್ಯ, ಧ್ಯಾನ ಇವುಗಳ ವ್ಯವಸ್ಥೆಯೂ ಇರುತ್ತಿತ್ತು. ಇಂಥವು ಎಲ್ಲಾ ಕಂಪನಿಗಳಿಗೂ ಸಾಧ್ಯವಿರುತ್ತಿರಲಿಲ್ಲ ಎಂಬುದೂ ಅಷ್ಟೇ ಸತ್ಯ. ಹೆಸರಾಂತ ಕಂಪನಿಗಳಲ್ಲಿ ಹಲವನ್ನಾದರೂ ಚಾಚೂ ತಪ್ಪದೆ ಪಾಲಿಸುತ್ತಿದ್ದವು.

ವೃತ್ತಿ ನಾಟಕ ಕಂಪನಿಗಳು ತಮ್ಮ ನಟವರ್ಗದಲ್ಲಿ ಹಾಗೂ ಕಂಪನಿಯ ಆಡಳಿತದಲ್ಲಿ ಕಟ್ಟುನಿಟ್ಟಾದ ಶಿಸ್ತನ್ನು ಪಾಲಿಸುತ್ತಿದ್ದವು. ನಾಟಕ ಕಂಪನಿ ಸಾಲಕ್ಕೆ ಒಳಗಾದಾಗ, ನಟರ ಸಂಬಳ ತಿಂಗಳುಗಟ್ಟಲೆ ನಿಂತಾಗ, ವಸತಿ - ಊಟ ವ್ಯವಸ್ಥೆ ಅಸಮರ್ಪಕವಾಗಿದ್ದಾಗ ಹಾಗೂ ಮಾಲೀಕರು ದಬ್ಬಾಳಿಕೆ ನಡೆಸಿದಾಗ ನಾಟಕ ಸಂಘದಲ್ಲಿ ಕೆಲವು ವೇಳೆ ಅಶಿಸ್ತು ತಲೆದೋರುತ್ತಿತ್ತು. ವರದಾಚಾರ್ಯ, ಗುಬ್ಬಿ ವೀರಣ್ಣ, ಪೀರ್ ತಮ್ಮ ಆದರ್ಶ ವ್ಯಕ್ತಿತ್ವದಿಂದ ನಟರಲ್ಲಿ ಶಿಸ್ತನ್ನು ತಂದುದಲ್ಲದೆ, ತಮ್ಮ ನಾಟಕ ಸಂಘಗಳನ್ನು ಚನ್ನಾಗಿ ನಡೆಸುತ್ತಿದ್ದರು. ಕೆಲ ಕಂಪನಿಗಳ ನಟರಿಗೆ ಸರಿಯಾದ ಊಟ-ವಸತಿ ವಾರಕ್ಕೊಮ್ಮೆ ಅಭ್ಯಂಜನ ಸ್ನಾನ ಹಾಗೂ ಬೆಳಗ್ಗೆ ಹನ್ನೊಂದು ಗಂಟೆಗೆ ನಾಟಕ ಅಭ್ಯಾಸ ನಡೆಯುತ್ತಿದ್ದವು.

ವೃತ್ತಿ ನಾಟಕ ಕಂಪನಿಗಳಲ್ಲಿ ಅಭಿನಯಿಸುತ್ತಾ ಕಂಪನಿ ಮುಚ್ಚಿ ಹೋಗಿಯೋ ಅಥವಾ ಇನ್ನಿತರ ಕಾರಣಗಳಿಂದಲ್ಲೊ ಕಂಪನಿಯನ್ನು ಬಿಟ್ಟು ಬಂದ ನಟರಿಗೆ ಹಂಗಾಮಿ ಸಂಸ್ಥೆಗಳಿಂದ ಪಾತ್ರವಹಿಸಲು ಕರೆ ಬರುತ್ತಿದ್ದುದುಂಟು. ನಟರನ್ನು ಪ್ರತಿ ಪ್ರದರ್ಶನಕ್ಕೂ ಗೊತ್ತು ಮಾಡಿಕೊಂಡು ನಾಟಕಗಳನ್ನು ಆಡುವ ಅಭ್ಯಾಸ ಕರ್ನಾಟಕದಲ್ಲಿ ಕೆಲವು ನಗರ ನಾಟಕ ಸಂಸ್ಥೆಗಳಲ್ಲಿ ಹಾಗೂ ಹವ್ಯಾಸಿಗಳಲ್ಲಿ ರೂಢಿಗೆ ಬಂದದ್ದು ಈಚಿನ ಮೂವತ್ತು - ನಲವತ್ತು ವರ್ಷಗಳ ಹಿಂದೆ. ಇಂಥ ಕಂಪನಿ (ಹಂಗಾಮಿ/ಖಾಯಂ)ಗಳ ಒಡನಾಟವು ಹಲವು ಕಲಾವಿದರಿಗೆ ಸಾಕಷ್ಟು ಅನುಭವ ಕೊಟ್ಟಿದೆ. ವೃತ್ತಿ ನಾಟಕ ಕಂಪನಿಗಳ ವಾಸ್ತವ ಚಿತ್ರಣವನ್ನು ಹೀಗೆ 'ಕನ್ನಡ ರಂಗಭೂಮಿಯ ವಿಕಾಸ' ಎಂಬ ಕೃತಿಯಲ್ಲಿ ಡಾ. ಎಚ್.ಕೆ. ರಾಮನಾಥ ಅವರು ವಾಸ್ತವ ಸಂಗತಿಗೆ ಕನ್ನಡಿ ಹಿಡಿದಿದ್ದಾರೆ.

ಈ ನಾಟಕವೆಂಬ ಕಲಾ ಜಗತ್ತಿನಲ್ಲಿ ಈಜಿದವರೆಷ್ಟೋ ಮಂದಿ. ಅದರಲ್ಲಿ ಹನುಮಸಾಗರದ ತಿಪ್ಪರಾಜ ಅರಸು (ಎಚ್.ಟಿ. ಅರಸು) ಒಬ್ಬರು. ಅವರಿಗೀಗ ಎಂಬತ್ತರ ಹರೆಯ. ವೃತ್ತಿ ರಂಗಭೂಮಿಯಲ್ಲಿ ಅವರ ಅಭಿನಯ ಭಿನ್ನ.

ಮುಖ್ಯವಾಗಿ ವೃತ್ತಿ ಕಂಪನಿ ಸೇರುವ ನಟನಿಗೆ ಶಾರೀರ ಸಂಪತ್ತು ಚನ್ನಾಗಿರಬೇಕಿತ್ತು. ಸಾಮಾನ್ಯವಾಗಿ ಯುವಕರಾಗಿದ್ದಾಗಲೇ ನಟರು ನಾಟಕ ಕಂಪನಿಗಳಿಗೆ ಸೇರುತ್ತಿದ್ದರು. ಕಂಠ ಸರಿಯಾಗಿದ್ದರೆ, ನಟ ಅನಕ್ಷರಸ್ಥನಾಗಿದ್ದರೂ ಅವನನ್ನು ತಿದ್ದಿ ಪಾತ್ರಕ್ಕೆ ಸಿದ್ಧಗೊಳಿಸುವ ಹೊಣೆಯನ್ನು ಕಂಪನಿ ಮಾಲೀಕರು ಹೊರುತ್ತಿದ್ದರು. ನಟನನ್ನು ಆರಿಸಿಕೊಳ್ಳುವಾಗ ನಾಟಕ ಕಂಪನಿಯ ಮಾಲೀಕರು ನಟನ ಶಾರೀರ, ವ್ಯಕ್ತಿತ್ವ, ರೂಪ, ಮಾತಿನ ಕಲೆ, ಭಂಗಿ, ಅಭಿನಯ - ಕೌಶಲ್ಯಗಳನ್ನು ಪರೀಕ್ಷಿಸುತ್ತಿದ್ದರು. ಇಂಥ ಪರೀಕ್ಷೆಗಳಲ್ಲಿ ಬಾಲನಟನಾಗಿ ಗೆದ್ದು, ಕ್ರಮೇಣ ಯೌವನದಲ್ಲಿ ಸ್ತ್ರೀ ಪಾತ್ರದಲ್ಲೂ ಸೈ ಎನ್ನಿಸಿಕೊಂಡು, ಮುಂದೆ ಪೌರಾಣಿಕ ನಾಟಕಗಳಿಗೆ ಬೇಕಾದ ರೂಪು, ಮಾತಿನ ಏರಿಳಿತ, ಪಾತ್ರಕ್ಕೆ ತಕ್ಕದಾದ ಅಭಿನಯಗಳಿಂದ ಅರಸು ಗೆದ್ದವರೇ. ಈ ಹಿನ್ನೆಲೆಯಲ್ಲಿ ಅವರ ರಂಗ ಬದುಕಿನತ್ತ ಇಣುಕು - ನೋಟ ಇಲ್ಲಿ ದಾಖಲಾರ್ಹ.

* * * *

## ಖಾನಾವಳಿ : ಅರಸು ನೆಲೆಗೂಡು

ಗಾಂಧಿನಗರ ಎಂಬುದು ಬೆಂಗಳೂರೆಂಬ ಮಾಯಾ ನಗರಿಯ ಹೃದಯಭಾಗ. ಎಲ್ಲವೂ ಇಲ್ಲಿಂದಲೇ ಆರಂಭವಾಗಿ ಇಲ್ಲೇ ಮುಕ್ತಾಯವಾಗುತ್ತವೆಯೇನೋ ಅನ್ನುವಷ್ಟು ಇದು ನಿರಂತರ ಚಟುವಟಿಕೆಯ, ಜೀವಂತಿಕೆಯ, ತೆರದ ಪುಸ್ತಕದಂತಿರುವ ಇನ್ನೊಂದರ್ಥದಲ್ಲಿ ನಿಗೂಢವಾಗಿರೋ ಸ್ಥಳ! ಇಲ್ಲಿನ ಸಿಂಡಿಕೇಟ್ ಬ್ಯಾಂಕ್ ಮುಖ್ಯರಸ್ತೆಯಲ್ಲೇ ಇರುವ ಸೋಮೇಶ್ವರ ಖಾನಾವಳಿಯ ವಸತಿಗೃಹ (ಕೋಣೆ) ವೊಂದರಲ್ಲಿ ಹಾಕಿರುವ ಆರು ಮಂಚಗಳಲ್ಲಿ ಒಂದು ಮಂಚವೇ (6x2ಅಡಿ) ಮನೆಯೆಂಬ ಆಸ್ತಿಯಾಗಿ ಕೂರುವ, ಮಲಗುವ, ಚಿಂತಿಸುವ, ತಮ್ಮನ್ನು ಕಾಣಲು ಬರುವವರನ್ನು ಪಕ್ಕದಲ್ಲೇ ಕೂರಿಸಿಕೊಂಡು ಸ್ನೇಹಮಹಿಯಾಗಿ ಮಾತಾಡುವ - ಎಲ್ಲವೂ ಆಗಿರುವುದು ಎಚ್.ಟಿ. ಅರಸು ಅವರ ಸದ್ಯದ ನೆಲೆಗೂಡು.

ಕಂಪನಿ ನಾಟಕಗಳ ಮೂಲಕ ಕರ್ನಾಟಕದ ಮೂಲೆಮೂಲೆಗಳನ್ನು ಸುತ್ತಿ, ಸುಸ್ತಾಗಿ, ವಯಸ್ಸು ಐವತ್ತೈದರ ಹತ್ತಿರ ಸುಳಿದಿದ್ದರಿಂದಾಗಿ ಸಾಕಿನ್ನು ಈ ಜೋಗಿ ಪಾಡು ಎಂದು ಬೆಂಗಳೂರು ನೆಲೆ ಹುಡುಕುತ್ತ ಬಂದ ಅರಸು ನೆನಪುಗಳನ್ನು ಬಿಚ್ಚಿಕೊಂಡದ್ದು ಹೀಗೆ: "...ಮೈಸೂರಲ್ಲಿ ಬೀಡುಬಿಟ್ಟಿದ್ದ ಕಂಪನಿ ನಾಟಕ ಬಿಟ್ಟಾದ ಮೇಲೆ ನನ್ನ ಅಣ್ಣನ ಮಗಳು, ಅಳಿಯನ ಮನೆ ಬೆಂಗಳೂರಿನಲ್ಲೇ ಇದ್ದುದರಿಂದ ಅವರ ಮನೆಗೆ ಬಂದೆ. ಅವರು ಬೀಗರು ಅನ್ನೋದು ನಿಜವಾದರೂ ಎಷ್ಟು ದಿನ ಇರಲು ಸಾಧ್ಯ? ಯೋಚಿಸಿದೆ. ಅಲ್ಲಿಗಾಗಲೇ ಒಬ್ಬರು ಸ್ನೇಹಿತರಾಗಿದ್ದರು. ಅವರಿನ್ನೂ ಯುವಕರು, ಕಲೆ ಬಗ್ಗೆ ಅವರಿಗೂ ಗೌರವವಿತ್ತು. ಅವರ ಹೆಂಡತಿ ಹೆರಿಗೆಗೆಂದು ತೌರಿಗೆ ಹೋಗಿದ್ರು. ಅವರೂ ಒಬ್ಬರೇ ಆದ್ರು. ಬೆಳಗ್ಗೆನೇ ಕೆಲಸಕ್ಕೆ ಹೋಗ್ತಿದ್ರು. 'ಹೇಗೂ ನಾನೊಬ್ಬನೇ, ಬಂದು ಸ್ವಲ್ಪ ದಿನ ಇಲ್ಲೇ ಇದ್ದು ಬಿಡಿ' ಅಂದ್ರು. ಅವರ ಜೊತೆ ಮೂರು ತಿಂಗಳು ಕಾಲ ಹಾಕಿದೆ...

... ಬಣ್ಣ ಹಚ್ಚಿದ ಬದುಕು ಸುಮ್ಮನೆ ಕೂರಿಸೀತೆ? ಗತಕಾಲದ ನೆನಪುಗಳು ಬರತೊಡಗಿದವು. ಮಾಸ್ಟರ್ ಹಿರಣ್ಣಯ್ಯ ಅವರ ಕಂಪನಿ ಮಜೆಸ್ಟಿಕ್‌ನಲ್ಲಿ ಬೀಡುಬಿಟ್ಟಿತ್ತು. ಅಲ್ಲಿಗೆ ಹೋದೆ. ಮಾ. ಹಿರಣ್ಣಯ್ಯ ಹಾಗೂ ವ್ಯವಸ್ಥಾಪಕ ಮುನಿರಂಗಪ್ಪ 'ಅಲ್ಲಿ ಇಲ್ಲಿ ಯಾಕೆ ತಿರುಗಿಕೊಂಡು ಇರ್ತೀರಿ, ಇಲ್ಲೇ ಬಂದು ಬಿಡಿ' ಅಂದ್ರು...

... ಬೀಗರು, ಸ್ನೇಹಿತರು ಎಷ್ಟು ಆದಾರು? ಹೆಚ್ಚು ದಿನ ಬೇರೆಯವರ ಮನೆಯಲ್ಲಿದ್ರೆ ಪ್ರೀತಿ, ವಿಶ್ವಾಸ ಉಳಿದೀತೆ? ಮುನಿರಂಗಪ್ಪ ಅವರ ಮಾತಿನಂತೆ ರಂಗಭೂಮಿ ಅನ್ನೋ ನನ್ನ ತವರು ಮನೆಗೆ ಬಂದು ಅವರ ಜೊತೆ ಸೇರಿಕೊಂಡೆ. ಅಲ್ಲೇ ಹತ್ತಿರವಿದ್ದ ರೊಟ್ಟಿ ಖಾನಾವಳಿಗೆ ಊಟಕ್ಕೆ ಹೋಗ್ತಿದ್ವಿ. ಅದು ಸೋಮೇಶ್ವರ ಖಾನಾವಳಿ ಅಂತ. ದಿನಕ್ಕೆ ನಾಲ್ಕು ರೂಪಾಯಿ ಊಟಕ್ಕೆ ಖರ್ಚಾಗುತ್ತಿತ್ತು. ಹಾಗೇ ಖಾನಾವಳಿಯವರೂ ಹತ್ತಿರ ಆದ್ರು. ಊಟದ ಖರ್ಚು ತಿಂಗಳಿಗೆ ನೂರಿಪ್ಪತ್ತು ರೂಪಾಯಿ ಆಗ್ತಿತ್ತು. ಒಂದು ದಿನ ಕೇಳಿದ್ವಿ. ತಿಂಗಳಿಗಿಷ್ಟು ಅಂತ ಕೊಡ್ತೀವಿ, ದಿನವೂ ಕೊಡೋಕೆ ಕಷ್ಟ ಆಗುತ್ತೆ ಅಂದ್ವಿ. ಆಯ್ತು ತಿಂಗಳಿಗೆ ನೂರು ರೂಪಾಯಿ ಕೊಡಿ ಅಂದ್ರು. "ನಾವು ಕಲಾವಿದರು, ಅಷ್ಟು ಎಲ್ಲಿಂದ ತರೋದು, ಎಪ್ಪತ್ತೋ - ಎಪ್ಪತ್ತೈದೋ ಕೊಡುತ್ತೀವಿ" ಅಂದ್ವಿ. ಜೊತೆಗೆ ವಸತಿಯೂ ಅಲ್ಲೇ ಆಯ್ತು. ಅಮೇಚೂರ್ ತಂಡದವರು ಆಗಾಗ್ಗೆ ನಮ್ಮನ್ನ ಕರೀತಿದ್ರು. ದಿನದ ಪಾತ್ರಕ್ಕೆ ನೂರು ರೂಪಾಯಿ ಕೊಡೋರು. ಆ ಕಾಲಕ್ಕೆ "ನೂರು" ಭಾರೀ ಮೊತ್ತವೇ. ಕೆಲವು ಸಾರಿ ಕಲೆಕ್ಷನ್ ಇರುತ್ತಿರಲಿಲ್ಲ. ಐವತ್ತೋ, ಎಪ್ಪತ್ತೈದೋ ತೆಗೆದುಕೊಂಡು ಅದರಲ್ಲೇ ತೃಪ್ತಿ ಹೊಂದುತ್ತಿದ್ವಿ. ಎಲ್ಲರ ಜೊತೆಯೂ ಸಹಕರಿಸುತ್ತಿದ್ವಿ. ಎಲ್ಲರೂ ಕರೆಯೋರು... ದುಡ್ಡಿಗೆ ಡಿಮ್ಯಾಂಡ್ ಮಾಡೋಲ್ಲ ಅಂತ ಇದ್ದಿರಬೇಕು..."

ಹೀಗೆ ಬೆಂಗಳೂರಿಗೆ ಬಂದ ಸಂದರ್ಭ ಹಾಗೂ ಇಲ್ಲಿನ ಸೋಮೇಶ್ವರ ಖಾನಾವಳಿಯಲ್ಲಿ ನೆಲೆ ನಿಂತು ಪಾಲಿಗೆ ಬಂದದ್ದೇ ಪಂಚಾಮೃತ ಎಂದು ಎಲ್ಲವನ್ನೂ ಸ್ವೀಕರಿಸಿ, ಒಳ್ಳೇ ನಡತೆಯಿಂದ ಪ್ರೀತಿ - ವಿಶ್ವಾಸಗಳಿಸಿದ ಎಚ್.ಟಿ. ಅರಸು ಅವರಿಗೆ ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಕರ್ನಾಟಕ ಸರಕಾರ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿ ಕೊಟ್ಟು, ಪುರಸ್ಕಾರಿಸಿದೆ. ಅರಸು ಬದುಕಿನ ಎಂಬತ್ತು ವಸಂತಗಳಿಗೆ ಹೆಜ್ಜೆ ಇಟ್ಟು ಇನ್ನೂ ಲವಲವಿಕೆಯಿಂದ ಓಡಾಡುತ್ತಾರೆ. ಕಣ್ಣು, ಕಿವಿ ಸ್ಪಷ್ಟವಾಗಿವೆ.

ಬೆಂಗಳೂರೆಂಬ ಈ ಬೃಹತ್ ನಗರದಲ್ಲಿ ಒಂಟಿಯಾಗಿದ್ದು ಗತಕಾಲಕ್ಕೆ ನೆನಪನ್ನೊಡ್ಡಿ ನಮ್ಮೊಡನೆ ಸಂವಾದಿ ಆಗುತ್ತಾರೆ.

ಖಾನಾವಳಿಯ ಕೋಣೆಯಿಂದಲೇ ಅವರ ಬದುಕಿನ ಫ್ಲ್ಯಾಷ್‌ಬ್ಯಾಕ್ ತೆರೆವ ಬಣ್ಣ - ಬದುಕಿನ ರಂಗಿನ ಜಗತ್ತು, ನೋವಿನ ಜಗತ್ತು ಬಿಚ್ಚಿಕೊಂಡದ್ದು...

ನೆನಪುಗಳು ಕೈಕೊಟ್ಟಾಗ ಹೇಳಿದ್ದು ಮತ್ತೆ ಮರುಕಳಿಸುತ್ತೆ, ಬಾಲ್ಯ, ಯೌವನದ ಹೆಜ್ಜೆ ಗುರುತುಗಳನ್ನು, ನಡೆದ ದಾರಿಯನ್ನು ಗುರ್ತಿಸುವಲ್ಲಿ, ಕ್ರಮಬದ್ಧವಾಗಿ ಹೇಳುವಲ್ಲಿ ಸೂತ್ರ ತಪ್ಪುತ್ತದೆ. ಖಾನಾವಳಿಯಿಂದ ಗಾಂಧೀನಗರದಲ್ಲೇ ಇರುವ ಪುರಾತನ ಅನಂತಸ್ವಾಮಿ ಮಠದಲ್ಲಿ ಕೂತು ದೇವರ ಪ್ರಾರ್ಥಿಸುತ್ತ, ಆಧ್ಯಾತ್ಮದತ್ತ ಒಲವು ತೋರಿ ಆ ಪ್ರಶಾಂತ ವಾತಾವರಣದಲ್ಲಿ ಹಲವು ನೆನಪಿನ ಬುತ್ತಿ ಗಂಟು ಬಿಚ್ಚಿ ಎದುರಿಗಿಡುತ್ತಾರೆ...

* * *

## ಹನುಮಸಾಗರದ ಮಗ್ಗದ ವೃತ್ತಿಯಲ್ಲಿ .....

ರಾಯಚೂರು ಜಿಲ್ಲೆ ಕುಷ್ಟಗಿ ತಾಲ್ಲೂಕು ಹನುಮಸಾಗರದಲ್ಲಿ ಹುಟ್ಟಿದ ತಿಪ್ಪರಾಜುವಿನ ತಂದೆ ಯಮುನಪ್ಪ, ತಾಯಿ ನಾಗರತ್ನಮ್ಮ. ತಂದೆ ಹೆಚ್ಚು ಕಲಿತವರಲ್ಲ. ಆ ಕಾಲಕ್ಕೆ ಪ್ರೈಮರಿ ಓದೇ ಹೆಚ್ಚಿನದು. ತಂದೆ ಹಾಗೂ ಕುಟುಂಬದ ವೃತ್ತಿ ನೇಕಾರಿಕೆ, ಮಗ್ಗದಲ್ಲಿ ನೂಲಿನ ಜೊತೆ ಮೈ,ಕೈ ಬಗ್ಗಿಸಿ ತನ್ಮಯತೆಯಿಂದ ಬಣ್ಣ - ಆಕಾರದಲ್ಲಿ ಬಟ್ಟೆ ನೇಯ್ವ ಏಕಾಗ್ರತೆ. ಇಂಥಲ್ಲಿ ಬೇಸರಕ್ಕಾಗಿ ಪೌರಾಣಿಕ, ಐತಿಹಾಸಿಕ ನಾಟಕಗಳ ಹಾಡು, ಸಂಭಾಷಣೆಯನ್ನು ಹೇಳುತ್ತ ಖುಷಿಗೊಂಡು ಕಾಲ ಕಳೆದ ತಲೆಮಾರಿನ ಕತೆಯೇ ಇದೆ.

1920ರ ಆಜುಬಾಜಿನ ವರ್ಷಗಳ ಕಾಲವೆಂದರೆ ಅದು ಬ್ರಿಟೀಷರ ಆಳ್ವಿಕೆಯ ಕಾಲವೇ. ದಾಸ್ಯ ಸಂಕೋಲೆಯಿಂದ ಬಿಡುಗಡೆ ಆಗಲು ದೇಶಾದ್ಯಂತ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿ ಕರೆಕೊಟ್ಟಿದ್ದ ಸಂದರ್ಭ. ಕೈ ಮಗ್ಗದ ಬಟ್ಟೆಗಳಿಗೆ 'ಸ್ವದೇಶಿ' ಎಂಬರ್ಥದಲ್ಲಿ ಬೇಡಿಕೆ ಇದ್ದ ದಿನಗಳವು. ಬ್ರಿಟೀಷರ ದಬ್ಬಾಳಿಕೆ ನಡುವೆ ಕದ್ದು ಮುಚ್ಚಿ ನೇಕಾರಿಕೆಯ ಹತ್ತಿ ಬಟ್ಟೆಗಳನ್ನು ಸ್ವಾಭಿಮಾನದ ಪ್ರತೀಕವಾಗಿ ಧರಿಸಿ ಹೆಮ್ಮೆ ಪಟ್ಟುಕೊಂಡವರು ಹಳ್ಳಿ ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಸಾಕಷ್ಟು ಪ್ರಮಾಣದಲ್ಲೇ ಸಿಕ್ಕುತ್ತಿದ್ದರು. ಸಣ್ಣಪುಟ್ಟ ಪ್ರತಿಭಟನೆ, ಚಳವಳಿ, ಘೋಷಣೆಗಳಿಂದಾಗಿ ಹಲವರು ಜೈಲು ಸೇರಿದರು.

ಹಿಂದೂಸ್ತಾನದ ಕಲ್ಪನೆಯಲ್ಲಿ ಅಖಂಡ ಭಾರತವೆಂಬ ಕಲ್ಪನೆಯಿನ್ನೂ ಬೇರೂರದ ದಿನಗಳಲ್ಲಿ ಕರ್ನಾಟಕದ ರಾಯಚೂರು ಆಗ ಹೈದರಾಬಾದಿನ ನಿಜಾಮರ ಆಳ್ವಿಕೆಯನ್ನು ಸಹಿಸಿಕೊಂಡ ಪ್ರದೇಶವಾಗಿತ್ತು. ಕನ್ನಡ ಮಾತೃಭಾಷೆ ವಾತಾವರಣದಲ್ಲಿ ಉರ್ದು, ಹಿಂದಿ, ತೆಲುಗು ಕೆಲಮಟ್ಟಿನ ಮರಾಠಿ ಭಾಷೆಗಳು ಮಾತೃಭಾಷೆ ಕನ್ನಡದಷ್ಟೇ ಪ್ರಬಲವಾಗಿದ್ದವು. ಹೀಗಿದ್ದೂ ಗ್ರಾಮೀಣ ಪ್ರದೇಶದಲ್ಲಿ ಕನ್ನಡ ಭಾಷೆಗೆ ಪ್ರಾಶಸ್ತ್ಯ ಇದ್ದೇ ಇತ್ತು. ಗ್ರಾಮಗಳ ಹಬ್ಬ-ಹರಿ ದಿನಗಳಲ್ಲಿ ವಿವಿಧ ವೇಷಭೂಷಣಗಳಿಂದ ಜಾನಪದ ಹಾಡು, ನಾಟಕಗಳ ಹಾಡು ಹಾಡುತ್ತ, ಕುಣಿಯುತ್ತ ಮನರಂಜನೆ ಸೃಷ್ಟಿಸಿಕೊಂಡು ಆನಂದಿಸುತ್ತಿದ್ದರು. *

ಕಚ್ಚೆ, ಪಂಚೆ, ಜುಬ್ಬ ಅಥವಾ ಬನಿಯನ್ ಧರಿಸಿ, ತಲೆಗೆ ಗಾಂಧಿ ಟೊಪ್ಪಿಗೆಯನ್ನೋ, ದಪ್ಪ ರುಮಾಲನ್ನೋ ಸುತ್ತಿದ ನಾಡ ಅಭಿಮಾನ ಪಡುವ ಗ್ರಾಮೀಣರು ವಿಶಿಷ್ಟವಾಗಿ ಕಾಣುತ್ತಿದ್ದರು. ಇಂಥ ವಿಶಿಷ್ಟತೆಗೆ ರಾಯಚೂರು ಜಿಲ್ಲೆ ಕುಷ್ಟಗಿ ತಾಲ್ಲೂಕು ಹನುಮ ಸಾಗರವೂ ಪಾತ್ರವಾಗಿತ್ತು. ಆರುನೂರರಿಂದ ಏಳುನೂರು ಮನೆಗಳು, ದೊಡ್ಡ ಗ್ರಾಮದಲ್ಲಿ ನೇಕಾರರೇ ಹೆಚ್ಚು. ಊರೊಳಗೆ ಕಾಲಿಟ್ಟರ ಮಗ್ಗಗಳದ್ದೇ ಸದ್ದು, ಈ ಸದ್ದಲೇ ಸಂಗೀತ - ನಾಟಕಗಳಿಗೂ ತನ್ಮಯತೆ ಪಡೆವ ಮನಸ್ಸುಗಳು ಅರಳುತ್ತಿದ್ದವು. ಪೌರಾಣಿಕ, ಐತಿಹಾಸಿಕ ನಾಟಕಗಳ ಹಾಡು - ಸಂಭಾಷಣೆಗಳ ಮೆಲುಕು ಹಾಕುತ್ತ ಮಗ್ಗದ ನೂಲಿನಲ್ಲಿ ಕೈ ಕುಶಲತೆಯಿಂದ ಮೈ ಬಗ್ಗಿಸಿ ಬಣ್ಣ - ಆಕಾರದಲ್ಲಿ ನೇಯ್ದ ಶ್ರಮದ ಬಟ್ಟೆಯೇ ಬದುಕೆಂಬ ಬಂಡಿಗೆ ಆಧಾರ ಸ್ತಂಭ.

ಇಂಥ ನೇಯ್ಗೆಯನ್ನೇ ವೃತ್ತಿಯಾಗಿಸಿಕೊಂಡ ಹನುಮಸಾಗರದ ಯಮುನಪ್ಪ ಹಾಗೂ ನಾಗರತ್ನಮ್ಮ ಅವರಿಗೆ ಮೂವರು ಗಂಡು ಮಕ್ಕಳು. ಮೊದಲನೇ ಮಗ ಚಂದ್ರಪ್ಪ, ಎರಡನೆಯವರು ತಿಪ್ಪರಾಜು, ಮೂರನೆಯವರು ರಾಮಚಂದ್ರಪ್ಪ.

## ಭಕ್ತ ಪ್ರಹ್ಲಾದ ಹಾಗೂ ತಿಪ್ಪರಾಜು

ಶ್ರಮ ಕಾಯಕದ ಕುಟುಂಬದಲ್ಲಿ ಹುಟ್ಟಿ ಬೆಳೆದ ಮೂವರಲ್ಲಿ ತಿಪ್ಪರಾಜುವಿಗೆ ಕಲೆಯಲ್ಲಿ ಹೆಜ್ಜೆ ಹಾಕಲು ಈ ದಂಪತಿಗಳ ಪ್ರೋತ್ಸಾಹ, ಮುಂದೆ ಮಗ ಈ ಕಲೆಯನ್ನೇ ವೃತ್ತಿಯಾಗಿ ಸ್ವೀಕರಿಸುತ್ತಾನೆಂಬ ದಾರಿ ಕಂಡಾಗ ಸಣ್ಣ ಪ್ರತಿರೋಧ, ಬಣ್ಣ ಹಚ್ಚಿದ ರಂಗ ಕಲಾವಿದನಾಗಿ ಬೆಳೆಯಲು ತಂದೆ - ತಾಯಿಗಳ ವಿರೋಧ.

ಆಗ ಹನುಮಸಾಗರದಲ್ಲಿದ್ದದ್ದು ಮುಲ್ಕಿ (ಏಳನೇ) ತರಗತಿ ಮಾತ್ರ. ಮನೆಯ ಬಡತನದಿಂದಾಗಿ ಬೇರೆ ಊರಿಗೆ ಹೋಗಿ ಓದಲು ತಿಪ್ಪರಾಜುವಿಗೆ ಸಾಧ್ಯವಾಗಲಿಲ್ಲ. ಅಲ್ಲಿಗಾಗಲೇ ತನ್ನ ಏಳನೇ ವಯಸ್ಸಿನಲ್ಲೇ ಊರಲ್ಲಿದ್ದ ಅಮೇಚೂರ್ ನಾಟಕ ತಂಡದಲ್ಲಿ 'ಭಕ್ತಪ್ರಹ್ಲಾದ' ನಾಟಕದ ಪ್ರಹ್ಲಾದನ ಪಾತ್ರ ಮಾಡಿ ಭಾರೀ ಮೆಚ್ಚಿಗೆ ಗಳಿಸಿದ್ದ. ಬಾಲಕನಿಗೆ ಮುಂದೆ ಆಗುತ್ತಿದ್ದ ನಾಟಕಗಳಲ್ಲಿ ಬಾಲನಟನ ಪಾತ್ರಗಳು ಖಾಯಂ ಆಗುತ್ತಿದ್ದವು. ಆ ದಿನಗಳಲ್ಲಿ 14-15ರ ವಯೋಮಾನದವರೆಗೆ ಸ್ತ್ರೀಪಾತ್ರಗಳನ್ನು ಮಾಡಿದ್ದುಂಟು.

ಆರಂಭದ ಪ್ರಹ್ಲಾದ ಪಾತ್ರ ಮಾಡಲು ತಂದೆ - ತಾಯಿ ಕೊಟ್ಟ ಬೆಂಬಲ, ಪ್ರೋತ್ಸಾಹ ಮುಂದೆ ಹೆಚ್ಚು ಕಾಲ ಉಳಿಯಲಿಲ್ಲ. ನೇಕಾರ ವೃತ್ತಿಯಲ್ಲಿ ಮಗ ಮುಂದುವರೆಯಲೆಂದು ತಂದೆಯ ಅಪೇಕ್ಷೆ. ಆದರೆ ಹುಡುಗನಿಗೆ ಆಗಲೇ ಬಣ್ಣದ ಗೀಳು ಹತ್ತಿ, ಒಳ್ಳೆ ಕಲಾವಿದನಾಗಬೇಕೆಂಬ ಕನಸು ಬೇರೆ. ಇಲ್ಲಿಗಾಗಲೇ ಮೆಚ್ಚಿಗೆ ಬೇರೆ ಸಿಕ್ಕಿದ್ದರಿಂದ ರಂಗಭೂಮಿಯ ನಟನೆ ಕೈ ಬೀಸಿ ಕರೆಯಿತು.

## ರಂಗಭೂಮಿಯ ಪ್ರೇರಣೆ ಮತ್ತು ಅದರ ಹಿಂದಿನ ಶಕ್ತಿ :

ಅರಸುರವರು ಪ್ರಹ್ಲಾದನ ಪಾತ್ರ ಮಾಡುವಾಗ ಅಲ್ಲೆಲ್ಲಾ ದೊಡ್ಡ ದೊಡ್ಡ ನಟರು ಅಭಿನಯ ಮಾಡ್ತಿದ್ದರು. ಆವಾಗ್ಲೆನೆ ಈರೇಶಿ ಭರಮಪ್ಪನವರ ಕಂಪೆನಿ ಅಂತ ಒಂದಿತ್ತು. ಆ ಕಂಪೆನಿಯಲ್ಲಿ ಖ್ಯಾತ ಹಿಂದೂಸ್ತಾನಿ ಗಾಯಕ ಮಲ್ಲಿಕಾರ್ಜುನ ಮನ್ಸೂರ್‌ರವರು ಪಾತ್ರ ಮಾಡ್ತಿದ್ರು. ಅವರ ಅಣ್ಣ ಬಸವರಾಜಪ್ಪ ಮನ್ಸೂರ್‌ರವರೂ ಪಾತ್ರ ಮಾಡ್ತಿದ್ರು. ಆಮೇಲೆ ಮಂಕಣಿ ಮಾನಪ್ಪನವರೂಂತ ಸ್ತ್ರೀಪಾತ್ರ ಮಾಡ್ತಿದ್ದರು. ಅವರು ಸ್ತ್ರೀಪಾತ್ರ ಮಾಡ್ಕೊಂಡು ಬಂದ್ರೆ ಗಂಡಸ್ರೂಂತ ಗುರ್ತೇ ಹಿಡೀತಿರ್ಲಿಲ್ಲ ಅಂಥಾ ಪಾತ್ರಧಾರಿ ಆತ.

ಆವಾಗ ಲೇಡೀಸೂ ಇದ್ರು. ಅಮಿರ್‌ಬಾಯಿ ಕರ್ನಾಟಕಿ ಅಂತ. ಗೌರ್ಜಾನ್ ಅಂತ. ಅವರು ಬಿಜಾಪುರದವರು. ಆ ಕಂಪನಿ ಒಳ್ಳೆ ಅದ್ದೂರಿಯಾಗಿ ನಡೀತಾ ಇತ್ತು. ಮತ್ತೆ ವಾಮನರಾವ್ ಮಾಸ್ತರ ಕಂಪೆನಿ ಅಂತ ಒಂದಿತ್ತು. ಗರುಡ ಸದಾಶಿವರಾಮರ ಕಂಪೆನಿ ಅಂತ ಇತ್ತು. ಈ ವಿಷಯಗಳನ್ನೆಲ್ಲಾ ಅರಸುರವರು ಚಿಕ್ಕಂದಿನಲ್ಲೇ ಕೇಳುತ್ತಲೇ ಇದ್ದರು. ಹೀಗೆ ಕೇಳಿದಾಗ, ಅವರೂರಿಂದ ಇಳಕಲ್‌ಗೆ ಹೋಗಿ ಕದ್ದು ನಾಟಕ ನೋಡ್ಕೊಂಡು ಪುನಃ ಬೆಳಗ್ಗೆ ಬಂದು ಮನೆಯಲ್ಲಿ ಮಲ್ಕೋತಿದ್ರು. ಅಷ್ಟು ಅವ್ರಿಗೆ ನಾಟಕದ ಹುಚ್ಚಿತ್ತು.

ಹೀಗೆ ಇವೆಲ್ಲಾ ನಾಟಕಗಳನ್ನು ನೋಡ್ಕೊಂಡು ಬಂದಾಗೆಲ್ಲಾ "ನಾನೂ ಒಬ್ಬ ನಟನಾಗಬೇಕಲ್ಲಾ, ನಾನೂ ಒಬ್ಬ ಕಲಾವಿದನಾಗಬೇಕಲ್ಲಾ' ಎಂದು ಅವರ ಮನಸ್ಸಿನಲ್ಲಿ ವ್ಯಥೆಯಿತ್ತು.

ಮುಂದೆ ಬಾಲನಟನ ಮೂಲಕ ಪ್ರವೇಶ ಪಡೆದು ರಂಗಭೂಮಿ ಕನಸಲ್ಲಿ ವಿಹರಿಸತೊಡಗಿದ್ದರು. ಆ ಪಾತ್ರ ಮಾಡಿದ್ದಾಗ ಜನಗಳ ಮೆಚ್ಚಿಗೆ ಸಿಕ್ಕಿತು. ಪ್ರಹ್ಲಾದನ ಪಾತ್ರಕ್ಕೆ ಸಿಕ್ಕ ಪ್ರವೇಶ ಹಾಗೇ ಮುಂದುವರೆಯಿತು. ಅವರು ಸ್ನೇಹಿತರೆಲ್ಲಾ ಕೂಡಿಕೊಂಡು ವರ್ಷಾ - ವರ್ಷಾ ಅಮೆಚೂರ್ಸ್‌ನಲ್ಲಿ ಪಾತ್ರ ಮಾಡ್ತಾನೇ ಇದ್ರು. ಹುಡುಗು ಪ್ರಾಯದಲ್ಲಿ ಆವಾಗ ಇದನ್ನೆಲ್ಲಾ ಅವರು ಕೇಳಿದ್ದರು. ಕೇಳಿ, ನಾವೂ ಹಾಗಾಗ್ಬೇಕಲ್ಲಾ, ನಾವೂ ಅಂಥಾ ಕಲಾವಿದರಾಗಬೇಕಲ್ಲ ಅಂತ ಅಂದ್ಕೊಳ್ತಿದ್ರು.

ಹದಿನಾರು - ಹದಿನೇಳರ ವಯೋಮಾನದಲ್ಲಿ ಸಂಗೀತಗಾರರ ದನಿಗೆ ದನಿಗೂಡಿಸುತ್ತ, ನಾಟಕ ತಂಡದವರ ಜೊತೆ ಹೆಜ್ಜೆ ಹಾಕುತ್ತ ಹಾವಭಾವಗಳನ್ನು ಅಭಿನಯದ ಚೌಕಟ್ಟಿಗಿಟ್ಟು ಪ್ರಯೋಗ ನಡೆಸಿ ಯಶಸ್ವಿ ಆಗಿದ್ದ ತಿಪ್ಪರಾಜುವಿಗೆ ತಂದೆ, ಮದುವೆಯೆಂಬ ಮೂಗುದಾರ ಹಾಕಿದರೆ ಸರಿ ಹೋಗಬಹುದೆಂದು ನಿಶ್ಚಯಿಸಿದರು.

ಹದಿಹರೆಯದ ಹದಿನೆಂಟರ ಪ್ರಾಯದಲ್ಲಿ ಹೇಮಾವತಿ ಅವರೊಂದಿಗೆ ತಂದೆ - ತಾಯಿಗಳು ಮದುವೆಯನ್ನು ನೆರವೇರಿಸಿದರು. ಪ್ರಪಂಚದ ಆಗುಹೋಗುಗಳಿಗೆ ಇನ್ನೂ ತೆರೆದುಕೊಳ್ಳಬೇಕಾದ ವಯಸ್ಸಿನಲ್ಲಿ ಸಂಸಾರವೆಂಬ ಬಂಧನದಲ್ಲಿ ಸಿಲುಕಿ ಹೊಸ ಬದುಕಿನ ಆವಿಷ್ಕಾರಕ್ಕೆ ತಿಪ್ಪರಾಜು ನಾಂದಿ ಹಾಡಿದರು.

ಆದರೆ ತಂದೆ ಯಮುನಪ್ಪ ಭಾವಿಸಿದ್ದಂತೆ ಎಲ್ಲವೂ ಸರಿ ಹೋಗಲಿಲ್ಲ. ಮಗ ತನ್ನದೇ ದಾರಿ ಕಂಡುಕೊಳ್ಳಲು ಮತ್ತೆ ನಾಟಕ ಕಂಪನಿಗಳ ಕಡೆ ಆಸಕ್ತಿ ತೋರಿದ. ಇದರಿಂದ ತಂದೆಗೂ ಬೇಸರವಾಗಿ ಸಾಕಷ್ಟು ಉಪದೇಶ ಮಾಡಿ, "ನೀನೀಗ ಸಂಸಾರಸ್ಥ, ಆ ಬಣ್ಣದ ಜನರ ಜೊತೆ ಸಂಬಂಧ, ಸಂಪರ್ಕ ಬಿಟ್ಟು ಬಿಡು" ಎಂದು ಗದರಿದರು.

ಬಾಲ್ಯದಲ್ಲೇ ಮುಖಕ್ಕೆ ಹಚ್ಚಿದ್ದ ಬಣ್ಣ ಯೌವನದಲ್ಲೂ ರಂಗಾಗಿ ಕಂಡಿದ್ದರಿಂದಲೋ ಏನೋ ತಿಪ್ಪರಾಜು, ತನ್ನ ತಂದೆ ಮಾತಿಗೆ ಲಕ್ಷ್ಯ ಕೊಡಲಿಲ್ಲ. ತಂದೆಗೆ ಎಲ್ಲಿಲ್ಲದ ಕೋಪ. ಕೊನೆಗೊಂದು ನಿರ್ಧಾರಕ್ಕೆ ಬಂದು "ಬೇರೆ ಮನೆ ಮಾಡಿ, ನಿನ್ನ ಸಂಸಾರ ಹೂಡು" ಎಂದು ಆಜ್ಞೆ ಮಾಡಿದರು.

## ವೃತ್ತಿ ಕಂಪನಿಗೆ ಪ್ರಥಮ ಕರೆ ಹಾಗೂ ಬದುಕಲ್ಲಿ ಕಂಡ ಫೇಲ್!

ಮನಸ್ಸು ನೊಂದುಕೊಂಡರೂ ಇಪತ್ತರ ಒಳಗಿನ ಹುಡುಗು ಪ್ರಾಯದಲ್ಲೇ ಬೇರೆಡೆ ಸಂಸಾರ ಮಾಡುವ ಜವಾಬ್ದಾರಿ ತಿಪ್ಪರಾಜು ಮೇಲೆ ಬಿತ್ತು. ಈ ಸಂದರ್ಭದಲ್ಲೇ ಪತ್ನಿ ಹೇಮಾವತಿ ಗರ್ಭಿಣಿಯಾದರು. ಹೆರಿಗೆಗೆಂದು ತವರು ಮನೆಗೆ ಹೋದ ಸಂದರ್ಭ. ತಮ್ಮ ಆಸಕ್ತಿಯ ರಂಗಭೂಮಿಯತ್ತ ಮತ್ತಷ್ಟು ಗರಿಬಿಚ್ಚಿಕೊಳ್ಳಲು ಸಹಾಯವಾಯಿತು. ಒಬ್ಬರೇ ಮನೆಯಲ್ಲಿದ್ದ ಸಂದರ್ಭದಲ್ಲಿ ವೃತ್ತಿರಂಗಭೂಮಿಯ ಕರೆ ಬಂತು. ತಿಪ್ಪರಾಜು ಆ ಕಡೆ ಹೊರಟವರು ಸಂಸಾರದ ಕಡೆ ಗಮನ ಹರಿಸಲಾಗಲಿಲ್ಲ. ಈ ಬಗ್ಗೆ ಅವರು ಹೇಳುತ್ತಾರೆ: "ಬದುಕಿನಲ್ಲಿ ನಾನು ಬಹಳ ಫೇಲ್ ಆದೆ!"

ಜಯಲಕ್ಷ್ಮಿ ನಾಟ್ಯಸಂಘ ಎಂಬ ವೃತ್ತಿ ಕಂಪನಿ ಜೊತೆ ಹೊರಟವರು ಅವರು ಕೊಟ್ಟ ಪಾತ್ರ ನಿರ್ವಹಿಸಿದರು. ಪ್ರೇಕ್ಷಕರು ಹಾಗೂ ಕಂಪನಿಯವರು ಅಭಿನಯ ಮೆಚ್ಚಿದರು. ಅವರ ಪ್ರೀತಿಗೆ ಪಾತ್ರರಾದರು. ತಿಪ್ಪರಾಜು ಮುಂದೆ ಕೂಡಲ ಸಂಗಮದಲ್ಲಿ ಜಾತ್ರೆ ನಡೆಯುತ್ತಿದ್ದರಿಂದ ಅಲ್ಲಿಗೆ ಹೊರಟರು. ಕಂಪನಿ ಅಲ್ಲಿ ಕ್ಯಾಂಪ್ ಹಾಕಿ ನಾಟಕ ಪ್ರದರ್ಶಿಸಿತು. ಜನ ಮೆಚ್ಚಿದರೂ, ಕಲೆಕ್ಷನ್ ಚನ್ನಾಗಿದ್ದರೂ ಸಿಕ್ಕಬೇಕಾದ ಸಂಭಾವನೆ ಸಿಕ್ಕಲಿಲ್ಲ. ಹಣ. ಕೇಳಿದರೆ ದೌರ್ಜನ್ಯದ ಮಾತುಗಳು ಕಂಪನಿ ಕಡೆಯಿಂದ ಬಂದವು. ತಿಪ್ಪರಾಜು ಅವರಿಗೆ ನಿರಾಶೆಯಾಯಿತು. ಆ ಕಂಪನಿಯಿಂದ ಹೇಳದೇ ಕೇಳದೇ ಊರಿಗೆ ವಾಪಸಾದರು.

ವೃತ್ತಿ ಕಂಪನಿಗಳಲ್ಲಿ ಆಗ ಪೌರಾಣಿಕ ನಾಟಕಗಳೇ ಹೆಚ್ಚು ಪ್ರದರ್ಶಿತವಾಗುತ್ತಿದ್ದವು. ಐತಿಹಾಸಿಕ ನಾಟಕಗಳು ನಡೆಯುತ್ತಿದ್ದರೂ ಹೆಚ್ಚಿನ ಖರ್ಚಿಗೆ ಹೆದರಿ ಅಲ್ಲೊಂದು ಇಲ್ಲೊಂದು ಪ್ರದರ್ಶಿತವಾಗುತ್ತಿದ್ದವು. ಇದರಲ್ಲಿ ಗುಬ್ಬಿವೀರಣ್ಣನವರ ಕಂಪನಿ ಪ್ರಖ್ಯಾತವಾಗಿತ್ತು. ರಂಗ ಭೂಮಿ ಮೇಲೆ ನಿಜವಾದ ಆನೆ, ಒಂಟೆ, ಕುದುರೆಗಳನ್ನೇ ತಂದು ಪ್ರದರ್ಶಿಸುತ್ತಿದ್ದುದಲ್ಲದೇ, ನಿಜವಾದ ಗಿಡಮರಗಳನ್ನೇ ತಂದು ನಿಲ್ಲಿಸುತ್ತಿದ್ದುದು ಆಗಿನ ವೈಭವಗಳಲ್ಲೊಂದು.

ತಿಪ್ಪರಾಜು ವೃತ್ತಿ ಕಂಪನಿಗೆ ಹೋದಾಗ "ಭೌಮಾಸುರ" ಎಂಬ ಪೌರಾಣಿಕ ನಾಟಕ ಪ್ರದರ್ಶಿತವಾಯಿತು. ನರಕಾಸುರನ ಕುರಿತ ಕಥೆ ಅದು. ನಾಟಕದಲ್ಲಿ ಪ್ರಮುಖವಾದ ಆ ಪಾತ್ರವನ್ನೇ ತಿಪ್ಪರಾಜು ನಿರ್ವಹಿಸಿ ಯಶಸ್ವಿಯೂ ಆದರು. ಆರ್ಥಿಕ ಭಿನ್ನಾಭಿಪ್ರಾಯದಿಂದಾಗಿ ಊರಿಗೆ ಮರಳಿದರು. ಕೆಲ ದಿನಗಳಲ್ಲಿ ಮತ್ತೊಂದು ಅವಕಾಶ ಹುಡುಕಿ ಬಂತು. ಯಾವ ಕಂಪನಿ ತೊರೆದು ಬಂದಿದ್ದರೋ ಆ ಕಂಪನಿಯಲ್ಲಿದ್ದ ಮಿತ್ರರೊಬ್ಬರು ಮನೆಗೆ ಬಂದು, "ನೀನು ಒಳ್ಳೆ ಕಲಾವಿದ, ಏಕೆ ಮನೆಯಲ್ಲಿರುವೆ. ನನ್ನ ಜೊತೆ ಬಾ" ಎಂದು ಏಣಗಿ ಬಾಳಪ್ಪ ಅವರ ಕಂಪನಿಗೆ ಪರಿಚಯಿಸಿದರು.

## ಏಣಗಿ ಬಾಳಪ್ಪ ಅವರಲ್ಲಿ ಕಂಡ ಪ್ರೀತಿ

ಎಚ್.ಟಿ. (ಹನುಮಸಾಗರ ತಿಪ್ಪರಾಜು) ಎರಡನೇ ಇನ್ನಿಂಗ್ಸ್ ಶುರು ಮಾಡಿದರು. ಏಣಗಿ ಬಾಳಪ್ಪ ವೃತ್ತಿ ರಂಗಭೂಮಿಯ ದೊಡ್ಡ ಹೆಸರು. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಜೀವ ಜೀವಾಳವಾಗಿರುವ ವೃತ್ತಿ ರಂಗಭೂಮಿಗೆ ಜೀವ ಕೊಟ್ಟವರು. ಕಲಾವೈಭವ ನಾಟ್ಯ ಸಂಘ ಏಣಗಿ ಅವರ ಕಂಪನಿ. ಅವರೇ ಅಭಿನಯಿಸುತ್ತಿದ್ದ ಬಸವೇಶ್ವರನ ಪಾತ್ರ ತುಂಬಾ ಜನಪ್ರಿಯವಾಗಿತ್ತು. ಉತ್ತಮ ಕಠಸಿರಿ ಹೊಂದಿ ತಾವೇ ವಚನಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. "ಕಲ್ಯಾಣ ಕ್ರಾಂತಿ'ಯಲ್ಲಿ ಏಣಗಿ ಅವರು ಬಸವೇಶ್ವರರಾದರೆ, ಎಚ್.ಟಿ. ಮಧುವರಸನ ಪಾತ್ರ ಮಾಡುತ್ತಿದ್ದರು. ಸ್ವಲ್ಪ ದಿನ ಆದ ಮೇಲೆ ಕೊಂಡಿ ಮಂಚಣ್ಣ ಹಾಗೂ ಬಿಜ್ಜಳನ ಪಾತ್ರವನ್ನೂ ಮಾಡಿದರು.

ಇದೇ ಕಂಪನಿ "ದ್ರುಪದ ಕನ್ಯ" ಎಂಬ ನಾಟಕ ಪ್ರದರ್ಶಿಸಿತು. ಇದರಲ್ಲಿ ಅರ್ಜುನನ ಪಾತ್ರ ಎಚ್.ಟಿ. ಅವರನ್ನು ಹುಡುಕಿ ಬಂತು. ಇದು ತುಂಬಾ ತೃಪ್ತಿ ಕೊಟ್ಟ ಪಾತ್ರ. "ಏಣಗಿ ಬಾಳಪ್ಪನವರಿಗೆ ನನ್ನ ಮೇಲೆ ತುಂಬಾ ಪ್ರೀತಿ. ಹುಡುಗ ನೋಡಲು ತುಂಬಾ ಚೆನ್ನಾಗಿದ್ದಾನೆ ಅಂತ ಅವರು ಅಭಿನಯಿಸುತ್ತಿದ್ದ 'ಕುಂಕುಮ' ನಾಟಕದ ಭರಣನ ಪಾತ್ರ ಕೊಟ್ಟರು. ಇದು ನಾಯಕನ ಪಾತ್ರ. ಏಣಗಿ ಬಾಳಪ್ಪ ಏನು ಯೋಚಿಸಿದ್ರು ಅಂದ್ರೆ ಮುಂದೆ ತಮಗೆ ತೊಂದರೆ ಆದ್ರೆ ಈ ಪಾತ್ರ ಮಾಡಲು ಯೋಗ್ಯರೊಬ್ಬರು ಬೇಕು ಅಂದ್ಕೊಂಡಿದ್ದರು." ಮುಂದೆ ಎಚ್.ಟಿ. ಅವರಿಗೆ ಅದನ್ನ ಕೊಟ್ಟರು. ತಾವು ಅಭಿನಯಿಸುತ್ತಿದ್ದ ಅನೇಕ ಪಾತ್ರಗಳನ್ನೂ ಕಲಿಸಿದರು.

ಸುಮಾರು ನಲವತ್ತು ಜನರನ್ನು ಏಣಗಿ ಬಾಳಪ್ಪ ಅವರು ತಮ್ಮ ಕಂಪನಿಯಲ್ಲಿ ಸಂಭಾಳಿಸಬೇಕಿತ್ತು. ಎಚ್.ಟಿ. ಅವರು ಆ ಕಂಪನಿ ಸೇರಿದ ಸಂದರ್ಭ ಸ್ತ್ರೀ ಪಾತ್ರಗಳಿಗೆ ಸ್ತ್ರೀಯರೇ ಅಭಿನಯಿಸುವ ಕಾಲ ಪಕ್ವವಾಗಿತ್ತು. 'ಭಕ್ತ ಕುಂಬಾರ' ಎಂಬ ನಾಟಕ, ಸಾಮಾಜಿಕ ಪರಿಣಾಮ ಬೀರುವ ನಾಟಕಗಳನ್ನು ಏಣಗಿ ಅವರ ಕಂಪನಿ ಅಭಿನಯಿಸುತ್ತಿತ್ತು.

ಎಷ್ಟೇ ಚನ್ನಾಗಿದ್ದರೂ ಏನಾದ್ರೂ ತೊಡಕುಗಳು ಬಂದೇ ಬರುತ್ತವೆ. ಒಮ್ಮೆ ಕಂಪನಿಯಲ್ಲಿದ್ದ ಸಿರಸಿ ರಾಮಣ್ಣ ಎಂಬುವರಿಗೂ ಎಚ್.ಟಿ. ಅವರಿಗೂ ಮೇಕಪ್ ರೂಂನಲ್ಲಿ ವಾಗ್ವಾದ ನಡೆಯಿತು. ಅವರು ಏಣಗಿ ಅವರ ಹತ್ರ ದೂರು ಹೊಯ್ದರು. ಬಾಳಪ್ಪನವರಿಗೆ ಧರ್ಮಸಂಕಟ. ಯಾರಿಗೆ ಬೈಯ್ಯೋದು? ಇಬ್ಬರನ್ನೂ ಕರೆದು ಸಮಾಧಾನ ಮಾಡಿದರು. ಏಕೋ ಅಲ್ಲಿರಲು ಮನಸ್ಸು ಒಪ್ಪದೆ ಎಚ್.ಟಿ. ಎರಡು ದಿನಗಳಲ್ಲಿ ಕಂಪನಿಯಿಂದ ಹೊರ ನಡೆದರು. ಒಟ್ಟು ಮೂರು ವರ್ಷಗಳ ಕಾಲ ಏಣಗಿ ಅವರ ಕಂಪನಿಯಲ್ಲಿದ್ದು ವಿಶಿಷ್ಟ ಅನುಭವ ಪಡೆದವರು. ಅಲ್ಲಿ "ಸಾಕಷ್ಟು ಕಲಿತೆ" ಎಂದು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಏಣಗಿ ಬಾಳಪ್ಪ ಅವರಲ್ಲಿದ್ದ ಒಂದು ದೊಡ್ಡ ಗುಣ ಅಂದ್ರೆ, ಯಾರಾದ್ರೂ ಮದುವೆ ಆದ ಕಲಾವಿದರು ಕಂಪನಿಯಲ್ಲಿದ್ದರೆ ಬಿಡುವು ಮಾಡಿಕೊಂಡು (ಖರ್ಚಿಗೆ ಕಾಸು ಕೊಟ್ಟು) ಊರಿಗೆ ಹೋಗಿ ಬನ್ನಿ ಅಂತ ಕಳುಹಿಸಿ ಕೊಡುತ್ತಿದ್ದರು. ಹೆಂಡತಿ, ಮಕ್ಕಳ ಕಡೆ ಗಮನಹರಿಸಿ, ಅಲ್ಲಿ ಇಲ್ಲಿ ಚೈನಿ ಹೊಡೆದು ಸಂಸಾರ ಹಾಳು ಮಾಡಿಕೊಳ್ಳಬೇಡಿ ಎಂದು ಒಳ್ಳೆ ದಾರಿ ತೋರಿಸುತ್ತಿದ್ದರು. ಸಂಸಾರದಿಂದ ಬೇರೆ ಆಗಬಾರದು ಅನ್ನೋದು ಬಾಳಪ್ಪ ಅವರಲ್ಲಿತ್ತು. ಪ್ರೀತಿಯಿಂದ ಮಕ್ಕಳಂತೆ ನೋಡಿಕೊಳ್ತಾ ಇದ್ರು. ಅಂಥಾ ದೊಡ್ಡ ಗುಣ, ಅಂಥಾ ಪ್ರೀತಿ ತುಂಬಾ ಕಡಿಮೇನೆ - ಎಂಬುದು ಎಚ್.ಟಿ. ಅನುಭವದ ಮಾತು.

# ಗೋಕಾಕ್ ಕಂಪನಿಗೆ ಪ್ರವೇಶ

ಏಣಗಿ ಅವರ ಕಂಪನಿಯಿಂದ ಹೊರಬಂದು ಗೋಕಾಕ್ ಕಂಪನಿಗೆ ಸೇರಿದ ಎಚ್.ಟಿ. ವೃತ್ತಿ ನಾಟಕದ ಮೂರನೇ ಇನ್ನಿಂಗ್ಸ್ ಆರಂಭಿಸಿದರು. ಆಗ ಈ ಕಂಪನಿ ಚಿತ್ರದುರ್ಗದಲ್ಲಿ ಕ್ಯಾಂಪ್ ಮಾಡಿತ್ತು. ಅಲ್ಲಿ ಒಳ್ಳೆ ಒಳ್ಳೆ ಕಲಾವಿದರಿದ್ದರು. ಒಳ್ಳೆ ಒಳ್ಳೆ ಸೀನರಿಗಳು, ಕತೆಗೆ ತಕ್ಕಂತೆ ಸೆಟ್ ಅಲ್ಲಿತ್ತು. ಓಬಳೇಶ್ವರ್, ಎಲಿವಾಳ್ ಸಿದ್ದಯ್ಯ, ಮಾರ್ತಾಂಡರಾವ್, ರಟ್ಟೆಹಳ್ಳಿ ಗಂಗಾಧರಪ್ಪ ಮುಂತಾದವರು ಅಲ್ಲಿದ್ದರು. ಆ ಕಂಪೆನಿಗೆ ಬಂದ ಕೂಡಲೇ ಅಲ್ಲಿದ್ದ ಇವರ ಬಾಲ್ಯ ಸ್ನೇಹಿತ ಓಬಳೇಶ್ವರ್‌ರವರು,

"ಓಹೋಹೋ ಬನ್ರೀ ಬನ್ರೀ ಬನ್ರೀ ನೀವು ಬಂದದ್ದು ತುಂಬಾ ಸಂತೋಷ" ಅಂತ ಅವರನ್ನು ಆತ್ಮೀಯತೆಯಿಂದ ಬರಮಾಡಿಕೊಂಡು ಮಾಲೀಕರಿಗೆ ಪರಿಚಯ ಮಾಡಿಕೊಟ್ಟರು. ಅಲ್ಲಿಂದ "ಇರ್‍ಲಿ ಈ ಹುಡುಗ" ಅಂತ ಹೇಳಿ ಅವರಲ್ಲಿ ಇಟ್ಟು ಕೊಂಡರು.

ಆವಾಗ ಆರಂಭದಲ್ಲಿ ಇವರಿಗೂ ಮತ್ತು ಓಬಳೇಶ್ವರ್‌ರವರಿಗೂ ಪಾತ್ರ ಇರಲಿಲ್ಲ. ಅವರು ಗೇಟ್‌ನಲ್ಲಿ ನಿಂತ್ಕೊಳ್ತಿದ್ರು. ಹಾಗೇ ನೋಡ್ತಾ ನೋಡ್ತಾ ಅರಸು ಮತ್ತು ಓಬಳೇಶ್ವರ್ ಇಬ್ರೂ ಆಗ ಕಂಪೆನಿಯವರು ಆಡುತ್ತಿದ್ದ 'ಬೆಳ್ಳಿಚುಕ್ಕಿ' ಅನ್ನೋ ನಾಟಕದಲ್ಲಿ ಅಭಿನಯಿಸಿದರು. ಅದು ಪುಟ್ಟ ಪಾತ್ರ. ಅದರಲ್ಲಿ ಸುಮ್ಮೆ ಒಂದು ಸಿನಿಮಾ ಛಾನ್ಸ್ ಕೇಳೋಕೇಂತ ಹೋಗೋ ದೃಶ್ಯ. ಅಲ್ಲಿ ಹೋದಾಗ ಅವರಿಬ್ರೂ ಕೂತ್ಕಂಡು ಏನೋ ಒಂದು ಛಾನ್ಸ್ ಕೇಳ್ಕೊಂಡು ಆ ಸೀನಿಂದ ವಾಪಸ್ ಬರ್ತಾರೆ. ಅಲ್ಲಿ ಗೇಟಿನಲ್ಲಿ ಒಬ್ಬ ನಿಂತ್ಕೊಂಡಿರ್ತಾನೆ. ಆಗ ಅವನು, "ಇದೇನಪ್ಪಾ ಇದು ನಿಮ್ಮ ಡ್ರೆಸ್ಸು? ಇದನ್ನ ನೋಡಿದ್ರೆ ನಿಮಗೆ ಛಾನ್ಸ್ ಕೊಡ್ತಾರಾ?" ಅಂತ ಚುಡಾಯಿಸ್ತಾನೆ.

"ಇದು ಎಂಥಾ ವೇಷ ಗೊತ್ತೇನಪ್ಪಾ?" ಅಂತಾರೆ ಓಬಳೇಶ್ವರ್.

"ಏನ್ರಿ ಇದು?" ಕೇಳ್ತಾನವನು.

"ಇದು ಕರ್ನಾಟಕ ರಂಗಭೂಮಿ ನಟರ ಕೊನೇ ರಿಸಲ್ಟಪ್ಪಾ!" ಅಂತಾರೆ ಅವರು.

ಆ ವಿಷಯ ಕೇಳಿದ ತಕ್ಷಣ ಆ ಮಾಲೀಕರು ಬಂದು ಅಪ್ಕೊಂಡು, "ಓಬಳೀ, ಎಂಥಾ ಮಾತು ಹೊಡೀತಿದ್ಯೋ ನೀನು? ಇನ್ನೆಲೆ ಇಲ್ಲೇ ಪಾತ್ರ ಮಾಡಿಕೊಂಡು ಇರ್‍ರಿ" ಅಂತ ಪ್ರಶಂಸೆ ಮಾಡಿ, ಆತನಿಗೆ ಒಳ್ಳೆ ಪಾತ್ರ ಕೊಟ್ಟೇ ಬಿಟ್ರು.

ಅದರ ಜೊತೆಗೆ ಹಾಗೇ ತಿಪ್ಪರಾಜು ಅವರಿಗೂ ಎಲ್ಲಾ ಸಿಕ್ಕಿಬಿಡ್ತು. ಮಾಲೀಕರೇ ತಮ್ಮ ಇಷ್ಟವಾದ ಪಾತ್ರಗಳನ್ನೆಲ್ಲಾ ಅವರಿಗೆ ಕೊಡೋರು, ಪೌರಾಣಿಕದಲ್ಲಿ ಮಾಲೀಕರು - ಕೃಷ್ಣ, ಎಚ್.ಟಿ. - ಅರ್ಜುನ, ಹೀಗೇ ಎಲ್ಲಾ ಪೌರಾಣಿಕದಲ್ಲಿ ಅವರು ಅರ್ಜುನ, ಇವರು ಕೃಷ್ಣ ಹೀಗೇ ಇತ್ತು. ಮಾಲೀಕರು ತುಂಬಾ ಪ್ರೀತಿಯಿಂದ ಅವರಿಗೆಲ್ಲಾ ಪಾತ್ರ ಮಾಡೋ ವೈಖರಿ ಹೇಳ್ಕೊಟ್ರು.

ಚಿತ್ರದುರ್ಗದಲ್ಲಿ ಈ ಕಂಪೆನಿ ಮೂರು ತಿಂಗಳಿತ್ತು. ಅಲ್ಲಿಂದ ಅರಸೀಕೆರೆಗೆ ಬಂದರು. ಅಲ್ಲೊಂದಾರು ತಿಂಗಳಿದ್ರು. ಅಲ್ಲಿಂದ ಕೆ.ಆರ್.ನಗರಕ್ಕೆ ಬಂದು ಅಲ್ಲಿ ಸ್ವಲ್ಪ ದಿವಸ ಇದ್ರು. ಹಾಗೇ ಚಾಮರಾಜನಗರ, ನಂಜನಗೂಡು, ಮೈಸೂರು, ಮಂಡ್ಯ ಎಲ್ಲಾ ಸುತ್ತಿದ್ದರು.

ಗೋಕಾಕ್ ಕಂಪೆನಿಯಲ್ಲಿ ಬರೀ ಪೌರಾಣಿಕ ನಾಟಕಗಳೇ ಪ್ರದರ್ಶನವಾಗುತ್ತಿದ್ದು. ಕುರುಕ್ಷೇತ್ರ, ದ್ರೌಪದೀ ಸ್ವಯಂವರ, ಅಕ್ಷಯಾಂಬರ, ರಕ್ತರಾತ್ರಿ, ಬಾಣಸಿಗ ಭೀಮ - ಹೀಗೇ ಪೌರಾಣಿಕ ನಾಟಕಗಳನ್ನೆಲ್ಲಾ ಆಡ್ತಿದ್ರು. ಒಂದು ಮೂರ್ನಾಲ್ಕು ನಾಟಕ ಸೋಷಿಯಲ್ ಡ್ರಾಮಾ ಆಡ್ತಿದ್ರು. ಮಾನವತಿ ಅಂತ ಒಂದು ನಾಟಕ, ಆದಿತ್ಯ, ಇತ್ಯಾದಿ.

## ತಿಪ್ಪರಾಜು, ಎಚ್.ಟಿ. ಅರಸು ಆದ ಸಂದರ್ಭ

ಅರಸುರವರು ಗೋಕಾಕ್ ಕಂಪೆನಿಯಲ್ಲಿದ್ದಾಗ ಸಿನೆಮಾ ನಿರ್ದೇಶಕರಾಗಿದ್ದ ಶಂಕರ್‌ಸಿಂಗ್ ಅವರು ಒಮ್ಮೆ ನಾಟಕ ನೋಡೋಕ್ಕೆ ಬಂದಿದ್ರು. ಆಗ ಅರಸುರವರ ಪಾತ್ರ ನೋಡಿ,

"ಇವರಿಗೆ ಒಂದು ಛಾನ್ಸ್ ಕೊಡಬೇಕು' ಅಂತ್ಹೇಳಿ ಹೇಳಿಕಳ್ಸಿದ್ರು. ಸಿಂಗ್ ಅವರ ಆಹ್ವಾನದ ಮೇರೆಗೆ ಆಗ ಅವರು ಮೈಸೂರಿಗೆ ಹೋಗಿದ್ದರು. ಆ ಸಂದರ್ಭದಲ್ಲಿ ಕಂಪೆನಿಯ ವ್ಯವಸ್ಥಾಪಕರು ತಿಪ್ಪರಾಜುವಿಗೆ, "ನೀ ತಿಪ್ಪಣ್ಣ ಅಂತಲೋ, ತಿಪ್ಪರಾಜು ಅಂತಲೋ ಹೇಳ್ಬೇಡ ಅಲ್ಲಿ ಆ ಹೆಸರು ಚೆನ್ನಾಗಿಲ್ಲ. ಈಗ ನಾವು ಹ್ಯಾಗಿದ್ರೂ ಮೈಸೂರು ದೇಶದಲ್ಲಿದ್ದೀವಿ. ಹನುಮಸಾಗರ ಅಂದ್ರೆ ಹೆಚ್, ತಿಪ್ಪಣ್ಣ ಅಂದ್ರೆ ಟಿ, ಮೈಸೂರು ನಗರದಿಂದ ಅರಸು ಅಂತ ಇಟ್ಕೊಂಡ್ಬಿಡು. ಅಲ್ಲಿ ಎಚ್.ಟಿ. ಅರಸು ಅಂತ್ಲೇ ಹೇಳು. ಅವರಿಗೆ ಪ್ರಿಯವಾಗುತ್ತೆ ಈ ಹೆಸ್ರು" ಅಂದಿದ್ದರು.

ಆಗಿನಿಂದ ಇದು ಶುರುವಾಯ್ತು. ಅವರು ಮೈಸೂರಿಗೆ ಬಂದಾಗ ಹೆಚ್.ಟಿ. ಅರಸು ಅಂತಲೇ ಹೇಳಿದ್ದರು. ಅಲ್ಲಿ ಅಗ್ರಿಮೆಂಟ್ ಮಾಡಿಕೊಡಬೇಕಾದರೆ ಎಚ್.ಟಿ. ಅರಸು ಅಂತಲೇ ಸಹಿ ಮಾಡಿದ್ದರು. ಗೋಕಾಕ್ ಕಂಪನಿಯಿಂದ ಸಿನಿಮಾ ಪ್ರವೇಶದ ಸಂದರ್ಭದಲ್ಲಿ ಅವರಿಗೆ ಈ ಹೆಸರು ಬಂತು.

## ಕಂದಗಲ್ಲು ಹಣಮಂತರಾಯರ ಸ್ಮರಣೆ

ತಿಪ್ಪರಾಜ್ ಮೊದಲಿಗೆ ತರಬೇತಿ ಹೊಂದಿದ್ದು ಕಂದಗಲ್ ಹಣಮಂತರಾಯರಿಂದ, ಜೊತೆಗೆ ಇಳಕಲ್‌ನಲ್ಲಿ ಅವರದ್ದೊಂದು ಸೆಟ್ಟಿತ್ತು. ಅಲ್ಲಿ ಹಣಮಂತರಾಯರು ನಾಟಕ ಕಲಿಸೋಕೆ ಬರಿದ್ರು. ಆವಾಗ ಅರಸು ಇನ್ನೂ ಚಿಕ್ಕವರು. ಅವರ ಸೇವೆ ಮಾಡೋಕೆ ಶುರು ಮಾಡಿದರು. ಗುರುಗಳು ಅರಸು ಅವರನ್ನು ಪಕ್ಕದಲ್ಲೇ ಕೂಡಿಸಿ ಕೊಳ್ತಿದ್ರು. ಎಲ್ಲಾ ನಟರಿಗೆ ಅವರ ಬಾಯಿಂದ ಹೇಳೋದೆಲ್ಲಾ ಸುಮ್ನೆ ಕೇಳೀ ಕೇಳೀ ಇವರ ತಲೇಲಿ ಉಳಿದುಬಿಟ್ಟಿತ್ತು.

ಅವರೊಂದು ಸಲ ಗುರುಗಳ ಹತ್ತಿರ ಮಾತಾಡಿದಾಗ, ಕೆಲವು ನಾಟಕದ ಡೈಲಾಗ್ ಹೇಳಿದ್ರು. ಇದನ್ನು ಕೇಳಿ, "ಭೇಷ್! ಭೇಷ್!" ಅಂತ ಗುರುಗಳು ಅವರ ಬೆನ್ನು ತಟ್ಟಿದರು.

ಅಲ್ಲಿಂದ ಗೋಕಾಕ್ ಕಂಪೆನಿಯಲ್ಲಿದ್ದಾಗ ಒಂದು ಸಲ ಅಲ್ಲಿಗೇ ಬಂದಿದ್ದರು ಗುರುಗಳು. ಬಂದು "ಚಿತ್ರಾಂಗದಾ" ನಾಟಕದಲ್ಲಿನ ಅರಸುರವರ ಅರ್ಜುನನ ಪಾತ್ರ ನೋಡಿದ್ರು. ಸ್ಟೇಜಿನ ಮೇಲೆ ಬಂದು ಅವರನ್ನು ಅಪ್ಪಿಕೊಂಡು,

"ನೀನು ಮುಂದೆ ಹೀಗಾಯ್ತಿಯಾ ಅಂತ ನಂಗೆ ಗೊತ್ತಿತ್ತು ಕಣಯ್ಯ. ಬಹಳ ಚೆನ್ನಾಗಿ ಪಾತ್ರ ಮಾಡಿದ್ಯಪ್ಪಾ, ಅರ್ಜುನನ ಪಾತ್ರ ಅದ್ಭುತವಾಗಿತ್ತು" ಅಂತಂದ್ರು.

ಕಲಾವಿದನಿಗೆ ಇದಕ್ಕಿಂತ ಇನ್ನೆಂಥಾ Certificate ಬೇಕು?

ಅಂದು ಅವರಿಗೆ ಒಂದು ಹಾರ ಹಾಕಿ, ಆಗಿನ ಕಾಲಕ್ಕೆ ದೊಡ್ಡ ಮೊತ್ತ ಎನ್ನಿಸಿಕೊಂಡಿದ್ದ 25 ರೂಪಾಯಿಗಳನ್ನು ಕೈಗೆ ಕೊಟ್ಟು,

“ಇದು ನನ್ನ ಗುರುಕಾಣಿಕೆ ಗುರುಗಳೇ” ಅಂತ ಅವರಿಗೆ ನಮಸ್ಕರಿಸಿದ್ದರು.

“ಇವತ್ತು ನಾವು ಚೆನ್ನಾಗಿ ಮಾತಾಡ್ತೀವಂದ್ರೆ, ಆ ಕಂದಗಲ್ ಹನುಮಂತಯ್ಯನವರ ಶ್ರಮಾನೇ ನಮಗೆ ಸಾರ್ಥಕ ಮಾಡಿದೆ, ಜೊತೆಗೆ ಅವರ ಆಶೀರ್ವಾದ ಸದಾ ನನ್ನ ಮೇಲಿದೆ” ಎಂದು ಕೃತಜ್ಞತೆಯಿಂದ ಸ್ಮರಿಸುತ್ತಾರೆ ಅರಸು.

## ಗುರುಸೇವೆಯಿಂದ ದೊರೆತ ಫಲ

ವಿದ್ಯೆ ಕಲಿಸಿದ ಗುರುಗಳಾದ ಕಂದಗಲ್ ಹಣಮಂತರಾಯರಿಗೆ ಅವಿಚ್ಛಿನ್ನವಾಗಿ ಸೇವೆಗೈದರು. ಗುರುಗಳು ಮಲಗಿದ್ದಾಗ ಅವರಿಗೆ ನಿದ್ದೆ ಬರೋತನಕ ಅವರ ಕಾಲು, ಮೈ, ಕೈ ಒತ್ತುತ್ತಿರೋದು, ಅವರ ಬಟ್ಟೆಗಳನ್ನು ಒಗೆಯೋದು, ಊಟ, ತಿಂಡಿ ನೋಡಿಕ್ಕೊಳ್ಳೋದು - ಹೀಗೆ ಅವರ ಎಲ್ಲಾ ಸೇವೆ ಮಾಡುತ್ತಿದ್ದುದನ್ನು ಅರಸು ನೆನೆಯುತ್ತಾರೆ. ಗುರುಗಳು ಬಹಳ ಪ್ರೀತಿಯಿಂದ ಅವರಿಗೆ, “ನೀನೊಬ್ಬ ಒಳ್ಳೆ ನಟ ಆಗ್ಲೀಯಪ್ಪಾ ಮುಂದೆ,” ಎಂದು ಹರಸುತ್ತಿದ್ದರು.

ಆಗಿನ ಕಾಲದಲ್ಲಿದ್ದ ದೊಡ್ಡ ದೊಡ್ಡ ನಟರನ್ನು ಅವರ ಪಾತ್ರಗಳನ್ನು ನೆನಪಿಸಿಕೊಂಡು “ನಾನು ಇವರ ಹಾಗೆ ಯಾವತ್ತು ಪಾತ್ರ ಮಾಡ್ತೀನಿ?” ಅಂದುಕೊಳ್ಳುತ್ತಿದ್ದರು ತಿಪ್ಪರಾಜ್. ಹಂದಿಗನೂರು ಸಿದ್ದರಾಮಪ್ಪನವರು, ಹಳ್ಳಿಗುಡಿ ಸದಾಶಿವಪ್ಪನವರು, ಭೀಮರಾವ್ ಖಾಳೆ, ಖಟ್ಟಟಿ ವಿಠ್ಠಲ್‌ರಾವ್ ಇಂಥಾ ಮಹಾನ್ ಮಹಾನ್ ನಟರ, ಕವಿಗಳ ದಂಡೇ ಅಲ್ಲಿತ್ತು. ಪೌರಾಣಿಕದಲ್ಲಿ ಇವರೆಲ್ಲ ಅಭಿನಯಿಸುವಾಗ ಆ ಒಂದು look, ಅವರ movement, ಅವರ ಹಾವಭಾವಗಳನ್ನ ನೋಡ್ದಾಗ ಎದುರಿಗೆ ಕುಳಿತ ಪ್ರೇಕ್ಷಕರನ್ನು ಮೋಡಿ ಮಾಡಿ ಒಗೆದ್ಹಂಗಿರುತ್ತಿತ್ತು.

ಅವರೆಲ್ಲರ ಅಮೋಘ ನಟನೆಯನ್ನು ನೋಡಿದ ತಿಪ್ಪರಾಜ್‌ರವರಿಗೆ 'ಅದರಂತೆ ಇನ್ನು ಪಾತ್ರ ಮಾಡೋಕ್ಕೆ ಬರುತ್ತಾ ನಮಗೆ? ಮಾಡೋಕ್ಕೆ ಕಲೀತೀವಾ ನಾವು?” ಅನ್ನಿಸ್ತಿತ್ತು. ಈ ಭಾವನೆಗಳಿಂದಾಗಿ ಅವರೆಲ್ಲರ ಮೇಲೆ ಶ್ರದ್ಧೆ ಹೆಚ್ಚಾಗಿತ್ತು. ಹೀಗೆಲ್ಲ ನೋಡಿ ನೋಡಿ, ಯಾರೂ ಇಲ್ಲದಾಗ ಊರಿನಿಂದ ದೂರ ಹೋಗೋದು, ಅವರ್ಹಾಗೇ ಮಾಡೋದು, ಅವರ್ಹಾಗೇ ಕೂಗಾಡೋದು, ಹೀಗೆಲ್ಲಾ ಮಾಡಿ ಮಾಡಿ ಇಡೀ ದುರ್ಜಯನ ಪಾತ್ರಕ್ಕೆ ಜೀವ ತುಂಬಲು ಊರ ಹೊರಗಡೆ ಹೋಗಿ ಡೈಲಾಗ್ಸ್ ಹೊಡೆಯೋದು; ಯಾವ್ಯಾವ ರೀತೀಲಿ ಡೈಲಾಗ್ಸ್ ಹೊಡೆದ್ರೆ ಜನಗಳಿಗೆ ಅನುಕೂಲ ಆಗತ್ತೆ, ಅಲ್ಲಿ ಯಾವ ಅಭಿನಯ ಮಾಡಬೇಕು, ಆಗ ಅವರ ಮುಖ look ಹ್ಯಾಗಿರಬೇಕು? ಹ್ಯಾಗೆ ನಡೀಬೇಕು? ಕತ್ತಿ ತಗೊಂಡು ಹೊಡೆಯೋದು ಹ್ಯಾಗೆ? ಚಾಕು - ಚೂರಿ ಹಿಡಿಯೋದು ಹ್ಯಾಗೆ? - ಅದನ್ನೆಲ್ಲಾ ಅರಸುರವರು ಕರಗತ ಮಾಡಿಕೊಂಡು ಬಿಟ್ಟಿದ್ದರು.

ಗುರುಗಳಾದ ಕಂದಗಲ್ ಹಣಮಂತರಾಯರ ಬಳಿ ಸೇವೆ ಮಾಡಿಕೊಂಡಿದ್ದಾಗ್ಯೂ ಅವರ ಎಲ್ಲಾ ಪಾತ್ರಗಳನ್ನೂ ಇವರು ಕಲೀಲಿಲ್ಲ. ದೊಡ್ಡ ದೊಡ್ಡ ನಟರಿಗೆ ಕಲಿಸುವಾಗ ಗುರುಗಳ ಪಕ್ಕ ಕುಳಿತು ಅವರಿಗೆ ಕಲಿಸಿದ್ದನ್ನೆಲ್ಲಾ ತಾವು ಕಲಿಯುತ್ತಿದ್ದರು.

“ಅತ್ಯಂತ ಕ್ಲಿಷ್ಟ ಹಾಗೂ ಉಚ್ಚರಿಸಲು ಕಷ್ಟವಾಗಿದ್ದ ಕಂದಗಲ್ ಹಣಮಂತರಾಯರ ಕಠಿಣ ಸಾಹಿತ್ಯವನ್ನು ಕರಗತ ಮಾಡಿಕೊಳ್ಳುವಾಗ ಆ ಸಾಹಿತ್ಯವನ್ನು ನುಡಿಸೋದಿಕ್ಕೇ ನಮಗೆ ಅಷ್ಟು ಖುಷಿಯಾಗಿತ್ತು, ಅಷ್ಟು ಪ್ರೀತಿಯಾಗಿತ್ತು” ಎಂದು ಗುರುಗಳ ಸಾಹಿತ್ಯದ ಬಗೆಗಿದ್ದ ಗೌರವಾಭಿಮಾನಗಳನ್ನು ಹಂಚಿಕೊಳ್ಳುತ್ತಾರೆ ಎಚ್.ಟಿ. ಅರಸು.

ಕಂದಗಲ್ ಹಣಮಂತರಾಯರ ಉತ್ಕೃಷ್ಟ ಸಾಹಿತ್ಯಕ್ಕೆ ಉದಾಹರಣೆ ಕೊಡುತ್ತಾ,

"ಒಂದೊಂದು ಪಾತ್ರದ ವೈಶಿಷ್ಟ್ಯಗಳನ್ನ ನಾವಿಲ್ಲಿ ಲೆಕ್ಕ ಹಾಕಿದ್ರೆ ಬೆಟ್ಟದಷ್ಟು ಕ್ಲಿಷ್ಟೆ ಸಾಹಿತ್ಯ ಎದುರಾಗುತ್ತೆ.

'ಈ ಶಕುನಿ ಎದೆ ಹುತ್ತೊಳಡಗಿದ ಬೇಧ ನೀತಿಯೆಂಬ ನಾಗಿಣಿಯ
ಪೂತ್ಕಾರಕೆ ಜಾತಿ ಝಳ ಹೊಡೆದು ಕಮರುವುದು ಕೋಮಲ ಕರುಳು.
ಸಂಮಾತೃ ಸೂತ್ರಗಳು ಮನುಷ್ಯತ್ವಗಳು ಸುರಶಿಲ್ಪಿ ವಿಶ್ವಕರ್ಮನ ಕೈಯ
ಕುಂಚ ಕಠೋರ ಕಠಾರಿಯಾಗುವುದು ಜಾತಿ ಜಗಳಗಳ ಗರ್ಜನೆಯಲ್ಲಿ.
ಸರಸ್ವತಿಯ ತಂಬೂರಿ ಪಿಡಿದು ಭೈರವ ಭರಿಯಾಗುವುದು
ಕುಲಾಭಿಮಾನದಲಿ. ಅತಿ ತೀವ್ರ ಜ್ವಾಲಾಕಾರಿಯಾಗಿದೆಯೇ ಜಾತಿದ್ವೇಷ
ಇದರದೊಂದು ಕಿಡಿಯೊಗೆದು ನಿರ್ಮಿಸುವ ಕಾಳಾನಲ ಕಡಲನೇ
ಕರ್ಣಾಶ್ವತ್ಥಮರ ಮಧ್ಯದಲಿ ಅಶ್ವತ್ಥಾಮಾ! ಅವನೊಂದು ಉರಿಗಣ್ಣು
ಸುರಸೇನಾಪತಿ ಷಣ್ಮುಖಸ್ವಾಮಿಯ ಕ್ಷಾತ್ರಸಾರವೇ ತುಂಬಿ ತುಳುಕಾಡುತ್ತಿದೆ
ಅಶ್ವತ್ಥಾಮನ ಎದೆಯೊಳು.

ಸೇನಾಧಿಪತಿ ಪಟ್ಟವನ್ನು ಅಶ್ವತ್ಥಾಮನಿಗೆ ಕಟ್ಟಿದರೆ ಉಳಿಗಾಲವಿಲ್ಲ ಆ ಪಾಂಡವರಿಗೆ ಮತ್ತೆ ಅಳಿಗಾಲವಿಲ್ಲ - ಈ ಕುರುಡನ ಕುನ್ನಿಗಳಿಗೆ. ಆದ್ದರಿಂದ ಹೂಡಿ ಹೊಡೆಯುವೆ ದುರ್ಯೋಧನನೆದೆಗೆ ಎರಡು ಬಾಣಗಳನ್ನು ಗರತಿಯಾದ ಭಾನುಮತಿಯ ಶೀಲದ ಬಗೆಗೆ ಸಂಶಯದ ಬಾಣ ಇನ್ನೊಂದು ಜಾತಿದ್ವೇಷದ ರಾಮಬಾಣ.
ಹ್ಹ ... ಹ್ಹ... ಹ್ಹ... ಹ್ಹ...
ನಗೆ, ನಗ್ತಾನವನು.
'ಮಾವಾ, ಕುರುಸಂತಾನದ ಸಮಾಕ್ತಿಯ ಸಮಯದಲ್ಲಿ ನಗೆ ನಿಮಗೆ!
ಧನುರಾಚ್ಯಾರ ದ್ರೋಣಾರ್ಯರು ಮರಣ ಹೊಂದಿದ್ದಕ್ಕೆ ಕೆಳವಳಿಕೆಯ ಕತ್ತಲೊಳು ಕುರುದೇವತೆಯು ಕುರುಡಾದ ಸಮಯದಲ್ಲಿ ನಗೆ ನಿಮಗೆ!'

'ಹ್ಹ... ಹ್ಹ... ಹ್ಹ...' ಮತ್ತೆ ನಗುವನು.
"ಮತ್ತೆ ನಗೆ! ಇದಾವ ನಗೆ ಮಾಮ?'
"ನನ್ನ ಹಂಚಿಕೆಗಳೆಲ್ಲಾ ಬಂದಿಯಾದುದಕ್ಕೆ ನಿರಾಸೆಯಲ್ಲಿ ನಗುವ ನರನ ನಂಜು ನಗೆ..'

'ಮಾಮಾ! ದುರ್ಲಭವಾದ ವೀರರತ್ನಗಳಿಂದ ರಂಜಿತವಾದ ಧೃತರಾಷ್ಟ್ರನ ಸಿಂಹಾಸನಕ್ಕೆ ಸೋಲೇ? ಸೋಲಿಲ್ಲವೇ ಆ ಕುಂತಿಯ ಕುನ್ನಿಗಳಿಗೆ? ಮಾವ, ದೌಪದಿಯ ದಂಡಿಗೆಯ ದಾರ ಎಷ್ಟು ಗಟ್ಟಿ ಮುಟ್ಟಾಗಿದೆ? ಪಾಂಡವರನ್ನು ಹಡೆದ ಕುಂತಾಮಾದ್ರಿಯರು ಅಧರ್ಮಿಣಿಯರು. ಅವರ ಪಟ್ಟದರಸಿಯಂತೆ ಆ ದೌಪದಿ. ಅವಳಂತೂ ಪಂಚವಲ್ಲಭೆ ಪಾಂಚಾಲಿ, ಇತ್ತ ಕೌರವರ ತಾಯಿಯಾದ ಗಾಂಧಾರಿ ಗರತಿ ರತುನ. ಅವರ ಪಾವಿತ್ರ್ಯದೊಡೆಯ ಪುತ್ರರಿಗೆ ಪರಾಜಯವೇ? ಸಾವಿತ್ರಿ, ಸಪ್ತ ಋಷಿಗಳಾದ ಭಾನಮತಿಯ ಮುತ್ತೈದೆತನದ ಮೂಗುತಿಗೆ ಭಂಗಿಯೇ?'

ಇಂಥಾ ಇಂಥಾ ಕಠಿಣತಮವಾದ ಶಬ್ದಗಳನ್ನು ಕ್ಲಿಷ್ಟಕರವಾದ ಸಾಹಿತ್ಯವನ್ನು ನಿರರ್ಗಳ ನುಡಿಯುತ್ತಾ ಅಭಿನಯಿಸುವ ಅರಸುರವರ ಅಭ್ಯಾಸ, ಪರಿಶ್ರಮ ಎಷ್ಟಿರಬೇಕು?

"ಇಷ್ಟೆಲ್ಲಾ ಇದ್ದೂ ರೊಟ್ಟಿ ಹೋಟ್ಲಲ್ಲಿ ಜೀವನ ಮಾಡ್ತಾ ಇದ್ದೀನಿ. ಸರ್ಕಾರ ಇಷ್ಟೆಲ್ಲ ಮುಂದುವರೆದಿದ್ರೂ ಒಂದು ಸೈಟು ಕೊಡ್ಲಿಲ್ಲ. ಎಲ್ಲಾ ರೀತಿ ಮನವಿ ಮಾಡಿದ್ರೂ ಕೊಡ್ತೀವಿ ಅಂತ ಬಾಯಿ ಮಾತು ಹೇಳ್ತಾರೆ, ಹೋಗಿ ಕೇಳಿದ್ರೆ ಇಲ್ಲಾಂತಾರೆ." ಎಂದು ವ್ಯಥೆಯಿಂದ ನುಡಿಯುತ್ತಾರೆ ಅರಸು.

"ಸತ್ತ ಶವವನ್ನ ಮನೇಲಿಟ್ಕೊಂಡು ಅವತ್ತು ರಂಗಭೂಮಿಯಲ್ಲಿ ನಾನು ಪಾತ್ರ ಮಾಡಿದ್ದೇನೆ" ಎಂದು ತಮ್ಮ ತಂದೆ-ತಾಯಿ, ಸಹೋದರರು 'ಸತ್ಯ ಸಂದರ್ಭ ಪುನಃ ನೆನಪಿಸಿಕೊಂಡು ಕ್ಷಣ ಮೌನಿಯಾದರು. ಇದನ್ನು ಕೇಳಿದ ಎಂಥವರ ಹೃದಯದಲ್ಲೂ ಕ್ಷಣ ಕಾಲ ಸಂತೈಸುವ ಮನಸ್ಸು ಬಾರದೇ ಇರದು.

ರಂಗಭೂಮಿಯ ಸೇವೆಯನ್ನು ಅವರು ಅವಿಚ್ಛಿನ್ನವಾಗಿ, ಭಕ್ತಿಯಿಂದ ಮಾಡಿದ್ದಾರೆಂಬುದಕ್ಕೆ ವೃತ್ತಿ ರಂಗಭೂಮಿಯ ಎಷ್ಟೋ ನಿದರ್ಶನಗಳಿವೆ. ಅವರ ಪಾತ್ರವೆಲ್ಲಾ ಮುಗಿದಾದ ಮೇಲೆ ಅವರು ಇಡೀ ರಂಗಭೂಮಿಯ ಮೇಲೆ ಒಂದು ಸಲ - ಉರುಳಾಡುತ್ತಿದ್ದರು. "ಅಮ್ಮಾ! ಇವತ್ತು ನಿನ್ನ ಸೇವೆ ಸಾರ್ಥಕವಾಯ್ತು" ಎಂದು ಉದ್ಘರಿಸುತ್ತಿದ್ದರು.

"ನಾನು ಎಲ್ಲಾ ನಾಟಕವನ್ನೂ, ಪಾತ್ರಧಾರಿಗಳನ್ನೂ ಇಷ್ಟಪಡ್ತೀವಿ. ಯಾಕಂದ್ರೆ ಒಂದು ಕಂಪೆನೀಲಿ ನಾಟಕ ಆಡುವಾಗ, ಅವರು ಯಾವ್ಯಾವ ನಾಟಕ ತಗೋತಿದ್ರೂ ಅದರಲ್ಲಿ ಪಾತ್ರ ಮಾಡೋದಷ್ಟೇ ನಮ್ಮ ಕರ್ತವ್ಯ. ನಾವು ವಿಮರ್ಶೆ ಮಾಡಿ ಆ ಪಾತ್ರ ಇದೆ. ಆ ನಾಟಕ ತಗೋ, ಈ ನಾಟಕ ತಗೋ ಅಂತ ನಾವು ಹೇಳ್ತಿರಲಿಲ್ಲ. ಅವರು ಯಾವ ಪಾತ್ರ ಕೊಡ್ತಾರೆ, ಆ ಪಾತ್ರ ಮಾಡೋದು ಅಷ್ಟೇ ಇತ್ತು" ಎಂಬುದು ಅವರ ಅನಿಸಿಕೆ.

ಅದ್ದೂರಿ ಸೀನರಿ, ಉತ್ತಮ ಕಲಾವಿದರ ಜೊತೆ ರಂಗ ಅನುಭವ ಹೆಚ್ಚಿತು. ಗೋಕಾಕ್ ಕಂಪನಿಯಲ್ಲಿ ಏಳು ವರ್ಷಗಳ ದೀರ್ಘ ಹೆಜ್ಜೆ ಹಾಕಿದ ಅವರು ಮತ್ತೊಂದು ತಿರುವಿಗೆ ದಾರಿ ಕಂಡುಕೊಂಡರೇನೋ ಅನ್ನುವಂತೆ ಒಂದು ಘಟನೆ ಮಂಡ್ಯ ಕ್ಯಾಂಪ್‌ನಲ್ಲಿ ನಡೆಯಿತು. ಯಾವುದೋ ಆಸೆ, ಆಮಿಷದ ಬಲೆಯೊಳಗೆ ಸಿಕ್ಕು ಹಾಕಿಕೊಂಡ ಅರಸು ಕಂಪನಿ ಬಿಟ್ಟರು.

ಮಂಡ್ಯದ ಸಾಹುಕಾರರೊಬ್ಬರು 'ನೀವು ಎಂಟು ಜನ ಒಳ್ಳೆ ಒಳ್ಳೆ ಕಲಾವಿದರು ಇದ್ದೀರಿ. ಎಲ್ರೂ ಒಟ್ಟಿಗೆ ಕಂಪನಿ ಬಿಟ್ಟು ನೀವೇ ಬೇರೆ ಕಂಪನಿ ಮಾಡಿ, ನಾನು ಹಣದ ಸಹಾಯ ಮಾಡ್ತೀನಿ" ಅಂದ್ರು. ಎಲ್ಲೋ ಮನದ ಆಳದಲ್ಲಿ ಬೆಳ್ಳಿ ಕಿರಣದ ಆಸೆ ಮೂಡಿತು. ಇದರಿಂದಾಗಿ ಗೋಕಾಕ್ ಕಂಪನಿಗೆ ತೊಂದರೆ ಆಯ್ತು.

ಗೋಕಾಕ್ ಕಂಪನಿ ತೊರೆದ ಎಂಟು ಜನರಲ್ಲಿ ಓಬಳೇಶ್ವರ್ ಕೂಡಾ ಇದ್ದರು. ಅವರು ಬಹಳ ಉತ್ತಮ ನಟ. ಅವರು ನಾಯಕನ ಪಾತ್ರದಿಂದ, ಕಾಮಿಡಿ ಪಾತ್ರದವರೆಗೆ ಲೀಲಾಜಾಲವಾಗಿ ಅಭಿನಯಿಸುತ್ತಿದ್ರು. ನಾಡಿಗೇರಿ ಮಾರ್ತಾಂಡರಾವ್, ರಟ್ಟೆಹಳ್ಳಿ ಗಂಗಾಧರಪ್ಪ ಅಂಥವರು ಬಿಟ್ಟಿದ್ದರಿಂದ ಗೋಕಾಕ್ ಕಂಪನಿಗೆ ನಷ್ಟ ಆಯ್ತು.

ಮುಂದೆ ಹಲಗೇರಿ ಜಟ್ಟಪ್ಪ ಕಂಪನಿ ದಾವಣಗೆರೆಯಲ್ಲಿ ಬೀಡು ಬಿಟ್ಟಿತ್ತು. ಅಲ್ಲಿ ಸ್ವಲ್ಪಕಾಲ ಕೆಲಸ ಮಾಡಿದರು. ಹೀಗೆ ಯಾವು ಯಾವುದೋ ಕಂಪನಿಯಲ್ಲಿ ಅನುಭವ ಪಡೆದ ಎಚ್.ಟಿ. ಅವರನ್ನು ಹೊಗಳಿ, ಅಟ್ಟಕ್ಕೇರಿಸಿ ನಾಯಕನ ಪಾತ್ರದ ಬಗ್ಗೆ ಭರವಸೆ ಕೊಟ್ಟು ಕರೆದೊಯ್ದವರು ಶೋಷಣೆಯನ್ನು ಮಾಡಿದರು. 1957ರಲ್ಲಿ ಕಂಪನಿ ನಿಂತಿತು.

ಸೀಸನ್‌ನಲ್ಲಿ (ಬೇಸಗೆ ಸಂದರ್ಭದಲ್ಲಿ)ಯಷ್ಟೇ ಆಗ ನಾಟಕಗಳು ಪ್ರದರ್ಶಿತವಾಗುತ್ತಿದ್ದವು. ದೊಡ್ಡ ಕಂಪನಿಗಳಿಗಾದರೆ ಮಳೆಯಲ್ಲೂ ಅಷ್ಟಿಷ್ಟು ರಕ್ಷಣೆ ಇರುತ್ತಿತ್ತು. ಪುಟ್ಟ, ಚಿಕ್ಕ ಕಂಪನಿಗಳಿಗೆ ಮಳೆಗಾಲ ಶುರುವಾಯಿತೆಂದರೆ ಹೇಳತೀರದ ಬಾಧೆ, ನೋವು, ಇಂಥ ಕಂಪನಿಗಳ ಅನುಭವವೂ ಅವರಲ್ಲಿ ಆಗಿದೆ.

ಚನ್ನಾಗಿ ದುಡ್ಡು ಕೊಡುತ್ತೇವೆ ಎಂದು ಕರೆದೊಯ್ದವರು ಕಲೆಕ್ಷನ್ ಇಲ್ಲ, ಅದಿಲ್ಲ ಇದಿಲ್ಲ ಎಂದು ಸಬೂಬು ಹೇಳಿ ಬರೀ ಕೈಲಿ ವಾಪಸು ಕಳುಹಿಸಿದವರೂ ಸಾಕಷ್ಟಿದ್ದಾರೆಂಬುದನ್ನು ಅವರು ನೆನಪಿಸಿಕೊಳ್ಳುತ್ತಾರೆ. ಆಗ ದುಡ್ಡಿನ ಪ್ರಶ್ನೆ ಅಂದ್ರೆ ಅರವತ್ತು ರೂಪಾಯಿ. ಅದೇ ದೊಡ್ಡ ಸಂಬಳ, ಮುಂದೆ ಮೈಸೂರಿನಲ್ಲಿದ್ದಾಗ ೩೦೦ರಿಂದ ೪೦೦ ರೂ.ಗಳ ಸಂಭಾವನೆ ದೊಡ್ಡ ಮೊತ್ತ ತೆಗೆದುಕೊಂಡದ್ದು ೧೯೫೭ರಲ್ಲಿ ತುಂಬಾ ಸೋವಿ ಇದ್ದ ಕಾಲ. ಐವತ್ತು ಪೈಸೆ ಇತ್ತು ಅಂದ್ರೆ ಹೊಟ್ಟೆ ತುಂಬಾ ತಿಂಡಿ, ಊಟ ಎಲ್ಲಾ ಆಗಿ ಬಿಡ್ತಿತ್ತು.
ಆಗ ಟಿಕೆಟ್ ದರವೂ ಕಡಿಮೆ ಇರ್ತಿತ್ತು. ಚಾಪೆ ಇಪ್ಪತ್ತೈದು, ಐವತ್ತು ಪೈಸೆ, ಮುಂದಿನ ಖುರ್ಚಿ ಎರಡು ರೂಪಾಯಿ, ಸೋಫಾ ಐದು ರೂ. ಅಂದ್ರೆ ಅದೇ ದೊಡ್ಡ ಮೊತ್ತ.

ಜಟ್ಟಪ್ಪನವರ ಕಂಪನಿ ನಿಂತ ನಂತರ ಅರಸು ಅವರು ಮುಂದೆ ಎಲ್ಲಿ ಹೋಗುವುದು ಎಂದು ಚಿಂತಿಸಿದರು. ಆಗ ಅಲ್ಲಿಗೆ ಮಹಾದೇವಸ್ವಾಮಿ ಎಂಬುವರು ಬಂದರು.

'ಅರಸು, ನಾನು ಕಂಪೆನಿ ಮಾಡ್ತೀನಿ ಬಾ.' ಅಂತ ಕರೆದ್ರು. ಅವರ ಜೊತೆಗೆ ಹೋದರು ಅರಸು. ಅಲ್ಲಿಗೆ ಹೋದರೆ ಅಲ್ಲಿ ಅವರಿಗಿಂತ ಮೊದಲು ಓಬಳೇಶ ಮತ್ತು ಮಹಾಂತೇಶ ಶಾಸ್ತ್ರಿಗಳೂಂತ ಇದ್ರು. ಅವರ ಜೊತೆಗೆ ಕೂಡಿಕೊಂಡು ಸ್ವಲ್ಪ ದಿವಸ ಇದ್ದರು. ಅಲ್ಲೇ ಅಗ್ರಿಮೆಂಟ್ ಮಾಡಿಕೊಟ್ಟದ್ದು.

ಆ ಮಾಲೀಕರು ಅರಸುರವರನ್ನು ಒಳ್ಳೆ ಆರ್ಟಿಸ್ಸು' ಅಂತ್ಹೇಳಿ ಅದಾಗಲೇ ಕಂಡು ಹಿಡಿದಿದ್ರು. ರಾಜಾವಿಕ್ರಮದಲ್ಲಿ ದುರ್ಜಯನ ಪಾತ್ರ, ಚಂದ್ರಹಾಸದಲ್ಲಿ ದುಷ್ಟಬುದ್ಧಿಯ ಪಾತ್ರ, ರಾಮಾಯಣದಲ್ಲಿ ರಾವಣನ ಪಾತ್ರ, ಹರಿಶ್ಚಂದ್ರದಲ್ಲಿ ವಿಶ್ವಾಮಿತ್ರನ ಪಾತ್ರ - ಹೀಗೇ ಅರಸುರವರಿಗೆ ಆ ಪಾತ್ರಗಳನ್ನೆಲ್ಲಾ ಕೊಟ್ಟಿದ್ದಲ್ಲದೆ ಸ್ವತಃ ಮಾಲೀಕರೇ ಅವರೊಟ್ಟಿಗೆ ಅಭಿನಯಿಸಿದ್ರು.

ಆ ಕಂಪೆನಿ ಮತ್ತು ಮಾಲೀಕರ ಬಗ್ಗೆ ಅರಸು,

"ಆ ಕಂಪೆನಿಯಲ್ಲಿ ಅದೇನೋ ಒಂದು ವೈಭವ. ಅಂಥಾ ವೈಭವದ ಕಂಪೆನಿಯನ್ನ ನಾವು ನೋಡ್ಲೇ ಇಲ್ಲ. ನನಗೆ ಇವತ್ತಿಗೂ ಹೇಳ್ತೀನಿ. ಆ ಕಂಪನಿ ಮಾಲೀಕರು ತೋರಿಕೆಗೆ ನಮ್ಮನ್ನಷ್ಟು ಹಚ್ಚಿಕೊಂಡಿರ್ಲಿಲ್ಲ. ಅವರ ಆಂತರ್ಯದಲ್ಲಿ ಅವರ ಮಕ್ಕಳಿಗಿಂತ್ಲೂ ಹೆಚ್ಚಾಗಿ ನನ್ನ ಪ್ರೀತಿ ಮಾಡ್ತಿದ್ರು" ಎನ್ನುತ್ತಾರೆ.

## ಎಂ.ಸಿ. ಮಹಾದೇವಸ್ವಾಮಿಗಳು ಹಾಗೂ ಕನ್ನಡ ಥೇಟರ್ಸ್ ನಂಟು:

ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ತುಂಬಾ ಬೇಕಾದವರು, ಗುಬ್ಬಿ ಕಂಪನಿ, ಸುಬ್ಬಯ್ಯ ನಾಯ್ಡು ಕಂಪನಿ, ಚಾಮುಂಡೇಶ್ವರಿ ಕಂಪನಿ ಹೀಗೆ ದೊಡ್ಡ ಕಂಪನಿಗಳ ಉಸ್ತುವಾರಿ ನೋಡಿಕೊಂಡಿದ್ದ ಅನುಭವವಿತ್ತು. ವ್ಯವಸ್ಥಾಪಕತ್ವದಲ್ಲಿ ಮಹಾ ಚತುರರಾದ ಎಂ.ಸಿ. ಮಹಾದೇವಸ್ವಾಮಿಗಳು ತಮಗಿರುವ ಅನುಭವದ ಹಿನ್ನೆಲೆಯಲ್ಲಿ ತಾವೇ ಒಂದು ಕಂಪನಿ ಮಾಡಲು ಹೊರಟಿದ್ದರು. ಅದರ ಫಲವೇ "ಕನ್ನಡ ಥೇಟರ್ಸ್" ಎಂಬ ನಾಟಕ ಕಂಪನಿ ಹುಟ್ಟಿತು. ಸ್ವಾಮಿ ಅವರು ಟೀ ಕಂಪನಿಯೊಂದರ ಮಾರಾಟ ಏಜೆಂಟರೂ ಆಗಿದ್ದರು.

ಉತ್ತಮ ಕಲಾವಿದರ ತಂಡ ಹಲವು ನಾಟಕ ಪ್ರದರ್ಶಿಸಿತು. ಉತ್ತರ ಕರ್ನಾಟಕದಿಂದ ಬಂದಿದ್ದ ಓಬಳೇಶ್ವರ ಉಳಿದು ಮಾರ್ತಾಂಡರಾವ್, ರಟ್ಟೆಹಳ್ಳಿ ಗಂಗಾಧರಪ್ಪ ಎಲ್ಲಾ ವಾಪಸ್ಸು ಹೋದರು. ಮಹಾದೇವಸ್ವಾಮಿಗಳು ಅರಸು ಅವರನ್ನು ಬಿಟ್ಟು ಕೊಡಲಿಲ್ಲ, ನಿಮ್ಮಂಥ ಒಳ್ಳೆ ಕಲಾವಿದರೇ ನನಗೆ ಬೇಕಿರುವುದು ಎಂದು ಅವರನ್ನು ಓಲೈಸಿ ತಮ್ಮ ಕಂಪನಿಗೆ ಬಳಸಿಕೊಂಡರು. ಹಲವಾರು ನಾಟಕಗಳಲ್ಲಿ ನಾಯಕನ ಪಾತ್ರ ನಿರ್ವಹಿಸಿದರು. ಮೈಸೂರಿನಲ್ಲಿ ಆರಂಭವಾದ ಸ್ವಾಮಿ ಅವರ ಥೇಟರ್‌ಗೆ ಜನ ಬರಲಿಲ್ಲ. ಕಲೆಕ್ಷನ್ ಆಗಲೇ ಇಲ್ಲ. ಇಪ್ಪತ್ತೈದು ಮೂವತ್ತು ರೂ. ಅಷ್ಟೆ. ಸ್ವಾಮಿಗಳಿಗೆ ಬೇಸರವಾಯಿತು. ನಾನೇ ಕಂಪನಿ ಮಾಡಿದ್ರೆ ಹೀಗಾಯಿತ್ತಲ್ಲಾ ಎಂದು ತಲೆಮೇಲೆ ಕೈ ಹೊತ್ತು ಕೂತರು. ನಿರಾಶೆಯೂ ಅವರನ್ನು ಆವರಿಸಿತು. ಮೂರು ತಿಂಗಳು ಹಾಗೂ ಹೀಗೂ ಕಂಪನಿ ನಡೆಸಿದರು. ಸುಸ್ತಾದರು.

ಅತ್ತೆ ಸೊಸೆ, ಬಿಡುಗಡೆ (ರಚನೆ: ಮಹಂತೇಶ ಶಾಸ್ತ್ರಿ) ಅಂತ ನಾಟಕ ಆಡಿದ್ರು. ಆಮೇಲೆ 'ರಾಜಾವಿಕ್ರಮ' ಅಂತ ಅದರಲ್ಲಿ ರಾಜಾವಿಕ್ರಮನ ಪಾತ್ರ ಅವರದು. ಈ ನಾಟಕವೂ ಓಡಲಿಲ್ಲ. ಕಲೆಕ್ಷನ್ ತೀರಾ ಡಲ್ ಆಗೋಯ್ತು. ಆಗ ಕಲಾವಿದರಿಗೆಲ್ಲಾ ಮಹಾದೇವಸ್ವಾಮಿ ಹೇಳಿದರು: "ನಾನು ಬೇರೆ ಊರಿಗೆ ಹೋಗಿ ಪ್ರಯತ್ನ ಮಾಡಿಲ್ಲ. ಏಕೋ ಎಲ್ಲಾ ತಲೆಕೆಳಗಾಗುತ್ತಿದೆ. ಎಲ್ಲರಿಗೂ ದುಡ್ಡು ಕೊಟ್ಟು ಬಿಡ್ತೀನಿ, ನಿಮ್ಮ ನಿಮ್ಮ ಊರಗಳಿಗೆ ಹೋಗಿ ಬಿಡಿ."

## ಹಾಸನದ ದನದ ಜಾತ್ರೆಯಲ್ಲಿ ಅದೃಷ್ಟ ಖುಲಾಯಿಸಿದ್ದು

ಆಗ ಓಬಳೇಶ್ವರ್, ಅರಸು ಕೂಡಿ ಸ್ವಾಮಿ ಅವರ ಮುಂದೆ ಕೆಲವು ಸಲಹೆ ಇಟ್ಟರು. ನಿಮ್ಮ ಕಂಪನಿ ಮೈಸೂರು ಬಿಟ್ಟು ಎಲ್ಲೂ ಹೊರಗೆ ಹೋಗಿಲ್ಲ. ಈಗ ಕಂಪನಿ ಮುಚ್ಚಿದರೆ ಉತ್ತರ ಕರ್ನಾಟಕದಿಂದ ಬಂದ ನಮಗೆ ಕೆಟ್ಟ ಹೆಸರು. ನಾವುಗಳು ಇನ್ನೂ ನಾಟಕ ಬಂದ್ ಆಯ್ತು ಅಂತ ಅಪಪ್ರಚಾರ. ಹೇಗೂ ಹಾಸನದ ದನಗಳ ಜಾತ್ರೆ ಶುರುವಾಗುತ್ತೆ. ಸೀನರಿ, ಸೆಟ್ ಪ್ರಾಪರ್ಟಿ ಎಲ್ಲಾ ಹಾಗೇ ಇದೆ. ಕಲಾವಿದರೂ ಇದ್ದಾರೆ. ಏಕೆ ಅಲ್ಲಿಗೆ ಪ್ರಯತ್ನ ಮಾಡಬಾರದು, ಅಲ್ಲೂ ಕಲೆಕ್ಷನ್ ಆಗದಿದ್ರೆ ಕಂಪನಿ ಮುಚ್ಚೋದು ಬಿಡೋದು ನಿಮ್ಮ ನಿರ್ಧಾರಕ್ಕೆ ಬಿಟ್ಟಿದ್ದು ಎಂದರು. ಈ ಸಲಹೆ ಸ್ವಾಮಿಗಳಿಗೆ ಇಷ್ಟವಾಯಿತು. "ಆಯ್ತು' ಎಂದವರೇ ಹಾಸನ ಜಾತ್ರೆಗೆ ಟೆಂಟ್ ಹಾಕೇ ಬಿಟ್ರು. 'ರಾಜಾ ವಿಕ್ರಮ' ನಾಟಕದ ಪ್ರಥಮ ಪ್ರದರ್ಶನದಿಂದಲೇ ಹೌಸ್‌ಫುಲ್ ಆಯ್ತು. ಮುಂದೆ ಇಪ್ಪತ್ತೈದು, ಮೂವತ್ತು ಪ್ರದರ್ಶನಗಳು ಆದವು. ಎಲ್ಲಾ ತುಂಬಿದ ಪ್ರದರ್ಶನಗಳೇ ಬತ್ತಿದ್ದ ಆಸೆ ಮತ್ತೆ ಚಿಗುರೊಡೆಯಿತು. ಮಹಾದೇವಸ್ವಾಮಿಗಳಿಗೆ ಕವಿದಿದ್ದ ಮಂಕು ದೂರವಾಗಿ ಲವಲವಿಕೆ ಬಂತು. ಅಲ್ಲೇ ಬೇರೆ ನಾಟಕಗಳನ್ನು ಪ್ರದರ್ಶಿಸಿದರು. ಅವೂ ಚೆನ್ನಾಗಿ ನಡೆದವು. 1959ರಲ್ಲಿ ಹಾಸನದ ನಾಟಕದ ನಂತರ ಕಂಪನಿಗೆ ಜೀವ ಬಂದಿದ್ದರಿಂದ ಹೆಚ್ಚು ಕಾಲ ಉಳಿಯಲು ಸಹಾಯಕವಾಯಿತು.

ನಂತರ ಕನಕಪುರ, ಚನ್ನಪಟ್ಟಣಗಳಲ್ಲಿ ಕ್ಯಾಂಪ್ ಮಾಡಿದರು. ಅಲ್ಲೂ ಒಳ್ಳೆ ಪ್ರೋತ್ಸಾಹ ಸಿಕ್ತು. ಆಗ ಮಹಾದೇವಸ್ವಾಮಿಗಳಿಗೆ ಅನ್ನಿಸ್ತು. 'ರಾಜಾ ವಿಕ್ರಮ' ಸಿನಿಮಾ ಆಗಿದೆ. ಬೇರೆ ಒಂದು ಇಂಥಾದ್ದೇ ಹೊಸ ನಾಟಕ ಬರೆಯಿಸಿ ಆಡಿಸಬೇಕು ಅಂದುಕೊಂಡವರೇ ಯೋಗಾ ನರಸಿಂಹ ಅವರನ್ನು ಕಂಡು ಹೊಸ ನಾಟಕ ಬರೆದು ಕೊಡಲು ಕೇಳಿದರು. ಅವರೇ ಡೈರೆಕ್ಟರ್

ಸಹಾ ಆಗಿದ್ದರು. ಸೀನ್ ಬೈ ಸೀನ್ ಅವರೇ ಕೂತು ತಮ್ಮ ಸಾಹಿತ್ಯ ಬಳಸಿ ಹೊಸ ನಾಟಕ ಬರೆದ್ರು. ಹಾಡುಗಾರಿಕೆಗೆ ಕರ್ನಾಟಕ ಸಂಗೀತ ಬೇಕು. ಅದನ್ನ ಹಾಡೋರು ಬೇಕು, ಶ್ರೀಕಂಠ ಮೂರ್ತಿ ಅವರು ಬರ್ತಾರೆ. ಅವರಿಗೇ ರಾಜಾ ವಿಕ್ರಮ ಪಾತ್ರ ಕೊಟ್ಟರಾಯಿತು ಎಂದು ತೀರ್ಮಾನಿಸಿದ್ರು. ದುರ್ಜಯನ ಪಾತ್ರದ ಬಗ್ಗೆ ಅರಸು ಅವರನ್ನೇ ಕೂರಿಸಿಕೊಂಡು ಮಾತು ಪೋಣಿಸಿದರು.

## ಮುಖ್ಯಮಂತ್ರಿ ಎಸ್.ಆರ್. ಕಂಠಿ ಅವರಿಂದ ಪ್ರಶಂಸೆ

ಚಿಂತಾಮಣಿಯಲ್ಲಿ ಹೊಸತಾದ 'ರಾಜಾ ವಿಕ್ರಮ' ಪ್ರದರ್ಶನ. ಆಗ ಎಸ್.ಆರ್. ಕಂಠಿ ಅವರು ಮುಖ್ಯಮಂತ್ರಿ, ಅವರೇ ನಾಟಕ ಉದ್ಘಾಟನೆಗೆ ಬಂದ್ರು. ಮೊದಲನೇ ನಾಟಕ. ಇಡೀ ನಾಟಕದಲ್ಲಿ ಎಚ್.ಟಿ. ಅರಸು ಒಬ್ಬರದೇ ಪಾತ್ರದ ಬಗ್ಗೆ ಕಂಠಿ ಅವರು ಹೊಗಳಿದರು. ಅಲ್ಲಿಂದ ಎರಡು, ಮೂರು ಅಂತ ಬೇರೆ ಬೇರೆ ಕಡೆ ಪ್ರದರ್ಶನಗಳು ಕಂಡವು.

ಆಗ ಯೋಗಾನರಸಿಂಹ ಅವರು ಅರಸು ಅವರಿಗೆ "ನೀನೊಂದು ನಾಟಕ ಬರಿ" ಅಂದ್ರು. ಇದರಿಂದ ಸ್ಫೂರ್ತಿಗೊಂಡ ಅರಸು "ಚಂದ್ರಹಾಸ" ನಾಟಕದ ವಿವರ ತಿಳಿಸಿದರು. ಅದನ್ನೇ ಕೆಲವು ಸಾಹಿತ್ಯ ಬದಲಾಯಿಸಿ ಅಭಿನಯಿಸಲು ಒಪ್ಪಿಗೆ ಕೊಟ್ಟು, ಒಂದು ನಾಟಕ ಯಶಸ್ಸು ಆಯ್ತು ಅಂದಾಕ್ಷಣ ಅಸೂಯೆ ಎಲ್ಲೆಲ್ಲೂ ಮನೆ ಮಾಡುತ್ತೆ ಅನ್ನೋದಕ್ಕೆ ಅರಸು ಅವರೇ ಉದಾಹರಣೆಯಾದರು. ಇಷ್ಟಾಗ್ಯೂ ಯೋಗಾನರಸಿಂಹ ಅವರು ದುಷ್ಟಬುದ್ಧಿ ಪಾತ್ರವನ್ನು ಅರಸು ಅವರಿಗೆ ಕೊಡಲಿಲ್ಲ. ಬೇರೆಯವರ ಕೈಲಿ ಇದನ್ನ ಮಾಡಿಸಿದರು. ಇದನ್ನು ತಿಳಿದ ಮಹಾದೇವಸ್ವಾಮಿಗಳು ಯೋಗಾನರಸಿಂಹ ಅವರಿಗೆ ಹೇಳಿದರು: "ನಮ್ಮಲ್ಲೇ ಎಂತೆಂಥ ಕಲಾವಿದರಿದ್ದಾರೆ. ಏಕೆ ಅರಸು ಅವರಿಗೆ ಕೊಡಿ, ಆತ ಎಂಥಾ ನಟ, ಅವರನ್ನು ಬಿಟ್ಟು ಏನ್ಮಾಡ್ತೀರಿ?"

ದುಷ್ಟ ಬುದ್ಧಿ ಪಾತ್ರ ಅರಸು ಅವರಿಗೆ ಹೀಗೆ ಕಂಪನಿ ಮಾಲೀಕ ಸ್ವಾಮಿ ಅವರಿಂದ ಹೇಳಿಸಿಕೊಂಡು ಬಂತು. ಛಾಲೆಂಜ್ ಆಗಿ ತೆಗೆದುಕೊಂಡು ಆ ಪಾತ್ರದಲ್ಲಿ ತಲ್ಲೀನತೆ ಪಡೆದು ಒಂದು ವಾರ ರಿಹರ್ಸಲ್ ಮಾಡಿ ರಂಗದ ಮೇಲೆ ಅಭಿನಯಿಸಿದರು. ಬೇಷ್ ಅನ್ನಿಸಿಕೊಂಡರು. ಮೊದಲು ಯೋಗಾನರಸಿಂಹ ಅವರು ಯಾರನ್ನು, ಯಾವ ಪಾತ್ರವನ್ನು ನಿರಾಕರಿಸಿದ್ದರೋ ಅದೇ ವ್ಯಕ್ತಿಗೆ, ಮಾಡಿದ ಅಂಥಾ ಪಾತ್ರಕ್ಕೆ ಬೆನ್ನು ತಟ್ಟಿದರು. ಆದರೆ ಒಳಗೇನಿತ್ತು ಅನ್ನೋದು ತಿಳೀಲಿಲ್ಲ - ಎಂಬ ಅಂದಿನ ಘಟನೆಯನ್ನು ಅರಸು ಮುಕ್ತವಾಗಿ ಹೇಳುತ್ತಾರೆ.

ಅಲ್ಲಿಂದ ತಿಪಟೂರು ಪ್ರವಾಸ, 'ರಾಜಾ ವಿಕ್ರಮ'ಕ್ಕಿಂತ 'ಚಂದ್ರಹಾಸ' ತುಂಬಾ ಯಶಸ್ವಿ ಆಯಿತು. ಒಬ್ಬ ಕಲಾವಿದನಿಗೆ ಮೇಲೆತ್ತಲು ಇಂಥ ಒಂದೆರಡು ನಾಟಕಗಳು ರಂಗ ಬದುಕಲ್ಲಿ ಪುರಾವೆ ಆದವು.

## ರಾಜಧಾನಿ ಬೆಂಗಳೂರಲ್ಲಿ 'ರಾಜಾ ವಿಕ್ರಮ'ದ ಜಯಭೇರಿ

ತಿಪಟೂರಿನಲ್ಲಿ ಎರಡು ನಾಟಕಗಳೂ ಅರಸು ಅವರಿಗೆ ಒಳ್ಳೆ ಹೆಸರು ತಂದಿದ್ದರಿಂದ ಸ್ವಾಮಿ ಅವರ ಕಂಪನಿ ರಾಜ್ಯದ ರಾಜಧಾನಿಯತ್ತ ಪಯಣ ಬೆಳಸಿತು. ರಾಜಕಾರಣಿಯೊಬ್ಬರ ಸಲಹೆ ಮೇರೆಗೆ ಸಿಟಿ ಮಾರ್ಕೆಟ್ ಎದುರಿನ ದೊಡ್ಡಣ್ಣ ಹಾಲ್‌ನಲ್ಲಿ ತಂಡ ನಾಟಕ ಪ್ರದರ್ಶನಕ್ಕೆ ಸಿದ್ಧತೆ ಮಾಡಿಕೊಂಡಿತು. ಆಗ ಅಸೆಂಬ್ಲಿ ಎರಡು ತಿಂಗಳವರೆಗೂ ನಡೆಯುತ್ತಿತ್ತು.

ಅಲ್ಲಿಗಾಗಲೇ ರಾಜಾವಿಕ್ರಮ, ಚಂದ್ರಹಾಸ ನಾಟಕಗಳ ಮೂಲಕ ಹೆಸರಾಗಿದ್ದ ಎಚ್.ಟಿ. ಅರಸು ಅವರ ಬ್ಯಾನರ್‌ಗಳನ್ನು, ನಾಟಕದ ಹೆಸರಿನ ಜೊತೆ ಪ್ರಚಾರಕ್ಕಿಳಿಸಿದರು. ಮೊದಲ ನಾಟಕವೇ ರಾಜಾವಿಕ್ರಮ. ಇದರಲ್ಲಿ ಅರಸು ದುರ್ಜಯನ ಪಾತ್ರ. ಏನಾಶ್ಚರ್ಯವೋ ಪ್ರಥಮ ಪ್ರದರ್ಶನ ಹೌಸ್‌ಫುಲ್! ಅಲ್ಲಿಂದ ಶುರುವಾಗಿ ಜನ ಮನ್ನಣೆಗೆ ನಾಟಕ ಪ್ರಾಪ್ತವಾಯಿತು. ಮುಂದಿನ ಪ್ರದರ್ಶನಗಳೂ ಕಿಕ್ಕಿರಿದು ನಡೆಯ ತೊಡಗಿದವು. ರಾಜಕಾರಣಿಗಳು, ಸಿನಿಮಾ ಕಲಾವಿದರೂ ನಾಟಕ ನೋಡಲು ಮುಂದಾದರು. 'ರಾಜಾ ವಿಕ್ರಮ' ೧೦೦ ಪ್ರದರ್ಶನ ಹೌಸ್‌ಫುಲ್ ಆಗಿ ವಿಕ್ರಮ ಸಾಧಿಸಿತು. ಎಲ್ಲೆಲ್ಲೂ ಎಚ್.ಟಿ. ಅರಸು ಹೆಸರು

ಚರ್ಚೆಗೆ ಬಂತು. ಎಚ್.ಟಿ. ಅರಸು ಅಭಿನಯದ ನಾಟಕವೆಂದೇ ಪ್ರಚಾರವಾಯಿತು. ಎಲ್ಲಿ ಹೋದರೂ ತಿಪ್ಪರಾಜು ಅಲಿಯಾಸ್ ಅರಸು ಅವರನ್ನು ಗುರ್ತಿಸಿ ಅಭಿಮಾನ ವ್ಯಕ್ತಪಡಿಸಿದ ಪ್ರೇಕ್ಷಕರು ಸಿನಿಮಾ ಹೀರೋ ಥರಾ ಕಂಡರು. ಈ ನಾಟಕ ಬ್ಯಾನರ್ ಬದಲಾಯಿಸದೆ ಒಟ್ಟು 205 ಪ್ರದರ್ಶನ ಕಂಡು ಆ ಸಂದರ್ಭದ ಇತಿಹಾಸ ನಿರ್ಮಾಣ ಮಾಡಿತು.

`ರಾಜಾವಿಕ್ರಮದಲ್ಲಿ ಎಚ್.ಟಿ. ಅವರ ದುರ್ಜಯನ ಪಾತ್ರ ನೋಡಲೆಂದೇ ಜನ ಬರುತ್ತಿದ್ದರು. ಕ್ಯೂ ನಿಂತು ಟಿಕೆಟ್ ಸಿಗದೆ ನಿರಾಶರಾಗಿಯೂ ಜನ ವಾಪಾಸ್ ಹೋಗಿದ್ದುಂಟು.

ಇಂಥ ಅದ್ಭುತ ಯಶಸ್ಸಿನ ನಾಟಕದ ದುರ್ಜಯನ ಪಾತ್ರದ ಬಗ್ಗೆ ಸಿನಿಮಾ ಜಗತ್ತಿನ ಮಂದಿ ಪ್ರಶಂಸಿದ್ದರೆ ಆಶ್ಚರ್ಯವೇನೂ ಕಾಣದು. ಆದರೆ ಸಾಹಿತ್ಯ ವಲಯದಿಂದಲೂ ಅವರ ಪಾತ್ರದ ಬಗ್ಗೆ ಮೆಚ್ಚಿಗೆ ಬಂತು.

## ರಂಗಭೂಮಿಗೂ ಸಾಹಿತ್ಯವಲಯಕ್ಕೂ ಇದ್ದ ನೆಂಟಸ್ತನ
## ಅನಕೃ ಆಶೀರ್ವಾದ ಪಡೆದ ಅರಸು

ಮಹಾದೇವಸ್ವಾಮಿಗಳಿಗೂ ಮತ್ತು ಕನ್ನಡ ಸಾರಸ್ವತ ಲೋಕದ ದಿಗ್ಗಜರೆನಿಸಿದ ದಿ. ಅ.ನ. ಕೃಷ್ಣರಾಯರಿಗೂ ಬಹಳ ಸ್ನೇಹವಿತ್ತು. ಒಂದು ಸಲ.

"ನಮ್ಮ ನಾಟ್ಕ ನೋಡೋಕೆ ಬನ್ನಿ" ಅಂತ ಅ.ನ.ಕೃ. ಅವರನ್ನು ಕರ್ಕೊಂಡು ಬಂದಿದ್ರು. ನಾಟಕ ನೋಡಿ ಆದ್ಮಲೆ ಅ.ನ.ಕೃ.ರವರು ಮಹಾದೇವಸ್ವಾಮಿಗಳನ್ನ ಕರೆದು.

"ಮಹಾದೇವಸ್ವಾಮಿ, ಆ ದುರ್ಜಯನ ಪಾತ್ರ ಮಾಡೋವನನ್ನ ಎಲ್ಲಿಂದ ಕರ್ಕೊಂಡ್ಬಂದಿದೀ ನೀನು? ಶಬ್ದಗಳನ್ನ ನಮ್ಮ ಜನ ಆ ರೀತಿ ನುಡಿಸೋದಿಲ್ವಲ್ಲಾ'' ಎಂದರು.

"ಹ್ಞಾಂ! ಉತ್ತರ ಕರ್ನಾಟಕದವರೊಬ್ರನ್ನ ಕರ್ಕೊಂಡು ಬಂದಿದ್ದೀನಿ. ಅವರು ಕಂದಗಲ್ ಹನುಮಂತರಾಯರ ನಾಟಕ ಕಂಪೆನಿಯಲ್ಲಿ ಪಾತ್ರ ಮಾಡಿದವ್ರು" ಉತ್ತರಿಸಿದರು ಮಹಾದೇವ ಸ್ವಾಮಿಗಳು.

"ಹ್ಞಾಂ! ಬಹಳ ಚೆನ್ನಾಗಿ ಪಾತ್ರ ಮಾಡಿದ್ರಪ್ಪಾ, ಒಂದ್ಸಲ ಮನೆಗೆ ಕರ್ಕೊಂಡು ಬಾ ನೋಡೋಣ ಅವ್ರುನ್ನ" ಅಂತ್ಹೇಳಿ ಅಂದಿದ್ದವರು ಅ.ನ.ಕೃ.

ಮಹಾದೇವಸ್ವಾಮಿಗಳು ಅರಸುರವರನ್ನು ಕರ್ಕೊಂಡೂ ಹೋಗಿದ್ರು. ಅ.ನ.ಕೃ. ಅವರ ಮನೇಲಿ ಕಾಫಿ ಕುಡಿದು, ಅವರನ್ನು ಮಾತಾಡಿಸಿ, ಅವ್ರಿಗೆ ನಮಸ್ಕಾರ ಮಾಡಿ ಬಂದಿದ್ದರು ಅರಸು.

ಕನ್ನಡ ಸಾಹಿತ್ಯ ಪರಂಪರೆಯ ಶ್ರೇಷ್ಠ ಕಾದಂಬರಿಕಾರ, ಕನ್ನಡ ಚಳವಳಿಗೆ ಹೊಸ ದಿಕ್ಕು ತೋರಿದ ನೇತಾರ ಅನಕೃ ಅವರ ಪ್ರಶಂಸೆ ಇದಾದರೆ; ನಮ್ಮ ನಡುವಿರುವ ಹಲವು ಸಾಹಿತಿಗಳು ಸಾಂಸ್ಕೃತಿಕ ವಕ್ತಾರರು ಆ ದಿನದ ಅರಸು ಅವರ ಅಭಿನಯದ ನೆನಪು ಮಾಡಿಕೊಳ್ಳುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು, ಕವಿಗಳು, ವಿಮರ್ಶಕರೂ ಆದ ಡಾ॥ ಸಾ.ಶಿ. ಮರುಳಯ್ಯ ಅವರು "ಅರಸು ಶ್ರೇಷ್ಠ ರಂಗನಟ. ಆತನ ರಾಜಾವಿಕ್ರಮದ ದುರ್ಜಯನ ಪಾತ್ರ ಹಾಗೂ ಚಂದ್ರಹಾಸದ ದುಷ್ಟಬುದ್ಧಿ ಪಾತ್ರ ನೋಡಲೆಂದೇ ಜನ ಫರ್ಲಾಂಗು ದೂರ ಕ್ಯೂ ನಿಂತು ಟಿಕೆಟ್ ಪಡೆಯುತ್ತಿದ್ದರು. ಆತನ Entry ಆಯ್ತು ಅಂದ್ರೆ ಚಪ್ಪಾಳೆಗಳ ಸುರಿಮಳೆ ಆತನ ನೋಟ, ನಗು, ಸಂಭಾಷಣೆಯ ಏರಿಳಿತ ಎಲ್ಲವೂ ಕಣ್ಣು ಕಟ್ಟುವಂತಿದೆ. ದೊಡ್ಡಣ್ಣ ಹಾಲ್ ಮುಂದೆ ಜನ ಕಿಕ್ಕಿರಿದು ಸೇರುತ್ತಿದ್ದುದು ನನಗಿನ್ನೂ ಹಸಿರಾಗಿದೆ. ಅರಸು ನಿಜಕ್ಕೂ ರಂಗಭೂಮಿಗೆ ಗೌರವ ತಂದ ಕಲಾವಿದ" - ಎಂದು ಸ್ಮರಿಸುತ್ತಾರೆ.

ದೊಡ್ಡಣ್ಣ ಹಾಲ್‌ನ ಅದೃಷ್ಟವೋ ಏನೋ 'ಚಂದ್ರಹಾಸ' ನಾಟಕವೂ ಯಶಸ್ವಿ ಆಯ್ತು. ಈ ನಾಟಕಕ್ಕೆ ರಾಜಾವಿಕ್ರಮದಲ್ಲಿ ಪಾತ್ರ ವಹಿಸಿದ್ದ ಎಚ್.ಟಿ.ಅರಸು ಅವರು 'ದುಷ್ಟಬುದ್ಧಿ' ಖಳನಾಯಕನಾಗಿ ಅಭಿನಯಿಸುತ್ತಾರೆಂಬ ಪ್ರಚಾರ ಶುರುವಾಯಿತು. ಈ ನಾಟಕವು ಹೌಸ್‌ಫುಲ್. ಇದು ೧೮೦ ಪ್ರದರ್ಶನ ಕಂಡಿತು.

ರಾಜಾವಿಕ್ರಮದಲ್ಲಿ ಒಂದು ಪ್ರದರ್ಶನಕ್ಕೂ ತಪ್ಪಿಸಿಕೊಳ್ಳದಂತೆ ೨೦೫ ಪ್ರದರ್ಶನಗಳಲ್ಲೂ ಅರಸು ಪಾತ್ರ ಮಾಡಿದರು.

'ಅತ್ತೆ ಸೊಸೆ' ಎಂಬ ಮತ್ತೊಂದು ನಾಟಕದ ಪ್ರದರ್ಶನಕ್ಕೆ ರಂಗ ಸಜ್ಜಾಯಿತು. ಪ್ರಚಾರವೂ ಅವರ ಹೆಸರಲ್ಲೇ ನಡೆಯಿತು. ಕಂಪನಿ ಮಾಲೀಕ ಮಹಾದೇವಸ್ವಾಮಿ ಪತ್ರಕರ್ತರನ್ನು ಭೇಟಿ ಮಾಡಿದರು. "ಅತ್ತೆ ಸೊಸೆಯಲ್ಲಿ ಎಚ್.ಟಿ. ಅರಸು ಅವರದೇನು ಪಾತ್ರ?" ಎಂದು ಪತ್ರಕರ್ತರು ಕೇಳಿದರು. "ಇವೊತ್ತು ಕಾಮಿಡಿ ಪಾತ್ರ ಮಾಡ್ತಾರೆ" ಅಂದು. ಕೂಡಲೇ ಪತ್ರಕರ್ತರು, "ಏನು ಸ್ವಾಮಿಗಳೇ, ರಾಜಾವಿಕ್ರಮ, ಚಂದ್ರಹಾಸದಲ್ಲಿ ಖಳನಾಯಕನ ಪಾತ್ರ ಮಾಡಿ ಅವರು ಕೀರ್ತಿಗಳಿಸಿದ್ದಾರೆ. ಹೋಗಿ ಹೋಗಿ ಅವರಿಗೆ ಕಾಮಿಡಿ ಪಾತ್ರ ಕೊಡೋದೆ?" ಎಂದರು. ಅದಕ್ಕೆ ಮಹಾದೇವಸ್ವಾಮಿ ಅವರು "ದಯವಿಟ್ಟು ಬಂದು ಈ ನಾಟಕ, ಅವರ ಪಾತ್ರ ನೋಡಿ, ನಿರ್ವಂಚನೆಯಿಂದ ಬರೆಯಬೇಕು" ಅಂದರು. ಅರಸು ಈ ನಾಟಕದಲ್ಲಿ ಕಾಮಿಡಿ ಪಾತ್ರ ನಿರ್ವಹಿಸಿದರು.

ಶುಕ್ರವಾರ, ಶನಿವಾರ ಕಳೆಯಿತು. ಭಾನುವಾರ ಎಲ್ಲಾ ಪತ್ರಿಕೆಗಳೂ ಅತ್ತೆ ಸೊಸೆ' ನಾಟಕದ ಮಾರವಾಡಿಯ ಹಾಸ್ಯ ಪಾತ್ರದ ಬಗ್ಗೆ, ಅರಸು ಅವರ ಅಭಿನಯದ ಬಗ್ಗೆ ಪ್ರಶಂಸೆ ಮಾಡಿ ಬರೆದವು. ರಂಗಕ್ಕೆ ಬಂದ ಕಲಾವಿದ ಎಲ್ಲಾ ರೀತಿಯ ಪಾತ್ರಗಳನ್ನು ಮಾಡಿ ಸೈ ಅನ್ನಿಸಿಕೊಳ್ಳಬೇಕು. ನಾಯಕ, ಖಳನಾಯಕ, ಅತಿಥಿ ಪಾತ್ರ, ಪೋಷಕ ಪಾತ್ರ ಯಾವುದಾದರೂ ಸರಿ, ಒಟ್ಟಿನಲ್ಲಿ ಪಾತ್ರಕ್ಕೆ ನ್ಯಾಯ ಸಲ್ಲಬೇಕು ಅನ್ನುವುದು ಅವರ ಅಭಿಪ್ರಾಯ.
ಬಾಲ್ಯದ ಆರಂಭದ ಘಟ್ಟದಲ್ಲಿ ಬಾಲನಟರಾಗಿ, ಯೌವನಾವಸ್ಥೆಯಲ್ಲಿ ಸ್ತ್ರೀಪಾತ್ರ ಮಾಡಿ, ನಂತರ ನಾಯಕ, ಖಳನಾಯಕ ಇತ್ಯಾದಿ ಮಾಡಿದ ತಿಪ್ಪರಾಜು ಎಲ್ಲಕ್ಕೂ ಒಗ್ಗಿಕೊಂಡ ಬಗ್ಗೆ ಹೇಳುತ್ತ, ಕಲಾವಿದ ಪರಿಪೂರ್ಣತೆಯ ತೃಪ್ತಿ ಪಡೆಯಬೇಕು

## ರಾಜಾವಿಕ್ರಮ, ಚಂದ್ರಹಾಸದ ಬಾಲನಟರಾಗಿದ್ದ ಎಂ.ಎಸ್. ರಮೇಶ್ ನೆನಪು

ಎಂ.ಸಿ. ಮಹಾದೇವಸ್ವಾಮಿ ಅವರ ಕಂಪನಿ ಹಾಸನದ ಜಾತ್ರೆಯಲ್ಲಿ 'ರಾಜಾವಿಕ್ರಮ' ಜಯಭೇರಿ ಬಾರಿಸಿದಾಗ ಅರಸು ಅವರ ದುರ್ಜಯನ ಪಾತ್ರ ಜನಮೆಚ್ಚಿದ್ದರು. ಅದರಲ್ಲಿ ವಿಕ್ರಮನ ಮಗನ ಪಾತ್ರ ನಿರ್ವಹಿಸಿದ್ದ ಬಾಲನಟ ಎಂ.ಎಸ್. ರಮೇಶ್, ಈಗ ರವೀಂದ್ರ ಕಲಾಕ್ಷೇತ್ರದಲ್ಲಿ ತಾಂತ್ರಿಕ ವರ್ಗದ ಬೆಳಕು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ದುರ್ಜಯನ (ಅರಸು), ಜೇಲು ದೃಶ್ಯದಲ್ಲಿ ವಿಕ್ರಮನ ಹೆಂಡತಿ ಪ್ರಭಾವತಿಯ ರಾಜಮುದ್ರಿಕೆಯನ್ನು ಕೊಡುವಂತೆ ಪೀಡಿಸುತ್ತಾನೆ. ಆಕೆ ಕೊಡಲು ನಿರಾಕರಿಸುತ್ತಾಳೆ. ಜೊತೆಯಲ್ಲಿದ್ದ ಆಕೆಯ ಮಗುವನ್ನು ಬಲವಾಗಿ ಕಿತ್ತುಕೊಂಡು ಕುತ್ತಿಗೆಗೆ ಕೈ ಹಾಕಿ ಎತ್ತಿ ಹಿಡಿದು, ಇನ್ನೊಂದು ಕೈಲಿ ಖಡ್ಗದಿಂದ ಇರಿಯಲು ಅಟ್ಟಹಾಸದಿಂದ ನಗುತ್ತಾನೆ. ಈ ಸನ್ನಿವೇಶ ಇಡೀ ನಾಟಕದಲ್ಲಿ ಹೃದಯ ವಿದ್ರಾವಕ ದೃಶ್ಯ, ಜನ ಹಿಡಿ ಶಾಪ ಹಾಕುವಂತಾ ದೃಶ್ಯವೂ ಕೂಡ.

ಹೀಗೆ ಎತ್ತಿ ಹಿಡಿದ ಸಂದರ್ಭ ಎಳೆಯನಟ ರಮೇಶ್‌ಗೆ ಉಸಿರು ಸಿಕ್ಕಿಸಿಕೊಂಡು ವಿಲವಿಲ ಒದ್ದಾಡುವಂತಾಗಿತ್ತು. ಅರಸು ದುರ್ಜಯನನಾಗಿ ಪಾತ್ರದಲ್ಲಿ ಮುಳುಗಿ ಹೋಗಿದ್ದರು ಅನ್ನುವುದಕ್ಕೆ ಆ ಒಂದು ಸನ್ನಿವೇಶವೇ ಸಾಕು ಎಂದು ಎಂ.ಎಸ್. ರಮೇಶ್ ಬಾಲ್ಯದ ಅಭಿನಯ ಆ ದಿನ ನೆನೆಯುತ್ತಾರೆ. ಇವರ ಸಹೋದರ ಈಗ ಚಿತ್ರರಂಗದಲ್ಲಿ ಹೆಸರಾಗಿರುವ ಎಂ.ಎನ್. ಉಮೇಶ್ ಹೆಚ್ಚಾಗಿ ಬಾಲನಟರಾಗಿ ಕಾಣಿಸಿಕೊಳ್ಳುತ್ತಿದ್ದರು. ಆಗಲೇ ಅವರಿಗೆ ಸಿನಿಮಾದಲ್ಲಿ ಕರೆಬಂದಿತ್ತು. ಉಮೇಶ್ 'ಮಕ್ಕಳ ರಾಜ್ಯ' ಚಿತ್ರದ ಅಭಿನಯಕ್ಕೆ ಹೋದಾಗ ಅವರಂತೇ ಇರುವ ಅವರ ಸಹೋದರ ರಮೇಶ್ ನಾಟಕಗಳಲ್ಲಿ ಅಭಿನಯಿಸುತ್ತಿದ್ದರು.

ಮುಂದೆ 'ಚಂದ್ರಹಾಸ' ನಾಟಕದಲ್ಲಿ ಅರಸು ದುಷ್ಟಬುದ್ಧಿ ಪಾತ್ರ ಮಾಡಿ ಮಿಂಚಿದರು. ಜನ ಅವರನ್ನು ವಿಲನ್ ಹಾಗೇ ನೋಡಲು ಇಷ್ಟಪಡುತ್ತಿದ್ದರು. ಇಲ್ಲೂ ಬಾಲಚಂದ್ರಹಾಸನಾಗಿ ರಮೇಶ್ ಅಭಿನಯಿಸಿದ್ದರು.

ದುಷ್ಟಬುದ್ಧಿ ತನ್ನ ಕಡೆಯ ಕಟುಕರನ್ನು ಕಳುಹಿಸಿ ಬಾಲಚಂದ್ರಹಾಸನ ಶಿರಕಡಿದು ತರಲು ಆಜ್ಞಾಪಿಸುತ್ತಾನೆ. ಶಿಷ್ಯ ಕಟುಕರು ಆ ಬಾಲಕನನ್ನು ಹುಡುಕುತ್ತಾ ಕಾಡಿಗೆ ಬರುತ್ತಾರೆ. ಕಟುಕರನ್ನು ಕಂಡು ಭಯಗೊಂಡ ಬಾಲಚಂದ್ರಹಾಸ ತನ್ನ ರಕ್ಷಣೆಗಾಗಿ ನಾರಾಯಣನ ಪ್ರಾರ್ಥನೆ ಮಾಡಿದಾಗ ಬೆಂಕಿ ಉದ್ಭವವಾಗುತ್ತದೆ. ಈ ಪವಾಡ ಕಂಡು ಬಾಲಕನನ್ನು ಕಡಿಯಲು ಬಂದ ಕಟುಕರು ಅಲ್ಲಿಂದ ಓಡಿ ಹೋಗುತ್ತಾರೆ. ಇದರಿಂದ ದುಷ್ಟಬುದ್ಧಿ ಕೆರಳಿ ಕೆಂಡವಾಗುತ್ತಾನೆ. ಆ ಸನ್ನಿವೇಶದಲ್ಲಿ ದುಷ್ಟಬುದ್ಧಿಯಾಗಿ ಅರಸು ರಂಗದ ಮೇಲೆ ಕೆರಳುವ ದೃಶ್ಯ ಅದ್ಭುತವಾದದ್ದೆಂದು ರಮೇಶ್ ಮತ್ತೊಂದು ಘಟನೆ ನೆನೆಯುತ್ತಾರೆ.

ಇವೊತ್ತಿನ ರವೀಂದ್ರ ಕಲಾಕ್ಷೇತ್ರದ ಕಟ್ಟಡ ನಿಧಿಗಾಗಿ ರಂಗಕಲಾವಿದರು, ಚಲನಚಿತ್ರ ನಟರು 1958-59ರಲ್ಲಿ ರಸಮಂಜರಿ ಕಾರ್ಯಕ್ರಮ ನೀಡಿದ್ದರು. ಅದರಲ್ಲಿ ಮಹಾದೇವಸ್ವಾಮಿಗಳ ಕಂಪನಿಯೂ ಒಂದು. ಸಹಾಯಾರ್ಥ ಕಾರ್ಯಕ್ರಮದ ಸಂದರ್ಭದಲ್ಲಿ ಅಂದಿನ ಭಾರತದ ರಾಷ್ಟ್ರಪತಿ ಎಸ್. ರಾಧಾಕೃಷ್ಣನ್, ಮೈಸೂರು ಮಹಾರಾಜ ಜಯಚಾಮರಾಜ ಒಡೆಯರ್, ನಟ ಶಿವಾಜಿ ಗಣೇಶನ್ ಮುಂತಾದವರೆಲ್ಲಾ ಬಂದಿದ್ದರು. ಆ ದಿನ ಸಂಗ್ರಹವಾದ ಹಣದ ಜೊತೆಗೆ ಒಂದು ದಿನದ ವೇತನವನ್ನೂ ಇದಕ್ಕಾಗಿ ಈ ನಾಟಕ ತಂಡದ ಕಲಾವಿದರು ಕಾಣಿಕೆಯಾಗಿ ನೀಡಿದರು. ಈ ಸಂದರ್ಭವನ್ನು ಎಂ.ಎಸ್. ರಮೇಶ್ ಹೇಳುವಾಗ, ತಾವು ಅದೇ ಕಲಾಕ್ಷೇತ್ರದ ನೌಕರರಾಗಿರುವ ಬಗ್ಗೆ ಹೆಮ್ಮೆಪಡುತ್ತಾರೆ. ಎಚ್.ಟಿ. ಅರಸು ಅವರ ಜೊತೆ ಬಾಲನಟನಾಗಿ ಆಗ ಆಡಿದ, ಉಂಡ, ನಕ್ಕು - ನಲಿದ ದಿನ ಸ್ಮರಿಸುತ್ತಾರೆ.

ಹಾಗೇ ಕಲಾವಿದ ಶನಿಮಹಾದೇವಪ್ಪ ಅವರೂ ಮಹಾದೇವಸ್ವಾಮಿ ಅವರ ಕಂಪನಿಯ ನಾಟಕಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ. ಅರಸು ಅವರನ್ನು ಇಂದಿನ ಕಲಾಕ್ಷೇತ್ರದ ಹುಟ್ಟಿನ ಸಂದರ್ಭ ಹಾಗೂ ಪ್ರಧಾನಿ ನೆಹರೂ ಅವರು ಬಂದು ಹೋದ ಕ್ಷಣಗಳನ್ನು, ಮಹಾರಾಜರು, ರಾಷ್ಟ್ರಪತಿಗಳು, ಶಿವಾಜಿಗಣೇಶನ್ ಅವರ ಜತೆ ಕಳೆದಿದ್ದನ್ನು ಗತಕಾಲದ ವೈಭವವಾಗಿ ನೆನೆಯುತ್ತಾರೆ.

## ಚಂದ್ರಹಾಸ ನಾಟಕದ ದುಷ್ಟಬುದ್ಧಿಯಿಂದ ಮನೆಮಾತು

ಚಂದ್ರಹಾಸ ನಾಟಕದ ದುಷ್ಟಬುದ್ಧಿ ಪಾತ್ರ ಎಚ್.ಟಿ. ಅರಸು ಅವರಿಗೆ ಬಹಳ ಅಪ್ಯಾಯಮಾನವಾದ ಪಾತ್ರ. ಅದು ಖಳನಾಯಕನಾದ್ರೂ, ಒಳಗೆ ಒಬ್ಬನು, ಹೊರಗೆ ಒಬ್ಬನು. ಒಳಗೆ ಕೆಟ್ಟವನು. ಹೊರಗೆ ಒಳ್ಳೆಯವನು, ಮುಖದಲ್ಲಿ ಅದನ್ನು ತೋರಿಸಬೇಕು. ಅದು ಕರಗತವಾಗಿತ್ತು ಎಂದು ಅವರು ನೆನೆಯುತ್ತಾರೆ. ಅಲ್ಲಿಗಾಗಲೇ ಜನ ಮೆಚ್ಚಿ ಮನೆಮಾತಾಗಿದ್ದರು. ಅರಸು ದುಷ್ಟಬುದ್ಧಿಯ ಪಾತ್ರದ ಬಗ್ಗೆ ಆ ನೆನಪನ್ನು ಸಂಭಾಷಣೆ ರೂಪದಲ್ಲಿ ಒಪ್ಪಿಸುತ್ತಾರೆ.

(ಚಂದ್ರಹಾಸ ನಾಟಕದಲ್ಲಿ ಮದನ ಪತ್ರ ತಂದು ಕೊಡ್ತಾನೆ. ಅದನ್ನು ದುಷ್ಟಬುದ್ಧಿ ಓದುತ್ತಾನೆ. ಓದಿ ಹೇಳ್ತಾನೆ:)
ಏನೀ ವಿಸ್ಮಯ ಕೃತಿ. ವಿಧಿ ಜಾರಿದ ಕಪಟ ತಂತ್ರವೋ

ನನ್ನಿ ಆಶಾಭಂಗ ವಿಕಟ ಮಂತ್ರವೋ
ಪೊರೆದು ನನ್ನ ಕೈಗಳ ಮೋಸವೋ
ಓದುವ ನನ್ನ ಕಣ್ಣುಗಳ ಭ್ರಾಂತಿಯೋ

ಓ! ಪರಮ ಶತ್ರು, ನಿನ್ನನ್ನು ಬ್ರಹ್ಮಾಂಡವೇ ಕಣ್ಣೆವೆ ಮುಚ್ಚದೆ ಕಾಯಲಿ, ನಿನಗೆ ವಿಧಿಯೇ ನಿಂತು ಆಯುಷ್ಯ ತುಂಬಲಿ, ನಿನ್ನ ಜೀವ ಹೀರಿದಲ್ಲದೆ ನಾ ಬಿಡೆ, ಮೇಧಾವಿಯ ನಗರದ ಮೃತ್ಯು ಪಂಜರದಿಂದ ತಪ್ಪಿ ಬದುಕಿದೆ, ಖಡ್ಗಗಳನ್ನು ವಂಚಿಸಿ ಉಳಿದೆ, ಇಲ್ಲಿಯೂ ನಿನ್ನ ಬಲೆ ಹರಿದು ಹೊರಗೆ ಬಂದೆ, ಆದರೆ ಈಗಲೂ ನನ್ನನ್ನು ವಂಚಿಸಿ ಉಳಿಯಲಾರೆ, ನಿನ್ನ ಮೃತ್ಯುವಿನಲ್ಲಿದೆ ನನ್ನ ಮಹಾ ಅಭ್ಯುದಯ, ನಿನ್ನ ಅಳಿವಿನಲ್ಲಿದೆ ನನ್ನ ಏಳಿಗೆಯ ಸ್ವರ್ಣ ಸಮಯಾsss,

ಹ್ಹ ... ಹ್ಹ... ಹ್ಹಾ... ಹ್ಹಾ..

ಅಟ್ಟಹಾಸದ ನಗುವಿನೊಂದಿಗೆ ಅಂತ್ಯವಾಗುವ ದುಷ್ಟಬುದ್ಧಿಯ ಒಟ್ಟು ಮಾತುಗಳಲ್ಲಿರುವ Force ಕೇಳಿದಾಗ ಅರಸು ಅವರ ಅಂದಿನ ಅಭಿನಯ ಹೇಗಿದ್ದಿರಬಹುದೆಂದು ಕಣ್ಣೆದುರು ಬರುತ್ತದೆ.

'ಪ್ರಪಂಚದ ರಾವಣ' ನಾಟಕದಲ್ಲಿ ರಾವಣಾಸುರನ ಪಾತ್ರ ಮಾಡುತ್ತಿದ್ದ ಎಚ್.ಟಿ. ಅರಸು ಅವರ ಆ ನಾಟಕದ ಕೆಲವು ಸಂಭಾಷಣೆ:

(ಸೀತಾಪಹರಣ ಆದ ಮೇಲೆ ಅಶೋಕವನದಲ್ಲಿ ಸೀತೆಯನ್ನು ಇಟ್ಟು ಅಂತಃಪುರಕ್ಕೆ ಬಂದು, ಆತ್ಮಸಾಕ್ಷಿಗೆ ತನ್ನೊಳಗೇ ಮಾತಾಡಿಕೊಳ್ಳುತ್ತಾನೆ ರಾವಣ:)

ಆಂತರ್ಯದ ಅಂತರಾಳದಲ್ಲಿ ಅದೇನೋ ಅತೃಪ್ತಿ, ಅದೆಂಥಹದೋ ಅಶಾಂತಿ. ಅದಾವುದೋ ಅನಪೇಕ್ಷಿತ ಅಧೈರ್ಯ, ಈ ಎಂಟೆದೆಯ ದಶಕಂಠ ರಾವಣನ ಗುಂಡಿಯನ್ನು ಬೆಚ್ಚಿಸಿ, ರೊಚ್ಚಿಗೆಬ್ಬಿಸುತ್ತಿರುವ ಆ ಅದೃಶ್ಯ ಶಕ್ತಿ ಯಾವುದು? ವಿವಿಧ ಲಲಾಟ ಲಿಖಿತನಾದ ವಿಧಾತನೇ? ಹ್ಹ ... ಹ್ಹಾ... ಆ ವಿಧಾತ ಪಟ್ಟವನ್ನೇ ಗಂಟುಕಟ್ಟಿ ನನ್ನ ಪಾದದಡಿಯಲಿ ಇಟ್ಟು ಪಂಚಾಂಗದ ಜೋಯಿಸನಾಗಿದ್ದಾನೆ - ಆ ಬ್ರಹ್ಮ! ಹಾಗಾದರೆ ಕ್ಷಣ ಕ್ಷಣಕ್ಕೂ ನನ್ನನ್ನು ಕಾಡುತ್ತಿರುವ ಭ್ರಾಂತಿ? ಕ್ಷಣಚಿತ್ರ, ಕ್ಷಣಪಿತ್ತನಾದ ನವಗ್ರಹಗಳ ಕಾಂತಿಯೇ? ಹೇ... ಆ ನವಗ್ರಹಗಳೆಲ್ಲಾ ನನ್ನ ಸಿಂಹಾಸನದ ಹಂತ ಹಂತಗಳಾಗಿ ಹೆಗಲು ಭರಿಸಿಕೊಳ್ಳುತ್ತಿದ್ದಾರೆ, ಹೆಗಲು... ಹಾಗಾದರೆ ನಿಮಿಷ, ನಿಮಿಷಕ್ಕೂ ನನ್ನನ್ನು ನಿಶ್ಯಕ್ತನನ್ನಾಗಿ ಮಾಡಿ, ಗಾಢವಾಗಿ ಕಾಡುತ್ತಿರುವ ಆ ಕಾಣದ ಕೈ ಯಾವುದು? ಅದೇನು ಈ ವಿಶ್ವ ಪ್ರಪಂಚದಲ್ಲಿ ನನಗಿಂತಲೂ ಪ್ರಬುದ್ಧವೇ? ಪರಾಕ್ರಮಿಯೇ? ಪ್ರಪಂಚವೇ? ಹೇsss ಸಾಧ್ಯವಿಲ್ಲ. ನಾನು ಚರ್ತುಭುಜ ಭುವನ ಲಂಕೇಶ್ವರ ರಾವಣ, ಸರ್ವತ್ರ, ಸರ್ವತಂತ್ರ ಸ್ವತಂತ್ರ್ಯನಾದ ಪ್ರಬುದ್ಧ ರಾವಣ. ಎಲ್ಲಾ ಬ್ರಹ್ಮಾಂಡ ದಂಡೋಪ ತಂಡಗಳನ್ನೇ ಚೆಂಡಾಡಬಲ್ಲ ದಂಡು ದಾಳಿಯ ಮಂಡಲದ ನಾಯಕರ ಗಂಡೆಯ ಗುಂಡಿಗೆಯ ಗಂಡರ ಗಂಡನಾದ ಪ್ರಚಂಡ ರಾವಣ...

ಹ್ಹ ... ಹ್ಹಾ... ಹ್ಹಾ...

ಇಂಥ ಪಾತ್ರಗಳನ್ನು ನಾಲ್ಕೈದು ವರ್ಷ ಹಿಂದೆಯೂ ಮಾಡಿರುವ ಅರಸು, ಇದರ ಸಾಹಿತ್ಯ ಕಣಗಾಲ್ ಪ್ರಭಾಕರ ಶಾಸ್ತ್ರಿ ಅವರದ್ದೆಂದು ಸ್ಮರಿಸಿಕೊಳ್ಳುತ್ತಾರೆ.

## ಸಿನಿಮಾ ಮೂಲಕ ಎಚ್.ಟಿ. ಅರಸು

ಮಹಾದೇವಸ್ವಾಮಿ ಅವರ ವೃತ್ತಿ ಕಂಪನಿಯಲ್ಲಿ ಅಭಿನಯಿಸುವಾಗಲೇ ಎಚ್.ಟಿ. ಅರಸು ಅವರಿಗೆ ಒಳ್ಳೆ ಹೆಸರು ಬಂತು. ಅಲ್ಲಿನ ಕೆಲವು ನಾಟಕಗಳು ನೂರಾರು ಪ್ರದರ್ಶನ ಕಂಡಿದ್ದರಿಂದಾಗಿ ಅವರ ಜನಪ್ರಿಯತೆಯೂ ಹೆಚ್ಚಿತ್ತು.

ರಂಗಭೂಮಿಯ ನಾಯಕ - ಖಳನಾಯಕನಿಗಿರುವ ಸದೃಢ ದೇಹ, ಸಂಭಾಷಣೆ ಒಪ್ಪಿಸಲು ಬೇಕಾದ ನೆನಪಿನ ಶಕ್ತಿ, ಮಾತಿನ ಏರಿಳಿತ, ಹಾಡುಗಾರಿಕೆಗೆ ಬೇಕಾದ ಶಾರೀರ ಎಲ್ಲವೂ ಎಚ್.ಟಿ. ಅರಸು ಅವರಲ್ಲಿತ್ತು. ಗೋಕಾಕ್ ಕಂಪನಿಯಲ್ಲಿದ್ದಾಗಲೇ ಶಂಕರ್‌ಸಿಂಗ್ ಇವರಿಗೆ ಆಹ್ವಾನವಿತ್ತು, ಸಿನಿಮಾ ಅಭಿನಯಕ್ಕೆ ಒಪ್ಪಂದ ಮಾಡಿಕೊಂಡಿದ್ದರು. ಹೀಗಾಗಿ ಮಹಾದೇವಸ್ವಾಮಿಗಳೂ ಅರಸು ಅಭಿನಯಿಸಲು ಒಪ್ಪಿದರು.

ಮೈಸೂರಿನಲ್ಲಿ ಕನ್ನಡ ಚಿತ್ರರಂಗಕ್ಕೆ ಆಗಿನ್ನೂ ಪ್ರವೇಶದ ಹಂತ. ಕೆಲವು ಪ್ರಯೋಗಗಳಿಂದ ಕನ್ನಡ ಚಿತ್ರಗಳ ಚಿತ್ರೀಕರಣ ನಡೆಸಿದ್ದರು. ಮದ್ರಾಸ್ ಚಿತ್ರೀಕರಣದ ಮೂಲ ಕೇಂದ್ರವಾದರೂ ಆಗಿನ ಮೈಸೂರು ರಾಜ್ಯದ ಮೈಸೂರು ನಗರ ಸಾಂಸ್ಕೃತಿಕ ರಾಜಧಾನಿಯೂ ಅನ್ನಿಸಿಕೊಂಡಿದ್ದರಿಂದಾಗಿ ಸಿನಿಮಾ ಕೂಡ ಹೊಸ ಆವಿಷ್ಕಾರದ ನೆಲೆಯಾಗಿ ತಳವೂರಲು ಪ್ರಯತ್ನಗಳಾಗುತ್ತಿದ್ದವು.

ಹೆಸರಾಂತ ಮಹಾತ್ಮ ಚಿತ್ರಸಂಸ್ಥೆಯಲ್ಲಿ ನಾಯಕ - ನಟನಾಗಿ ಅರಸು ಪ್ರವೇಶ ಪಡೆದರು. ಅಲ್ಲಿಯವರೆವಿಗೂ ವೃತ್ತಿ ರಂಗಭೂಮಿಯಲ್ಲಿ ಹನುಮಸಾಗರದ ತಿಪ್ಪರಾಜು (ಎಚ್.ಟಿ.) ಆಗಿ ಮೆರೆದವರು, ಪರಿಚಯವಾದವರು ಚಿತ್ರರಂಗಕ್ಕೆ ಹೊಸ ಹೆಸರಿನಿಂದ ಪರೀಕ್ಷೆಗೊಳಗಾದರು. ಅವೊತ್ತು "ಮಂಗಳಸೂತ್ರ' ಚಿತ್ರದ ಮೂಲಕ ನಾಯಕರಾದ ತಿಪ್ಪರಾಜು, "ಎಚ್.ಟಿ. ಅರಸ್" ಆಗಿ ಬದಲಾದರು. ಮೈಸೂರಿನಲ್ಲಿ ವೃತ್ತಿ ಕಲಾವಿದರಾಗಿ ಪರಿಚಿತರಾಗಿದ್ದ ಅವರಿಗೆ 'ಅರಸ್' ಹೆಸರು ಸೇರ್ಪಡೆ ಆಗಿದ್ದು ಬೇರೆ ಬೇರೆ ಕಾರಣಕ್ಕೆ ಉಪಯೋಗವೇ ಆಯಿತು.

ಮಹಾರಾಜರ ಕುಟುಂಬ, ಸಂಬಂಧಿಗಳು ಮೈಸೂರು ಹಾಗೂ ಸುತ್ತಮುತ್ತ 'ಅರಸು' ಕುಟುಂಬದವರಿದ್ದುದರಿಂದ ಎಚ್.ಟಿ. ಅರಸ್ ಎಂದರೆ ನಮ್ಮವರಿರಬೇಕೆಂದು ಹಲವಾರು ಮಾತಾಡಿಸಿಯೂ ಹೋಗಿದ್ದರು.

## ಪ್ರಧಾನಿ ಜವಾಹರಲಾಲ್ ನೆಹರು ನಾಟಕ ನೋಡಿ ಪ್ರಶಂಸಿಸಿದ್ದು

ಸ್ವಾತಂತ್ರ್ಯ ಭಾರತದ ಮೊಟ್ಟಮೊದಲ ಪ್ರಧಾನಿ ಜವಹರಲಾಲ್ ನೆಹರೂ ಸಾಹಿತ್ಯ ಸಂಸ್ಕೃತಿಯ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ತಾವೇ ಸ್ವತಃ ಬರಹಗಾರರೂ ಆಗಿದ್ದಲ್ಲದೆ, ಕಲೆ - ಕಲಾವಿದರಿಗೆ ಪ್ರೋತ್ಸಾಹ ಕೊಟ್ಟವರು. ಬಹು ದೊಡ್ಡ ಪ್ರಜಾಪ್ರಭುತ್ವವಾದ ಭಾರತದಲ್ಲಿ ನೂರಾರು ಸಮಸ್ಯೆಗಳಿದ್ದರೂ ಸಾಂಸ್ಕೃತಿಕ ಚಿಂತನೆಗಾಗಿ ಬಿಡುವು ಮಾಡಿಕೊಂಡು ಕಲಾವಿದರೊಡನೆ ಬೆರೆವುದನ್ನು ನೆಹರು ತಮ್ಮ ಬದುಕಿನಲ್ಲಿ ರೂಢಿಸಿಕೊಂಡಿದ್ದರು. ಇದಕ್ಕೆ ಪುರಾವೆಯಾಗಿ ಅವರು ಕರ್ನಾಟಕದ ಪ್ರವಾಸ ಕಾಲದಲ್ಲಿದ್ದಾಗ ಬೆಂಗಳೂರಿಗೆ ಭೇಟಿ ನೀಡಿದ್ದ ಒಂದು ಸಂದರ್ಭ; ರಂಗ ಕಲಾವಿದ ಎಚ್.ಟಿ. ಅರಸು ಅವರ ಬದುಕಿನಲ್ಲೊಂದು ಅವಿಸ್ಮರಣೀಯ ದಿನ. ಅದೊಂದು ಮರೆಯಲಾಗದ ಕ್ಷಣ. ನೆಹರು ಕೆಲ ನಿಮಿಷ ಅರಸು ಅಭಿನಯದ 'ರಾಜಾವಿಕ್ರಮ" ನಾಟಕ ನೋಡಲು ಬಂದರು. ಅಂದು ಭಾರೀ ಬಂದೋಬಸ್ತ್ ಏರ್ಪಾಡಾಗಿತ್ತು. ಸಿಟಿ ಮಾರುಕಟ್ಟೆಯ ಎದುರಿಗಿದ್ದ ದೊಡ್ಡಣ್ಣ ಹಾಲ್‌ನಲ್ಲಿ ನಾಟಕ ಪ್ರದರ್ಶನ. ಅವೊತ್ತು ದುಡ್ಡು ಕೊಟ್ಟು ಟಿಕೆಟ್ ಕೊಂಡವರಿಗೆಲ್ಲಾ ರೋಮಾಂಚನ. ಭಾರತದ ಪ್ರಧಾನಿಯೊಬ್ಬರು ಕನ್ನಡ ನಾಟಕವೊಂದರ ವೀಕ್ಷಣೆಗೆ ಬಂದಿದ್ದಾರಲ್ಲಾ ಎಂಬ ಹೆಮ್ಮೆ. ಅವರ ಶಿಸ್ತುಬದ್ಧ ಬಿಳಿ ಉಡುಪು ಅದರಲ್ಲೂ

ಕೋಟಿಗೆ ಸಿಕ್ಕಿಸಿಕೊಂಡಿದ್ದ ಗುಲಾಬಿ ಹಾಗೂ ತಲೆಯ ಟೊಪ್ಪಿಗೆಯಿಂದ ವಿಶಿಷ್ಟವಾಗಿ ಕಂಗೊಳಿಸುತ್ತಿದ್ದ ನೆಹರು ಅವರನ್ನು ಕಣ್ತುಂಬಿ ಕೊಂಡವರೆಷ್ಟೋ.

"ರಾಜಾವಿಕ್ರಮ' ನಾಟಕದಲ್ಲಿ ಖಳನಾಯಕ ದುರ್ಜಯನನಾಗಿ ಪಾತ್ರ ವಹಿಸಿದ್ದ ಅರಸು ಅವರಿಗಂತೂ ಮಹದಾನಂದ. ಉಳಿದ ಸಹ ಕಲಾವಿದರಿಗೂ ಅಷ್ಟೇ ಸಂತೋಷ ಇದೊಂದು ಸುವರ್ಣಾವಕಾಶವೆಂಬ ಹೆಗ್ಗಳಿಕೆ.

ಐದಾರು ನಿಮಿಷ ಬಿಡುವು ಮಾಡಿಕೊಂಡು ಬಂದ ಪ್ರಧಾನಿ ನೆಹರು ಅರ್ಧ ನಾಟಕ ಆಗುವವರೆಗೂ ಮುಂದಿನ ಸೀಟ್‌ನಲ್ಲೇ ಮೈಮರೆತು (ಭಾಷೆ ಅರ್ಥ ಆಗದಿದ್ದರೂ) ನಾಟಕದಲ್ಲಿ ತಲ್ಲೀನರಾಗಿದ್ದಾರೆ. ಪ್ರಧಾನಿಗಳ ಸಹಾಯಕರು ಬಂದು ಅವರ ಕಿವಿಯಲ್ಲಿ ಏನೋ ಹೇಳಿದರು. ಮುಂದಿನ ಕಾರ್ಯಕ್ರಮಕ್ಕೆ ಅವರು ಹೊರಡಬೇಕಿತ್ತು. ಹೊರಗಡೆ ಸಾವಿರಾರು ಜನ ಜಮಾಯಿಸಿ ಬಿಟ್ಟಿದ್ದಾರೆ. ಪ್ರಧಾನಿ ಅವರನ್ನು ಕರೆದೊಯ್ಯಲು ಹಾಗೂ ಅವರ ರಕ್ಷಣೆಗೆ ಹತ್ತಾರು ವಾಹನಗಳು ಬಂದಿದ್ದವು. ನೆಹರು ಎದ್ದವರೇ ಹಾರ್ಮೋನಿಯಂ ಪೆಟ್ಟಿಗೆ ಮೇಲೆ ಕಾಲಿಟ್ಟು ರಂಗ ಮಂಟಪದಲ್ಲಿ ಪಾದ ಸ್ಪರ್ಶ ಮಾಡಿದರು. ಕೆಲ ಕಲಾವಿದರು ಏನಾಗುತ್ತಿದೆ ಎಂದು ಯೋಚಿಸುವುದರೊಳಗೆ ಪ್ರಧಾನಿ ತಮ್ಮ ಸನಿಹದಲ್ಲಿದ್ದಾರೆ. ಆ ಕಡೆ ಈ ಕಡೆ, ಎಡಬಲ ವೀಕ್ಷಿಸಿದವರೇ ಸೈಡ್‌ವಿಂಗ್‌ನಲ್ಲಿ ಕುತೂಹಲದಿಂದ ನೋಡುತ್ತಿದ್ದ ಅರಸು ಹಾಗೂ ಸಹ ಕಲಾವಿದರನ್ನು "ಕಮಾನ್, ಕಮಾನ್" ಎಂದು ಕರೆದರು. ನಿಧಾನಕ್ಕೆ ಹತ್ತಿರ ಬಂದ ಅರಸು ಅವರಿಗೆ ಇದು ಕನಸೋ ನನಸೋ ಎಂದು ತಿಳಿವ ಮೊದಲೇ ಕೈ ಕುಲುಕಿ, ಬೆನ್ನು ತಟ್ಟಿ "ಗುಡ್, ಗುಡ್ ವಿಲನ್! ಯುವರ್ ಆ್ಯಕ್ಟಿಂಗ್ ಈಸ್ ಫೈನ್" ಎಂದು ಪ್ರಶಂಸಿಸುತ್ತಿದ್ದಂತೆ ಅಂಗರಕ್ಷಕರು ಹಾರ ಕೈಗಿತ್ತರು. ನೆಹರು, ಅರಸು ಅವರ ಕೊರಳಿಗೆ ಹಾರ ತೊಡಿಸಿದ ಆ ಕ್ಷಣ ಮಧುರ, ಅರಸು ಅವರ ಕಣ್ಣಲ್ಲಿ ಆನಂದಬಾಷ್ಪ.

ಆ ಮಧುರ ಕ್ಷಣ ನೆನಪಿಸಿಕೊಂಡು ಹೇಳುವಾಗ ಅರಸು ಆ ದಿನಗಳ ನೆನಪಿನ ಕಾಲದಲ್ಲಿ ವಿಹರಿಸುತ್ತಿದ್ದರು. ತಮ್ಮ ಕಣ್ಣುಗಳು ಆ ದಿನ ಪ್ರಧಾನಿ ನೆಹರೂ ಕಂಡ ಧನ್ಯತೆಯನ್ನು ಸೂಚಿಸುತ್ತಿದ್ದವು. ತಮ್ಮಂಥ ಬಡ ಕಲಾವಿದನಿಗೆ ಇಂಥ ರಸ ಘಳಿಗೆ ಹಾಗೂ ಪ್ರೋತ್ಸಾಹಗಳಷ್ಟೇ ಖುಷಿ, ನೆಮ್ಮದಿ ತಾನೇ ಎಂದು ಹೇಳುತ್ತಾರೆ.

ಪ್ರಧಾನಿ ನೆಹರು ಅವರೇ ಸ್ಟೇಜ್‌ಗೆ ಬಂದು "ಗುಡ್ ವಿಲನ್" ಎಂದು ಪ್ರಶಂಸಿದಾಗ ಕಂಪನಿ ಮಾಲೀಕ ಮಹಾದೇವಸ್ವಾಮಿ ಅವರಿಗೆ ಅರಸು ಬಗ್ಗೆ ಹೆಮ್ಮೆ ಅನ್ನಿಸಿತು.

ಮುಂದೊಂದು ದಿನ ನೆಹರು ಅರಸು ಅವರಿಗೆ ಸ್ಟೇಜ್ ಮೇಲೆ ಹಾರ ಹಾಕುವ ಫೋಟೋವೊಂದನ್ನು ಕಂಪನಿಯವರು ಕೊಟ್ಟಾಗ ಅವರ ಸಂತೋಷ ಇಮ್ಮಡಿಗೊಂಡಿತು. ಆ ಫೋಟೋ ತಮ್ಮ ವೃತ್ತಿ ಜೀವನದಲ್ಲಿ ಮಹತ್ವದ್ದೆಂದು ಅರಸು ಭಾವಿಸಿದ್ದಾರೆ. ತಮ್ಮ ಮುಖ ನೇರ ಕಾಣದಿದ್ದರೂ ಪಕ್ಕದಿಂದ ಹಾರ ಹಾಕುವ ಸಂದರ್ಭದ ಆ ಫೋಟೋ ಅವರ ನೆನಪಿನ ಪುಟಗಳಲ್ಲಿ ಶಾಶ್ವತವಾಗಿ ಹಸಿರಾಗಿ ಮನೆ ಮಾಡಿದೆ.

ಹೀಗೆ ಮೊದಲೇ ಇಂಥಾದ್ದೊಂದು ಫೋಟೋ ತೆಗೆವ ಸೂಚನೆ ತಿಳಿದಿದ್ದರೆ ಪ್ರಧಾನಿಗಳು ಕೈ ಕುಲಕುವ, ಬೆನ್ನು ತಟ್ಟುವ, ಹಾರ ಹಾಕುವ ಯಾವುದಾದರೂ ಒಳ್ಳೆ "ಫೋಸ್" ಕೊಡಬಹುದಾಗಿತ್ತು ಎಂದು ನಸುನಗುತ್ತಾರೆ.

## ಅಸೂಯೆ ಪಟ್ಟವರ ಚಾಡಿ ಮಾತು:

ನಾಯಕನಿಗಿಂತ ಖಳನಾಯಕನೇ ನಾಟಕದಲ್ಲಿ ಮಿಂಚುತ್ತಾನೆ. ಪ್ರೇಕ್ಷಕರ ಗಮನವನ್ನೂ ಸೆಳೆಯುತ್ತಾನೆ. ಅರಸು ಅಂಥ ಪ್ರತಿನಾಯಕನ ಪಾತ್ರದಲ್ಲಿ ಅಭಿನಯಿಸಿ ಭಾರೀ ಮೆಚ್ಚುಗೆ ಪಡೆದಿದ್ದರು. ಮೆಚ್ಚುಗೆ ಬಂದಾಗ ಸಹ ಕಲಾವಿದರಿಗೆ ಅಸೂಯೆ, ಈರ್ಷ್ಯೆ ಸಹಜ. ಅಂಥ ಒಂದು ಉದಾಹರಣೆಯನ್ನು ಹೇಳುವ ಮೂಲಕ ಅರಸು ನೆನಪಿನ ಅಲೆಯಲ್ಲಿ ತೇಲಿದರು.

ಚಂದ್ರಹಾಸ'ದಲ್ಲಿ ದುಷ್ಟಬುದ್ಧಿ ಪಾತ್ರ. ಮೊದಲನೇ ಸೀನ್‌ನಲ್ಲೇ ಆ ಮೇಧಾವಿ, ರಾಜನ ಹೆಂಡತಿಯ ಕೊಲೆ ಮಾಡೋ ದೃಶ್ಯ. ಆ ಕೊಲೆ ಮಾಡುವಾಗ, ಎಡಗೈಯಲ್ಲಿ ರಕ್ತಸಿಕ್ತ ಬಣ್ಣದ ಸ್ಪಾಂಜ್ ಇಟ್ಟುಕೊಂಡಿದ್ದರು. ಬಲಗೈಯಲ್ಲಿನ ಕತ್ತಿಯನ್ನು ಸ್ಪಾಂಜ್‌ಗೆ ಸ್ಪರ್ಶಿಸಿ (ತೂರಿಸಿ) ರಾಜನ ಹೆಂಡತಿಗೆ ತಿವಿಯುವ ಕ್ಷಣ. ತಿವಿದು ಅಟ್ಟಹಾಸದಿಂದ ನಗತೊಡಗಿದರು. ಹೊರ ತೆಗೆದ ಕತ್ತಿ ರಕ್ತಮಯವಾಗಿದೆ. ಕತ್ತಿ ಮೊನೆಯಿಂದ ರಕ್ತ ತೊಟ್ಟಿಕ್ಕುತ್ತಿದೆ. ಕೆಳಗೆ ಬಿದ್ದ ಆಕೆಯ ದೇಹದ ಮೇಲೆ ಹನಿಯುವ ರಕ್ತ ನೋಡುತ್ತ ಮತ್ತಷ್ಟು ಕೇಕೆ ಹಾಕುತ್ತಾರೆ. ಆಕೆ ತೊಟ್ಟಿದ್ದು ಕಲಾಪತ್ತಿನ ರೇಷ್ಮೆ ಸೀರೆ ಆಗಿನ ಕಾಲಕ್ಕೆ ಆರುನೂರು ರೂಪಾಯಿನ ಸೀರೆ ಅದು:

ಪಾತ್ರ ಅದ್ಭುತವಾಗಿ ಬಂದಿದ್ದರಿಂದ ಪ್ರೇಕ್ಷಕರು ಭಾರೀ ಕರತಾಡಣ ಮಾಡಿದ್ರು. ಸಹ ಕಲಾವಿದರಿಂದ ಈ ಪ್ರಶಂಸೆ ಸಹಿಸಲಾಗಲಿಲ್ಲ. ಮಾಲೀಕರಿಗೆ ಅರಸು ಬಗ್ಗೆ ಮೆಚ್ಚಿಗೆ ಅಭಿಮಾನ ಇದ್ರೂ, ರಾಜನ ಹೆಂಡತಿ ಪಾತ್ರ ಮಾಡಿದಾಕೆಗೆ ಕಿವಿ ಚುಚ್ಚಿದರು. ಅಷ್ಟು ದುಬಾರಿ ಸೀರೆಗೆ ರಕ್ತದ ಕಲೆ (ಬಣ್ಣ) ಬಿದ್ದುದಕ್ಕೆ ಚಾಡಿ ಹೇಳಿದ್ರು. "ಏಕೆ, ಅಲ್ಲೇ (ರಾಣಿ ಬಿದ್ದಲ್ಲೇ) ನಗಬೇಕು? ಕತ್ತಿ ಹಿಡಿದು ಆರ್ಭಟಿಸಬೇಕು? ಮುಂದಕ್ಕೆ ಹೋಗಿ ಅಭಿನಯಿಸಲು ಆಗೊಲ್ವೆ?" ಎಂದು ಅಸೂಯೆಯಿಂದ ಕರುಬಿದವರು ಡ್ರೆಸ್ ಕೊಡೋರಿಗೂ ಹೇಳಿದ್ರು. ಅವರು ಗೊಣಗುಟ್ಟುತ್ತ ದಿನವೂ ಈ ಕಲೆ ತೊಳೆಯಬೇಕಲ್ಲಾ ಎಂದು ಮಾಲೀಕರಿಗೆ ದೂರು ಹೇಳಿದ್ರು. ಇಷ್ಟಾಗ್ಯೂ ಅರಸು ಬಿದ್ದ ಕಲೆ ಒರಸಿಯೇ ಹೋಗ್ತಿದ್ರು.

ಚಾಡಿ ಮಾತು ಕೇಳಿ ಮಾಲೀಕರು ಹೇಳಿದ್ರು: "ಲೇ ಪುಟ್ಟಸ್ವಾಮಿ, ನಿನಗೆ ತೊಳೆಯೋಕೆ ಆಗುತ್ತೋ ಇಲ್ಲೋ ಅದನ್ನ ಮೊದಲು ಹೇಳು" ಅಂತಂದ್ರು. ಅದಕ್ಕೆ ಅವ್ನು, "ಇಲ್ಲಾ.... ಆಗುತ್ತೆ, ದಿವ್ಸಾ ಹಿಂಗಾದ್ರೆ ಚನ್ನಾಗಿರೋಲ್ಲ, ಸೀರೆ ಹಾಳಾಗಿ ಹೋಗುತ್ತೆ" ಎಂದು ಗೊಣಗಿದ್ದ.

ಆಗ ಮಹಾದೇವಸ್ವಾಮಿಗಳು "ಎಚ್.ಟಿ. ಅರಸ್ ದುಷ್ಟಬುದ್ಧಿ ಪಾತ್ರದಲ್ಲಿ ಸ್ಟೇಜ್ ಮೇಲೆ ಇದ್ದ ಅಂದ್ರೆ, ಅಂಥಾ ಕಲಾಪತ್ತಿನ ಸೀರೆ ವಾರಕ್ಕೊಂದು ತರ್ತಿನಿ, ನನ್ನ ಶ್ಯಾಟಾ ಹೊಯ್ತು, ನನ್ನ ಮಗ್ನೆ, ನಿನಗೆ ಪೆಟ್ರೋಲ್ ಬೇಕಾ, ಏನು ಬೇಕು ವಾಷ್ ಮಾಡೋಕೆ? ಅದನ್ನ ಕೇಳು. ಅವನ ಆ್ಯಕ್ಟಿಂಗ್ ಬೇಡ ಅಂತ ಅನ್ನೋ ನಿನಗೂ, ಹೇಳಿ ಕಳುಹಿಸಿದವನಿಗೂ ಒದೀತೀನಿ. ಇನ್ನೊಂದು ಸರ್ತಿ ಅರಸು ಬಗ್ಗೆ ದೂರು ಹೇಳಿದ್ರೆ ನಾಲ್ಕು ಬಿಗಿದು ಬಿಡ್ತೀನಿ ಹುಷಾರ್!" ಎಂದು ಎಚ್ಚರಿಕೆ ಕೊಟ್ರು. ಮಾರನೇ ದಿನದಿಂದ ಎಲ್ರೂ ತೆಪ್ಪಗೆ ಕೂತ್ರು - ಎಂದು ಆ ಸಂದರ್ಭವನ್ನು ಅರಸು ನೆನೆಯುವಾಗ ದುಷ್ಟಬುದ್ಧಿಯ ಸಂಭಾಷಣೆ ನೆನಪಿನಿಂದ ಹೇಳಿ, ಮನಸ್ಸು ಹಗುರಗೊಳಿಸಿಕೊಂಡು ಆನಂದಿತರಾಗುತ್ತಾರೆ. ಇಂಥ ಘಟನೆಗಳು ಮನಸ್ಸಿಗೆ ನೋವುಂಟು ಮಾಡುತ್ತವೆ. ಕೆಲವರು ಅಸೂಯೆಯಿಂದ ಕರುಬಬಹುದು. ನಾಟಕ ಕಂಪನಿಗಳಲ್ಲಿ ಅಥವಾ ಯಾವುದೇ ಕ್ಷೇತ್ರದಲ್ಲಿ ಇಂಥಾವು ಸರ್ವೆ ಸಾಮಾನ್ಯವಾಗಿರುತ್ತವೆ. ಇವೆಲ್ಲಾ ಮೀರಿ ಆತ ಗೆದ್ದರೆ ಅವರೇ (ಅಸೂಯೆ ಪಟ್ಟವರೇ) ಸ್ನೇಹಿತರಾಗುತ್ತಾರೆ.

## ಮಂಗಳೂರಿನ ಕ್ಯಾಂಪ್‌ನಲ್ಲಿ ಜನಮನ ಸೂರೆಗೊಂಡ ಅರಸು ;
## ಬೇಸ್ತುಬಿದ್ದ ಪೊಲೀಸರು

ಮಂಗಳೂರಿನ ಕ್ಯಾಂಪ್‌ನಲ್ಲಿ ಕಂಪೆನಿಯವರು ಹಾಕಿದ 'ರಾಜಾವಿಕ್ರಮ' ನಾಟಕ ಎರಡು ತಿಂಗಳವರೆಗೂ ಜಯಭೇರಿ ಬಾರಿಸಿತು. ಈ ಮಧ್ಯೆ ಒಂದು ದಿನ ನಾಟಕ ನಡೆಯುತ್ತಿದ್ದಾಗ ಮದ್ಯರಾತ್ರಿ ಹನ್ನೆರಡು - ಹನ್ನೆರಡೂವರೆಯ ಸುಮಾರಿಗೆ ರಾತ್ರಿಯ ಗಸ್ತು ತಿರುಗುತ್ತಿದ್ದ ನಾಲ್ಕು ಜನ ಪೋಲೀಸರು ಮತ್ತು ಒಬ್ಬ ಇನ್ಸ್‌ಪೆಕ್ಟರ್ ಥಿಯೇಟರ್‌ನ ಬಳಿ ಬಂದರು. ಅಲ್ಲಿದ್ದ ಮಾಲೀಕರು ಅವರನ್ನು ಆಹ್ವಾನಿಸಿ ಒಳಗೆ ಕೂರಿಸಿದರು. ಅವರು ಒಳಗೆ ಬಂದು ಕುಳಿತರು. ಆಗ ನಾಟಕದಲ್ಲಿ ನಡೆಯುತ್ತಿದ್ದ ದೃಶ್ಯ ಸ್ವಾರಸ್ಯಕರವಾದದ್ದು.

ರಾಣಿಯನ್ನು ಹಾಗೂ ರಾಜಕುಮಾರನನ್ನ ಹಿಂಸೆ ಮಾಡಿ ರಾಜಮುದ್ರಿಕೆಯನ್ನು ಕೇಳೋ ಸನ್ನಿವೇಶ, ಖಳನಾಯಕನ ಪಾತ್ರಧಾರಿಯಾಗಿದ್ದ ಅರಸು ಆಕೆಯನ್ನು ಕಾರಾಗೃಹದಲ್ಲಿರಿಸಿ ಹಿಂಸೆ ಕೊಡುವ ದೃಶ್ಯವನ್ನು ಮೈಮರೆತು ಅಭಿನಯಿಸುತ್ತಿದ್ದರು. ಆ ದೃಶ್ಯ ಕಂಡು ಪೋಲೀಸಿನವರ ಮನಸ್ಸಿಗೆ ಏನೆನ್ನಿಸಿತೋ ಏನೋ? ಬಹಳ ಕೋಪ ವ್ಯಕ್ತಪಡಿಸುತ್ತ ಆ ಮಗು

ರಾಜಕುಮಾರನನ್ನೆತ್ತಿ ಕತ್ತು ಹಿಚುಕಿ, ಚಾಕು ತೆಗೆದುಕೊಂಡು ಹೊಡೆಯಲು ಹೋದಾಗ ಪೋಲೀಸಿನವರು ರಿವಾಲ್ವರ್‌ನಿಂದ ಶೂಟ್ ಮಾಡೋದಿಕ್ಕೆ ಓಡಿ ಬಂದು ಬಿಟ್ಟರು!! ತಕ್ಷಣ ಪಕ್ಕದಲ್ಲಿದ್ದ ಮಹಾದೇವಸ್ವಾಮಿಯವರು ಗಾಬರಿಯಿಂದ,

“ಸ್ವಾಮಿ! ಸ್ವಾಮಿ!! ಏನ್ಮಾಡ್ತಾ ಇದ್ದೀರಿ? ಇದು ನಾಟಕ, ನಾಟಕ" - ಅಂತ್ಹೇಳಿ ಅವರನ್ನು ತಡೆದರು.

ವಾಸ್ತವಕ್ಕಿಳಿದ ಪೋಲೀಸಿನವರು ರಿವಾಲ್ವರ್ ಅನ್ನು ಹಿಂತೆಗೆದುಕೊಂಡು ಅತ್ತಿತ್ತ ತಿರುಗಿ ನೋಡಿ ಥಿಯೇಟರ್ ಅನ್ನು ಗಮನಿಸಿ ಅದನ್ನು ಹಾಗೇ ಕವರಿನಲ್ಲಿಟ್ಟು, ಎದ್ದು ಒಳಗೆ ಬಂದರು. ಅಷ್ಟೊತ್ತಿಗೆ ಅರಸು ಡ್ರೆಸ್‌ಗಿಸ್ ಬದಲಾಯಿಸಿ ಚೇರ್‌ನಲ್ಲಿ ಕೂತ್ಕೊಂಡಿದ್ದರು. ಪೋಲೀಸಿನವರು ಬಂದು ಅವರನ್ನು ನೋಡಿದರು. ಬಂದವರು ಒಳಗೆ ಬರದೆ ಅಲ್ಲೇ ನಿಂತು ಅವರನ್ನು ಬಹಳಹೊತ್ತು ನೋಡಿದ್ರು.

ಅವಸುರವರು, “ಬನ್ನಿ ಸ್ವಾಮಿ, ಒಳಗಡೆ ಬನ್ನಿ. ಯಾರು ಬೇಕಾಗಿತ್ತು?” ಎಂದರು.

“ತಾವೇ ಬೇಕಾಗಿ” ಎನ್ನುತ್ತಲೇ ಒಳಗೆ ಬಂದ ಪೋಲೀಸರು ಅವರ ಮೇಕಪ್ಪನ್ನೆಲ್ಲಾ ನೋಡಿ,

“ನಿಮ್ಮನ್ನ ಶೂಟ್ ಮಾಡಿ ಬಿಡ್ತಿದ್ನಲ್ರೀ ! (ನಗು) ನಿಮ್ಮ ಮಾಲೀಕರಿದ್ರು ನೀವು ಉಳಿದ್ರಿ. ನಂಗೆ ತಲೆ ಗಿರಂದುಬಿಡು. ಆ ರಾಣಿಗೆ ಹಿಂಸೆ ಕೊಡೋದನ್ನ ನೋಡಿ, ಆ ರಾಜಕುಮಾರನ ಕತ್ತನ್ನ ಎತ್ತಿ, ನೀವು ಬಾಕು ಎತ್ತಿದ್ರಲ್ಲಾ ನನಗೆ ತಡೆಯಕ್ಕಾಗ್ಲಿಲ್ಲ, ನಾನು ಶೂಟ್ ಮಾಡ್ಬಿಡ್ತಿದ್ದೆ. ನಿಮ್ಮ ಮಾಲೀಕರು ಹಿಡಿದುಬಿಟ್ರು. ನಾನು ಒಳ್ಳೆ ನಟನ ಕೋಲೆ ಮಾಡ್ಬಿಡ್ತಿದ್ನಲ್ಲಾ!” ಎಂದು ಪೇಚಾಡಿಕೊಂಡರು.

ಅರಸುರವರ ಅಮೋಘ ನಟನೆ ವೀಕ್ಷಕರ ಮನಃಪಟಲದ ಮೇಲೆ ಮೂಡಿಸಿದ ಪರಿಣಾಮ ಅಷ್ಟರ ಮಟ್ಟಿನದಾಗಿತ್ತು!

ಹ.ವೆಂ. ಸೀತಾರಾಮಯ್ಯನವರು ಬರೆದಿರುವ 'ಕಲಾವಿದರ ಪುಸ್ತಕ'ದಲ್ಲಿ ಈ ಘಟನೆ ನಮೂದಿಸಿದ್ದಾರೆ. ಎರಡು - ಮೂರು ಫೋಟೋಗಳ ಸಹಿತ ಅರಸುರವರ ರಂಗಭೂಮಿಯ ಮಹತ್ವದ ಘಟನೆಗಳನ್ನು ಬರೆದಿದ್ದಾರೆ.

ಇಂಥಾ ರಸವತ್ತಾದ ಘಟನೆಗಳ ಮೂಟೆಯನ್ನೇ ಹೊತ್ತಂತಿರುವ ಅರಸುರವರು, ಕಳೆದ ಇಪ್ಪತ್ತಾರು ವರ್ಷಗಳಿಂದ ಅದೇ ಸೋಮೇಶ್ವರ ಖಾನಾವಳಿಯಲ್ಲೇ ನೆಲೆಯೂರಿದ್ದಾರೆ. ಶ್ರೀಯುತ ಎಸ್.ಕೆ. ಕರೀಂಖಾನ್‌ರವರು ದ್ವಾರಕಾ ಹೊಟೇಲ್‌ನಲ್ಲಿದ್ದಂತೆ 'ಕೊಟ್ಟಷ್ಟು ತಗೊಂಡಷ್ಟು ಬಾಡಿಗೆ ನಿಯಮ'ಕ್ಕೆ ಅನುಸಾರವಾಗಿದ್ದಾರೆ.

## ಮೇಕಪ್‌ನಲ್ಲೂ ಪಳಗಿದ ಕೈ

ಅರಸು ತಮ್ಮ ಪಾತ್ರಗಳಿಗೆ ಅಗತ್ಯವಾದ ಮೇಕಪ್ ಅನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಅಷ್ಟೇ ಏಕೆ ಬೇರೆ ಪಾತ್ರಗಳನ್ನೂ ಮನಸ್ಸಿನಾಳಕ್ಕೂ ತೆಗೆದುಕೊಂಡು ಪಾತ್ರಕ್ಕೆ ತಕ್ಕಂತೆ ಮೇಕಪ್ ಮಾಡುತ್ತಿದ್ದರು. ಇದರಿಂದ ಪಳಗಿನ ಕೈ ಆಗಿದ್ದ ಅರಸು ಮಾಲೀಕರ ಪ್ರಶಂಸೆಗೆ ಅಷ್ಟೇ ಏಕೆ ಕಂಪನಿಯ ಇತರೆ ಕಲಾವಿದರೂ ಅರಸು ಮೇಕಪ್ ಮಾಡಲೆಂದು ದುಂಬಾಲು ಬೀಳುತ್ತಿದ್ದರು. ಇದಕ್ಕೆ ಪುರಾವೆಯಾಗಿ ಅವೊತ್ತು ರಂಗಭೂಮಿಯಲ್ಲಿ ಪಳಗಿ, ಹೊಟ್ಟೆಪಾಡಿಗಾಗಿ ಸಿನಿಮಾದಲ್ಲಿ ಚಿಕ್ಕ ಪುಟ್ಟ ಪಾತ್ರ ಮಾಡುತ್ತ ಬಂದ ಶನಿಮಹಾದೇವಪ್ಪ ಅಪಾರ ಮೆಚ್ಚಿಗೆ ಸೂಚಿಸಿ “ಅರಸು ಅವರೇ ನನ್ನ ಗುರುಗಳು, ಪಾತ್ರ ಮಾಡುವುದರಿಂದ, ಮೇಕಪ್ ಹಾಕಿಕೊಳ್ಳುವುದು ಹೇಗೆಂದು ಕಲಿಸಿದವರು' ಎಂದು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

# ಅಂಟಿದ ಸಿನಿಮಾ ನಂಟು

ಜಾನಪದ ಹಾಗೂ ಪೌರಾಣಿಕ ಚಿತ್ರಗಳ ಪವಾಡ ದೃಶ್ಯಕ್ಕೆ ಹೆಸರಾಗಿದ್ದ ವಿಠ್ಠಲಾಚಾರಿ ಅವರ ಜೊತೆ ಶಂಕರ್‌ಸಿಂಗ್ ಮೊದಲು ನವಜ್ಯೋತಿ ಸ್ಟುಡಿಯೋ ಆರಂಭಿಸಿದ್ದರು. ನಂತರ ತಮ್ಮದೇ ಮಹಾತ್ಮ ಸಂಸ್ಥೆ ಶುರು ಮಾಡಿದರು. ಈ ಸಂಸ್ಥೆ ಆ ಕಾಲಕ್ಕೆ ಪ್ರತಿಷ್ಠಿತ ಸಂಸ್ಥೆ. ಮೈಸೂರನ್ನು ಮುಖ್ಯ ಚಟುವಟಿಕೆಯ ಕೇಂದ್ರವಾಗಿಸಿಕೊಂಡ ಶಂಕರ್‌ಸಿಂಗ್ (ಖ್ಯಾತ ನಿರ್ದೇಶಕ ರಾಜೇಂದ್ರಸಿಂಗ್ ಬಾಬು ಅವರ ತಂದೆ) ಇದರ ಮಾಲೀಕರು ಹಾಗೂ ನಿರ್ದೇಶಕರು. ಅವರ ನಿರ್ದೇಶನದ 'ಮಂಗಳ ಸೂತ್ರ' ಚಿತ್ರದಲ್ಲಿ ಅರಸು ನಾಯಕರಾಗಿ ಅಭಿನಯಿಸಿದ ನಂತರ, ರಂಗಭೂಮಿ ನಂಟು, ಮಹಾದೇವಸ್ವಾಮಿ ಅವರ ಕಂಪನಿಯೊಡನಿದ್ದ ನಿಕಟ ಸಂಬಂಧ ಅವರ ಕಂಪನಿ ಎಲ್ಲೆಲ್ಲಿ ಬೇರು ಬಿಡುತ್ತೋ ಅಲ್ಲಿಗೆ ಪಯಣ - ಇವುಗಳಿಂದ ಸಿನಿಮಾ ಸಂಬಂಧ, ಅದರ ನಂಟನ್ನು ಹಚ್ಚಿಕೊಳ್ಳಲು ತೊಡಕು ಬಂತು. ಮಂಗಳೂರಿನಲ್ಲಿ ಕ್ಯಾಂಪ್ ಮಾಡಿದ್ದರಿಂದಾಗಿ ಮೈಸೂರಿಗೆ ಬಂದು ಹೋಗಿ ಸಿನಿಮಾದಲ್ಲಿ ಅಭಿನಯಿಸುವುದು ಕಷ್ಟವಾಯಿತು.

ಮುಂದೆ ಕ್ಯಾಂಪ್ ಮೈಸೂರಿನಲ್ಲೇ ಬೀಡು ಬಿಟ್ಟಿತು. ಪುನಃ ಶಂಕರ್‌ಸಿಂಗ್ ಅವರು ಅಭಿನಯಿಸಲು ಕೇಳಿದರು. ಕಂಪನಿ ಮಾಲೀಕ ಮಹಾದೇವಸ್ವಾಮಿ ಅವರಲ್ಲಿಗೆ ಬಂದು, "ಹಗಲು ಶೂಟಿಂಗ್ ಮಾಡಿಕೊಳ್ಳುತ್ತೇವೆ. ಸಾಯಂಕಾಲ ಐದು ಗಂಟೆಗೆ ಅರಸು ಅವರನ್ನು ಕಳುಹಿಸಿಕೊಟ್ಟು ಬಿಡುತ್ತೇನೆ. ನಿಮ್ಮ ನಾಟಕ ಪ್ರದರ್ಶನಕ್ಕೆ ಏನೂ ತೊಂದರೆ ಮಾಡೋಲ್ಲ" ಎಂದು ಕೇಳಿದರು. ಸ್ವಾಮಿ ಒಪ್ಪಿದರು. ರಾತ್ರಿ ನಾಟಕದಲ್ಲಿ ಅಭಿನಯ, ಹಗಲು ಸಿನಿಮಾ ನಂಟಸ್ಥನ! ಮಂಗಳಸೂತ್ರದಲ್ಲಿ ಅರಸು ನಾಯಕರಾಗಿದ್ದರೆ, ಆದವಾನಿ ಲಕ್ಷ್ಮೀದೇವಿ ನಾಯಕಿಯಾಗಿ ಪಾತ್ರ ನಿರ್ವಹಿಸಿದ್ದರು. ಇವೊತ್ತು ಹೆಸರಾಗಿರುವ ದೊರೆ - ಭಗವಾನ್ ನಿರ್ದೇಶಕದ್ವಯರಲ್ಲಿ ಒಬ್ಬರಾಗಿರುವ ಭಗವಾನ್ ಈ ಹಿಂದೆ ಸಿನಿಮಾದಲ್ಲೂ ಪಾತ್ರ ಮಾಡುತ್ತಿದ್ದರು. ಭಗವಾನ್ ಈ ಚಿತ್ರದಲ್ಲಿ ದ್ವಿತೀಯ ನಾಯಕ. ಇವರ ಜೊತೆ ಪ್ರತಿಮಾದೇವಿ ಮುಂದೆ (ಶಂಕರ್‌ಸಿಂಗ್ ಪತ್ನಿ) ದ್ವಿತೀಯ ನಾಯಕಿ ಪಾತ್ರ. ಆಗಿನ್ನೂ ಯೌವನಾವಸ್ಥೆಗೆ ಬರುತ್ತಿದ್ದ ಭಗವಾನ್, ಪ್ರತಿಮಾದೇವಿ ಉತ್ಸಾಹದಿಂದ, ಲವಲವಿಕೆಯಿಂದ ಶೂಟಿಂಗ್‌ನಲ್ಲೂ ಓಡಾಡಿಕೊಂಡಿದ್ರು. ಮುಂದೆ 'ಧರ್ಮಸ್ಥಳ ಮಹಾತ್ಮೆ' ಚಿತ್ರದಲ್ಲಿ ಅಣ್ಣಪ್ಪನಾಗಿ ಅರಸು ಪಾತ್ರಮಾಡಿದರು.

ಆಗ ಮೊದ ಮೊದಲೇನೋ ಕಂಪನಿ ಮಾಲೀಕ ಮಹಾದೇವಸ್ವಾಮಿ ಸಿನಿಮಾದಲ್ಲಿ ಅಭಿನಯಿಸಲು ಅರಸು ಅವರಿಗೆ ಒಪ್ಪಿಗೆ ಕೊಟ್ಟಿದ್ದೇನೋ ನಿಜ. ಆದರೆ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕೊಡಲಿಲ್ಲ. ಈ ನಡುವೆ ಶಂಕರ್‌ಸಿಂಗ್ ಮುಂದಿನ ಚಿತ್ರ 'ಪಾತಾಳ ಮೋಹಿನಿ'ಯಲ್ಲಿ ಮಂತ್ರವಾದಿ ಪಾತ್ರ ಕೊಟ್ಟರು. ಅದರಲ್ಲೂ ಅರಸು ಮಿಂಚಿದರು.

ಮದ್ರಾಸ್ ಕನ್ನಡ ಚಿತ್ರಗಳ ಚಿತ್ರೀಕರಣದ ತಾಣವಾಗಿತ್ತು. ಅಲ್ಲೊಂದು ಇಲ್ಲೊಂದು ಮೈಸೂರಲ್ಲಿ ಚಿತ್ರೀಕರಣವಾದರೂ, ಸೌಲಭ್ಯಗಳ ಕೊರತೆಯಿಂದಾಗಿ ಮದ್ರಾಸ್‌ಗೆ ಹೋಗಬೇಕಿತ್ತು. ಕನ್ನಡಿಗರು ಈ ಮಾಧ್ಯಮದಲ್ಲಿ ಕೆಲವೇ ಮಂದಿ ಇದ್ದರು. ತಮಿಳು, ತೆಲುಗು ಚಿತ್ರರಂಗದಿಂದ ಬರುತ್ತಿದ್ದ ತಾಂತ್ರಿಕ ವರ್ಗದಲ್ಲಿ ನಿರ್ದೇಶಕ, ಛಾಯಾಗ್ರಾಹಕ, ಮೇಕಪ್‌ಮನ್, ನೃತ್ಯಪಟು, ನಾಯಕಿಯರು ಎಲ್ಲಾ ಹೊರಗಿನಿಂದಲೇ ಬರಬೇಕಿತ್ತು. ನಾಯಕ - ನಟರು ಕನ್ನಡದವರೇ ಆಗುತ್ತಿದುದೊಂದು ವಿಶೇಷ. ಮುಂದೆ ರಾಜಕುಮಾರ್, ಕಲ್ಯಾಣ್‌ಕುಮಾರ್, ಉದಯಕುಮಾರ್, ಜಿ.ವಿ. ಅಯ್ಯರ್, ನರಸಿಂಹರಾಜು, ಬಾಲಕೃಷ್ಣ, ಅಶ್ವತ್, ಸಂಪತ್ ಇವರೆಲ್ಲಾ ಸಾಲು ಸಾಲಾಗಿ ಪ್ರವೇಶ ಪಡೆದು, ಮದ್ರಾಸ್‌ನಲ್ಲಿ ತಳವೂರಿ ಇಲ್ಲಾ ಮೈಸೂರು, ಬೆಂಗಳೂರಿನಿಂದ ಬಂದು ಹೋಗಿ ಮಾಡತೊಡಗಿದರು.

ಬಿ. ಆರ್. ಪಂತುಲು ಆಗ 'ಚಂದ್ರಹಾಸ' ಸಿನಿಮಾ ಮಾಡುವ ಸಿದ್ಧತೆ ಮಾಡಿದರು. ಅರಸು ಅವರಿಗೆ ಪುನಃ ಮದ್ರಾಸ್‌ಗೆ ಕರೆ ಬಂತು. ಅದರಲ್ಲಿ ಈ ಹಿಂದೆ ನಾಟಕದಲ್ಲಿ ಅಭಿನಯಿಸುತ್ತಿದ್ದ ದುಷ್ಟಬುದ್ಧಿ ಪಾತ್ರ ಕೊಡುವುದಾಗಿ ಹೇಳಿಕಳುಹಿಸಿದರು. ಆದರೆ ಏನೇನೋ ರಾಜಕೀಯದಿಂದಾಗಿ ಅದು ಉದಯಕುಮಾರ್ ಅವರ ಪಾಲಾಯಿತು. ಪಂತುಲು ಬೇರೆ ಪಾತ್ರ ಮಾಡಲು ಹೇಳಿದರು. ಇದರಿಂದ ಅರಸು ಅವರಿಗೆ ಅವಮಾನ ಆದಂತಾಯಿತು. ಅವರು ಹೇಳಿದರು: "ನನಗೆ ದುಷ್ಟಬುದ್ಧಿ ಪಾತ್ರ ಕೊಡುವುದಾಗಿ

ಕರೆಯಿಸಿಕೊಂಡ್ರಿ. ಈಗ ನೋಡಿದರೆ ಬೇರೆ ಪಾತ್ರ ಮಾಡಿ ಅಂತೀರಿ. ಸಾಧ್ಯವಿಲ್ಲ" ಎಂದು ಹೇಳಿದವರೇ ಬೇರೊಂದು ಪಾತ್ರ ಮಾಡುವುದನ್ನು ನಿರಾಕರಿಸಿ ಬಿಟ್ಟರು.

ಪಂತುಲು ಅವರ ಜೊತೆ ಅಷ್ಟು ಖಾರವಾಗಿ ಮಾತಾಡಿದ್ರೂ, ಅದು ಪಾತ್ರದ ಹಂಚಿಕೆ ಬಗ್ಗೆ ಅಷ್ಟೇ ಸಿಟ್ಟು ಇದ್ದದ್ದು ಅನ್ನುವುದು ಸ್ವಲ್ಪ ಕಾಲಕ್ಕೇ ತಿಳಿಯಿತು. ಕೆಲ ಕಾಲದ ನಂತರ ಪಂತುಲು ಚಿನ್ನದ ಗೊಂಬೆ' ಚಿತ್ರೀಕರಣಕ್ಕೆ ಸಿದ್ಧತೆ ಮಾಡಿಕೊಂಡ್ರು, ಅದರಲ್ಲಿ ಪಟೇಲ್ ಚೌಡಯ್ಯ ಅಂತ ರೌಡಿ ಪಾತ್ರ ಕೊಟ್ರು. ಚಿಕ್ಕಪುಟ್ಟ ಪಾತ್ರಗಳಿಗೆ ಈ ರೀತಿ ಬಂದು ಹೋಗಬಾರದು ಅಂತ ಅಂದುಕೊಂಡ್ರೂ, ಬಣ್ಣದ ಲೋಕ ಮತ್ತೆ ಮತ್ತೆ ನೆನಪಿನಾಳದಲ್ಲಿ ಅಭಿನಯಕ್ಕೆ ಆಹ್ವಾನ ಕೊಡುತ್ತಿತ್ತು. ಪಂತುಲು ಅವರೇನೋ ಪ್ರೀತಿಯಿಂದ, ವಿಶ್ವಾಸದಿಂದ ಕಾಣುತ್ತಿದ್ದರು. ಆದರೆ ಬೇರೆಯವರಲ್ಲಿ ಇದು ಅಷ್ಟಾಗಿ ಗೋಚರವಾಗಲಿಲ್ಲ. ಅಭಿನಯ ಅನಿವಾರ್ಯ ಆದಾಗ ಹಣ ಎಷ್ಟು ಬರುತ್ತೋ ಹೋಗುತ್ತೋ ಲೆಕ್ಕಾ ಹಾಗಲಾಗಲಿಲ್ಲ.

ಅರಸು ಅವರ ದುರದೃಷ್ಟವೋ ಏನೋ ಮುಂದೆ ಪಂತುಲು ನಿರ್ದೇಶನದ "ಕಿತ್ತೂರು ಚೆನ್ನಮ್ಮ" ಚಿತ್ರದಲ್ಲೂ ಕೈಗೆ ಬಂದದ್ದು ಬಾಯಿಗೆ ಬರಲಿಲ್ಲ ಅನ್ನುವಂತಾಯಿತು. ಬಿ. ಸರೋಜಾದೇವಿ ಕನ್ನಡದ ನಾಯಕಿಯಾಗಿ ತಮಿಳಿನಲ್ಲಿ ಖ್ಯಾತಿ ಗಳಿಸಿದ್ದರು. ಕಿತ್ತೂರು ಚೆನ್ನಮ್ಮನಾಗಿ ಆಕೆ ಅಭಿನಯಿಸುತ್ತಿದ್ದುದು ವಿಶೇಷವಾಗಿತ್ತು. ಅರಸು ಅವರಿಗೆ ಕೊಡಬೇಕಾದ ಪಾತ್ರ ಪಂತುಲು ಅವರ ಮನಸ್ಸಲ್ಲಿದ್ದುದು ಮಲ್ಲಪ್ಪಶೆಟ್ಟಿ ಪಾತ್ರ. ಆದರೆ ಕಂಪನಿ ಮಾಲೀಕ ಮಹಾದೇವಸ್ವಾಮಿ ಅವರ ಪ್ರವೇಶದಿಂದಾಗಿ ಆ ಪಾತ್ರ ಧಿಕ್ಕಿ ಮಾಧವರಾವ್ ಅವರ ಪಾಲಾಯಿತು. ಅರಸು ಅವರಿಗೆ ಟಿಪ್ಪುಸುಲ್ತಾನ್ ಪಾತ್ರ ಸಿಕ್ಕಿತು. ಸಿಕ್ಕ ಪುಟ್ಟ ಪಾತ್ರವನ್ನೂ ಚೊಕ್ಕವಾಗಿ ನಿರ್ವಹಿಸಿದ ತೃಪ್ತಿ ಅವರಿಗಿದೆ.

ಮಲ್ಲಪ್ಪ ಶೆಟ್ಟಿ ಪಾತ್ರ ತಪ್ಪಲು ಪಂತುಲು ಅವರಿಗೆ ಮಹಾದೇವಸ್ವಾಮಿ ಹೇಳಿದ್ದು: "…. ಇಲ್ಲಾ ಈ ಪಾತ್ರಕ್ಕೆ ಹೆಚ್ಚು ದಿನ ಶೂಟಿಂಗ್ ತೆಗೆದುಕೊಳ್ಳುತ್ತೆ. ಅರಸು ನನ್ನ ಕಂಪನಿಗೆ ಜೀವಾಳ. ಆತನಿಲ್ಲದಿದ್ದರೆ ಕಂಪನಿ ಹಾಳಾಗುತ್ತೆ. ನನಗೆ ಅರಸು ಮುಖ್ಯ. ಆತನಿಗೆ ಬೇರೆ ಪಾತ್ರ ಕೊಡಿ ಬೇಗ ಮುಗಿಯುವಂತಿರಬೇಕು" ಎಂದು ಕೇಳಿಕೊಂಡಿದ್ದರೆಂದು ತಡವಾಗಿ ತಿಳಿಯಿತು.

## ಕಲಾವಿದರ ಕಷ್ಟಕ್ಕೆ ಸ್ಪಂದಿಸಿದ ಪಂತುಲು ; ವಿಮಾನ ಏರಿದ ಅರಸು

ಮುಂದೊಂದು ದಿನ ಮಹಾದೇವಸ್ವಾಮಿ ಅವರಿಗೆ ಈ ಬಗ್ಗೆ ಹೇಳಿದರು: "ಸಾಲ ಸೋಲ ಮಾಡಿ ಕಂಪನಿ ಕಟ್ಟಿದ್ದೇನೆ. ಈಗ ತಾನೇ ಚೇತರಿಸಿಕೊಳ್ಳುತ್ತಿದ್ದೇನೆ. ನೀನು ತಿಂಗಳುಗಟ್ಟಲೇ ಶೂಟಿಂಗ್ ಹೋದ್ರೆ ನನಗೆ ನಷ್ಟ ಆಗುತ್ತೆ. ಅದಕ್ಕೆ ಪಂತುಲು ಅವರಿಗೆ ನಾನೇ ಹೇಳ್ದೆ" ಎಂದು ಹೇಳಿದರು. ಪಂತುಲು - ಮಹಾದೇವಸ್ವಾಮಿ ನಡುವೆ ಇಂಥ ಒಪ್ಪಂದ ಏರ್ಪಟ್ಟಿತ್ತು. ಮೂರು - ನಾಲ್ಕು ದಿನ ಶೂಟಿಂಗ್ ಎಂದು ಕಿತ್ತೂರು ಚನ್ನಮ್ಮಕ್ಕೆ ಒಪ್ಪಿದರು. "ಪಂತುಲು ದೊಡ್ಡ ಮನುಷ್ಯ. ಕಲಾವಿದರ ಬೆಲೆ ಅವರಿಗೆ ಗೊತ್ತಿತ್ತು. ನನ್ನ ಪಾತ್ರ ಕಂಪನಿಯಲ್ಲಿ ಎಂಥಾದ್ದೆಂದೂ ತಿಳಿದಿತ್ತು. ಹೀಗಾಗಿ ನಾನು ಮದ್ರಾಸ್‌ಗೆ ರೈಲಿನಲ್ಲಿ ಹೋಗಿ ಬಂದ್ರೆ ಸಮಯ ಹಾಳಾಗುತ್ತೆ ಅಂಥ ಭಾವಿಸಿ, ಏರೋಪ್ಲೇನ್ ಟಿಕೆಟ್ ತೆಗೆಸಿಕೊಟ್ರು. ಅದೇ ಪ್ರಥಮ ನಾನು ಏರೋಪ್ಲೇನ್ ಹತ್ತಿದ್ದು, ಅದೊಂದು ಸ್ಮರಣೀಯ ನೆನಪು. ಕಲಾವಿದನಾದ ನನಗೆ ಆಕಾಶದಲ್ಲಿ ಹಾರಾಡೋ ಅವಕಾಶ…" ಎಂದು ಪಂತುಲು ಅವರು ಕೊಟ್ಟ ಪ್ರೀತಿಯನ್ನು ಎಚ್.ಟಿ. ಅರಸು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಆ ದಿನ ವಿಮಾನ ಏರಿ ಹೋದವರಿಗೆ ಸಮಯ ವ್ಯಯ ಮಾಡುವಂತಿರಲಿಲ್ಲ. ಪಂತುಲು ಸ್ಕ್ರಿಪ್ಟ್ ಕೊಟ್ಟರು. 'ರಾಜ್‌ಕುಮಾರ್ ಅವರ ಶೂಟಿಂಗ್ ಸಹಾ ಇದೆ. ಸ್ವಲ್ಪ ಈ ಕಡೆ (ಡೈಲಾಗ್) ಗಮನ ಕೊಡಿ" ಅಂದ್ರು. ಅರಸು ಅವರನ್ನು ಕಂಡ ರಾಜಕುಮಾರ್ ಗೌರವದಿಂದ ಬರಮಾಡಿಕೊಂಡ್ರು, ಪ್ರೀತಿಯಿಂದ ಅಪ್ಪಿಕೊಂಡ್ರು, ಸೌಜನ್ಯ ಮೂರ್ತಿ ರಾಜಕುಮಾರ್ ರಂಗಭೂಮಿಯಿಂದ ಬಂದಿದ್ದ ಕಲಾವಿದರಿಗೆ ತುಂಬಾ ಗೌರವ ಕೊಡುತ್ತಿದ್ದರು. ತಮ್ಮ ರಂಗಭೂಮಿ ನಂಟು ಎಂಥಾದ್ದೆಂದು ಸ್ಮರಿಸಿಕೊಳ್ಳುತ್ತಿದ್ದರು. ಅಪ್ಪಾಜಿ ಅವರು ಹೀಗೆ ಹೇಳಿದ್ರು ಅಂಥಾ ಯಾವುದಾದರೂ ಘಟನೆ ಹೇಳ್ತಿದ್ರು. ಅವನ

ಅರಸು ಅವರಿಗೆ ರಾಜಕುಮಾರ್ ಅವರ ಪರಿಚಯ ಈ ಮೊದಲೇ ಇತ್ತು. ಬೆಂಗಳೂರಿನ ದೊಡ್ಡಣ್ಣ ಹಾಲ್‌ನಲ್ಲಿ ಪ್ರದರ್ಶನಗೊಳ್ಳುತ್ತಿದ್ದ ನಾಟಕಗಳಿಗೆ ಭಾನುವಾರ ತಪ್ಪದೇ ರಾಜಕುಮಾರ್, ಜಿ.ವಿ. ಅಯ್ಯರ್, ಬಾಲಕೃಷ್ಣ, ನರಸಿಂಹರಾಜು ಅವರುಗಳು ಭೇಟಿ ಕೊಟ್ಟು ನಾಟಕ ನೋಡಿ, ಬೆನ್ನು ತಟ್ಟಿ ಹೋಗುತ್ತಿದ್ದರು. ರಾಜಕುಮಾರ್ ಅವರಿಗೆ ಅದೆಲ್ಲದರ ನೆನಪು. ಅರಸು ಅವರನ್ನು ಬಳಿಯಲ್ಲೇ ಕೂರಿಸಿಕೊಂಡು ಯೋಗಕ್ಷೇಮ ವಿಚಾರಿಸಿದರು. "ಬನ್ನಿ, ಸಿನಿಮಾದಲ್ಲೇ ಇದ್ದು ಬಿಡಿ, ಏನು ಮಹಾದೇವಸ್ವಾಮಿ ಅವರ ಕೈಲಿ ಸಿಕ್ಕು ಹಾಕಿಕೊಂಡು ಬಿಟ್ಟಿದ್ದೀರಿ" ಎಂದು ಹಾಸ್ಯ ಮಿಶ್ರಿತ ಆಹ್ವಾನ ಕೊಟ್ಟರು. ಆ ಆಹ್ವಾನದಲ್ಲಿ ಸ್ವಾಮಿ ಅವರನ್ನು ಟೀಕಿಸುವ ಯಾವುದೇ ಯೋಚನೆಯೂ ಅವರಲ್ಲಿರಲಿಲ್ಲ. ತಮ್ಮಂತೇ ಮತ್ತೊಬ್ಬ ರಂಗಕಲಾವಿದ ಸೆಲ್ಯೂಲಾಯಿಡ್ ಲೋಕದಲ್ಲೂ ಮಿಂಚಲಿ ಎಂದೇ ಅವರ ಆಶಯವಾಗಿತ್ತು.

ಅಲ್ಲಿಗಾಗಲೇ ಹಲವು ರಂಗ ಕಲಾವಿದರು ಸಿನಿಮಾದಲ್ಲಿ ಬೇರು ಬಿಟ್ಟಿದ್ದರು.

## ಪೊಲೀಸ್ ಸ್ಟೇಷನ್, ಕೋರ್ಟ್ ಕಟಕಟೆ ಹತ್ತಿದ ಕತೆ...

ಅಷ್ಟು ಬೇಗ ರಾಜಕುಮಾರ್ ಅವರು ಹೇಳಿದ್ದ ಮಾತು, ಕೊಟ್ಟ ಆಹ್ವಾನ ಬೇರೊಂದು ತಿರುವು ಅಥವಾ ರೂಪು ಪಡೆಯುತ್ತೆ ಎಂದು ಎಚ್.ಟಿ. ಅರಸು ಭಾವಿಸಿರಲಿಲ್ಲ. ಮಹಾದೇವಸ್ವಾಮಿಗಳಿಗೂ ಅರಸು ಅವರಿಗೂ ಇದ್ದ ಹಲವು ವರ್ಷಗಳ ಸಂಬಂಧ ಕಹಿಯಾಗ ತೊಡಗಿತು. ಅರಸು ಹೇಳುವಂತೆ, "ಮಗನಂತೆ ಕಾಣುತ್ತಿದ್ದ ಸ್ವಾಮಿ, ನನಗೇಕೆ ಅನ್ಯಾಯವೆಸಗಿದರೊ, ಆ ಪರಮಾತ್ಮನೇ ಬಲ್ಲ!"

ಕಹಿ ಪ್ರಸಂಗದ ಆ ಘಟನೆಯನ್ನು ಈಗಲೂ ನೊಂದು ಎಚ್.ಟಿ. ಅರಸು ಹೀಗೆ ಹೇಳುತ್ತಾರೆ. "... ನನ್ನನ್ನು ಪೊಲೀಸ್ ಸ್ಟೇಷನ್‌ಗೆ ಎಳೆದರು. ಮುಂದೆ ಕೋರ್ಟ್ ಕಟೆಕಟೆವರೆಗೂ ಪ್ರಕರಣ ಹೋಯ್ತು... ಎರಡು ವರ್ಷಕ್ಕೊಮ್ಮೆ ಕಂಪನಿ ಜೊತೆ ಒಪ್ಪಂದಕ್ಕೆ ಸಹಿ ಮಾಡಿಕೊಡುತ್ತಿದ್ದ. ಅಗ್ರಿಮೆಂಟ್ ಮುಗೀತ ಬಂದಾಗ ಕೇಳಿದೆ... ನನಗಿಂತ ಹಿಂದೆ ಬಂದವರಿಗೆ ಐದು ಸಾವಿರ ರೂಪಾಯಿ ಗಿಫ್ಟ್ ಕೊಟ್ಟಿದ್ದೀರಿ. ನಾನು ಎಲ್ಲರಿಗಿಂತಲೂ ಸೀನಿಯರ್, ನನಗೇಕೆ ಕೊಡಬಾರದು; ಅಂದಿದ್ದಕ್ಕೆ, ಮುಂದೆ ಸಂದರ್ಭ ಬಂದಾಗ ಕೊಡುತ್ತೇನೆ ಅಂದ್ರು. ಮತ್ತೊಂದು ಸಲ ಕೇಳಿದಾಗ ದರ್ಪದಿಂದ, ಏನಯ್ಯಾ ಕೊಡ್ತೀನಿ ಅಂತ ಬರೆದು ಕೊಟ್ಟಿದ್ದೀನ, ಇನ್ನೊಂದು ಸಾರಿ ಕೇಳಿದ್ರೆ ಜೈಲಿಗೆ ಕಳುಹಿಸಿ ಬಿಡ್ತೀನಿ ಅಂದ್ರು! ಇದು ನನಗೆ ಆಘಾತ ಉಂಟು ಮಾಡಿತು. ಯೋಚಿಸಿದೆ... ಕೊನೆಗೆ ಲಾಯರ್ ಒಬ್ಬರನ್ನ ಹಿಡಿದು ನೋಟೀಸ್ ಕೊಡಿಸಿದೆ... ಕಂಪನಿ ಬಿಡ್ತೀನಿ ಅಂತ ಅವರಲ್ಲಿ ಹೇಳಿದ್ದೆ. ಪ್ರಮುಖ ಪಾತ್ರಗಳಲ್ಲಿ ನಂದೇ ಅಭಿನಯ. ಜನ ಕೂಡ ಬರುತ್ತಿದ್ದುದು ನನ್ನ ಪಾತ್ರ ನೋಡಲು ಅನ್ನೋದು ಗೊತ್ತಿತ್ತು. ಚಂದ್ರಹಾಸದಲ್ಲಿ ದುಷ್ಟಬುದ್ಧಿ ಪಾತ್ರ, ರಾಜಾವಿಕ್ರಮದಲ್ಲಿ ದುರ್ಜಯನ ಪಾತ್ರ, ರಾಮಾಯಣದಲ್ಲಿ ರಾವಣನ ಪಾತ್ರ, ಹರಿಶ್ಚಂದ್ರದಲ್ಲಿ ವಿಶ್ವಾಮಿತ್ರನ ಪಾತ್ರ... ಹೀಗೆ, ನಾನು ಕಂಪನಿ ಬಿಟ್ಟು ಹೋಗಿ ಬಿಡ್ತೀನಿ ಅಂತ ಕೋಪ (ಅವರಿಗೆ) ಬಂತು. ಇನ್ನೇನು ಎರಡು ದಿನ ಇದೆ ಕಂಪನಿ ಬಿಡೋದು ಅಂತ ಯೋಚಿಸಿದ. ಲೆಕ್ಕಾ ಹಾಕಿದ ಸಂದರ್ಭದಲ್ಲೇ ನನ್ನ ಬ್ಯಾಗ್‌ನಲ್ಲಿ ಬ್ರಾಂದಿ ಬಾಟಲಿ ಇರಿಸಿ, ಪೊಲೀಸರಿಗೆ ಕೊಡಿಸಿ ಬಿಟ್ರು. ನಾನು ಕುಡಿದೇ ಇಲ್ಲ, ಕುಡಿದೇನೂ ಮಾತಾಡಿಲ್ಲ - ಅಂದೆ. ಅದಕ್ಕೆ ಪೊಲೀಸ್ ಸ್ಟೇಷನ್‌ನಲ್ಲೇ ಹೇಳಿ ಅಂದವರು, 'ಇದೆಯೆಲ್ಲಾ ರೀ ಬಾಟಲಿ, ಕಾಣ್ತಾ ಇದೆ... ಇದಕ್ಕಿಂತ ಸಾಕ್ಷಿ ಬೇಕೆ? ನಡೀರಿ' ಅಂದ್ರು. ನಾನು ಸ್ಟೇಷನ್‌ಗೆ ಹೋದೆ. ಹೀಗೆ ಮಾಡೋದ್ರಿಂದ ನನ್ನ ಕೇಳುತ್ತಾನೆ - ಬಿಡಿಸಿ' ಅಂತ! ಸ್ವಾಮಿಗಳು ಭಾವಿಸಿದ್ರು ಅಂತ ಕಾಣುತ್ತೆ. ಬಿಡಿಸಿದಂತೆ ಮಾಡಿ ಪುನಃ ನನ್ನ ಕಂಪನಿಯಲ್ಲೇ ಇಟ್ಟುಕೊಳ್ಳಬಹುದು... ಎಂದು ಯೋಚಿಸಿದ್ರು. ನನಗೂ ಛಲ ಬಂತು. ಸ್ನೇಹಿತರು ಸೇರಿ ಸ್ಟೇಷನ್ನಿನಿಂದ ಏನೋ ಬಿಡಿಸಿದ್ರು. ಆದರೆ ಕೋರ್ಟ್‌ನಲ್ಲಿ ಇದರ ವಿಚಾರಣೆ ಬಂತು. ಜಡ್ಜ್ ಕೂಡ ನಸುನಕ್ಕು, "ಏನ್ರಿ ಇದು, ನೀವು ಅಪರಾಧಿನ? ಪಾತ್ರ ಮಾಡೋ ಬಿಟ್ಟು ಇಲ್ಲಿಗೆ ಬರೋದೆ?" ಅಂದ್ರು. ನಂತರ ಲಾಯರ್‌ಗೆ ಹೇಳಿದ್ರು. ಈ ಕೇಸ್ ತಗೋಳ್ಳಿ ಅಂತ. ಮುಂದೆ ವಿಚಾರಣೆ ಇದ್ದಾಗ ಬಂದು ಸಹಿ ಮಾಡಿ, ಮುಂದೆ ಹೀಗೆ ಮಾಡಲ್ಲ ಅಂತ ಹೇಳಿ ಬಿಡಿ, ಏನೂ ಆಗೋಲ್ಲ... ನೀವು ಹೋಗಿ ಅಂತ ಕಳುಹಿಸಿದರು. ಮುಂದೆ ಮಹಾದೇವಸ್ವಾಮಿಗಳ ಕಂಪನಿ ಬಿಟ್ಟು ಹೊರ ನಡೆದೆ. ಕಹಿ ಪ್ರಸಂಗದಿಂದ ನನ್ನ ಮನಸ್ಸಲ್ಲಿ ಶಾಶ್ವತ ಕಪ್ಪು ಉಳೀತು..." ಎಂದು ನಿಟ್ಟುಸಿರು ಬಿಡುತ್ತಾರೆ ಎಚ್.ಟಿ. ಅರಸು.

ರಾಜನಂತೆ ಮರದ ಅರಸು ಮುಂದೆ ಮೈಸೂರಿನಲ್ಲಿ ಚಿಲ್ಲರೆ ಪಲ್ಲರೆ ಕಂಪನಿಯ ಜೊತೆ ಒಪ್ಪಂದ ಮಾಡಿಕೊಂಡು ಅಭಿನಯಿಸುವಂತಾಯಿತು. ಈ ಕಹಿ ಪ್ರಸಂಗ ಮರೆತು ರಂಗಭೂಮಿಯಲ್ಲಿ ಮುಂದುವರೆದರೂ ಏಕೋ ಮನಸ್ಸು ನೊಂದಿತು. ಪುನಃ ಚಲನಚಿತ್ರದ ಕಡೆ ಮನಸ್ಸು ವಾಲಿತು.

ಅರವತ್ತರ ದಶಕದ ಕೊನೆಯಲ್ಲಿ ಬಿ.ಆರ್. ಪಂತುಲು ಕನ್ನಡ ಚಿತ್ರರಂಗದಲ್ಲಿ ಭಾರೀ ವೆಚ್ಚದ ಕಲರ್ ಚಿತ್ರ 'ಶ್ರೀ ಕೃಷ್ಣ ದೇವರಾಯ' ತೆಗೆಯಲು ಶುರು ಮಾಡಿದರು. ರಾಜಕುಮಾರ್, ಭಾರತಿ, ಜಯಂತಿ, ಪಂತುಲು, ಎಂ.ವಿ. ರಾಜಮ್ಮ, ನರಸಿಂಹರಾಜು ಮುಂತಾದ ಭಾರೀ ಕಲಾವಿದರ ತಂಡವೇ ಅದರಲ್ಲಿತ್ತು. ಅರಸು ಅವರಿಗೆ ರಾಜಾಸ್ತಾನದ ಜೈಪುರದ ಅರಮನೆಯ ಚಿತ್ರೀಕರಣದಲ್ಲಿ ಭಾಗವಹಿಸಲು ಕರೆ ಬಂತು. ಹೋಗಿ ಅಭಿನಯಿಸಿ ಬಂದರು.

## ಮನ್ನಾಡೆ ದನಿಗೆ ಅಭಿನಯಿಸಿದ್ದು

ಮುಂದೆ ರಾಜಕುಮಾರ್ ಅವರ ಜೊತೆ 'ಮಾರ್ಗದರ್ಶಿ', 'ಮೇಯರ್ ಮುತ್ತಣ್ಣ', 'ಮಯೂರ' ಮುಂತಾದ ಚಿತ್ರಗಳಲ್ಲೂ ಅರಸು ಅಭಿನಯಿಸಿದರು. ಮಾರ್ಗದರ್ಶಿ ಚಿತ್ರದಲ್ಲಿನ ಪಾತ್ರವಂತೂ ಎಂದೂ ಮರೆಯದ ಪಾತ್ರ. ಜೋಗಯ್ಯ ಅಂತ ಅದರಲ್ಲಿನ ಪಾತ್ರಕ್ಕೆ ಹೆಸರಾಂತ ಹಿಂದಿ ಗಾಯಕ ಮನ್ನಾಡೆ ಹಿನ್ನೆಲೆಯಾಗಿ ಹಾಡಿದ್ದರು. ಬಂಡೀಪುರದ ಕಾಡಿನಲ್ಲಿ ಚಿತ್ರೀಕರಣವಾದ ಅದರಲ್ಲಿ ಕುರಿಗಳನ್ನು ಕಾಯುತ್ತ ಕಂಬಳಿ ಹೊದ್ದುಕೊಂಡು ಅವುಗಳ ಹಿಂದೆ ಕುಂಟಿಕೊಂಡು ನಡೆದು ಹೋಗುತ್ತಿರೋ ಸನ್ನಿವೇಶ:

"ಹಿಡಿ ಮಣ್ಣೆ ಈ ಕಾಯss
ಇದರಲ್ಲಿ ಅನ್ಯಾಯ
ಸುಖ ದುಃಖ ಕಂದಾಯ
ಊರಲ್ಲಿ ಸಂದಾಯ... ಯಾರಲ್ಲಿ ಸಂದಾಯ"

ಮನ್ನಾಡೆ ಅವರ ಈ ಹಾಡಿನ ಮಾಧುರ್ಯವನ್ನು ಮೆಲುಕು ಹಾಕಿಕೊಂಡು ಆ ಸಂದರ್ಭದಲ್ಲಿ ರಾಜಕುಮಾರ್ ತೋರಿದ ಪ್ರೀತಿ - ಸಹಕಾರವನ್ನು ಮತ್ತೆ ಮತ್ತೆ ನೆನೆಯುತ್ತಾರೆ ಅರಸು, ಚಂದ್ರಕಲಾ ಮಾರ್ಗದರ್ಶಿಯ ನಾಯಕಿ. ದಿ. ನಾಗಪ್ಪ ವಿಲನ್, ಎಂ.ಆರ್.ವಿಠ್ಠಲ್ ಅವರು ನಿರ್ದೇಶಿಸಿದ್ದ ಈ ಚಿತ್ರ ಸಾಮಾಜಿಕ ಸಂದೇಶ ಸಾರುವ ಚಿತ್ರ. ಇಂಪಾದ ಹಾಡುಗಳು ಈ ಚಿತ್ರದ ಮತ್ತೊಂದು ಹೈಲೈಟ್.

ಇವೊತ್ತು ಮಾರ್ಗದರ್ಶಿ ಅಂದರೆ ನೆನಪಾಗೋದು ಮನ್ನಾಡೆ ಹಿನ್ನೆಲೆ ಗಾಯನ ಹಾಗೂ "ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ" ಎಂಬ ದೇಶ ಭಕ್ತಿ ಗೀತೆ. ಜನ ಸಂಘಟನೆ ಮೂಲಕ ದೇಶಪ್ರೇಮ ಸಾರುವ ಈ ಹಾಡಿನಲ್ಲಿ ಅರಸು ಅವರು ರಾಜ್ ಜೊತೆ ಅಭಿನಯಿಸಿದ್ದಾರೆ. ದೊಡ್ಡ ದೊಡ್ಡ ಕಲಾವಿದರು ಅದರಲ್ಲಿ ಅಭಿನಯಿಸಿದ್ದರು ಎಂಬ ನೆನಪಿನಿಂದ ಆ ಘಟನೆಯನ್ನು ಎಳೆ ಎಳೆಯಾಗಿ ಬಿಡಿಸಿ ಹೇಳುತ್ತಾರೆ.

'ಮೇಯರ್ ಮುತ್ತಣ್ಣ' ರಾಜ್‌ಕುಮಾರ್, ಭಾರತಿ, ದ್ವಾರಕೀಶ್ ಅಭಿನಯದ ಮತ್ತೊಂದು ಯಶಸ್ವಿ ಚಿತ್ರ. ಮುತ್ತಣ್ಣ ಹಳ್ಳಿಯಿಂದ ನಗರಕ್ಕೆ ಬಂದ ಅನಕ್ಷರಸ್ಥ. ನಗರಕ್ಕೆ ಬಂದು ಇಲ್ಲಿ ಪಡುವ ಬವಣೆ, ಅವನ ಗೊಂದಲ, ಅವನು ಶ್ರಮಜೀವಿಯಾಗಿ, ಕಾರ್ಮಿಕರ ಸಂಘಟಕನಾಗಿ, ಬೆಂಗಳೂರು ನಗರಸಭೆಗೆ ಮೇಯರ್ ಆಗಿ ಆಯ್ಕೆ ಆಗುವ ಪಾತ್ರದಲ್ಲಿ ರಾಜ್‌ಕುಮಾರ್ ಸೊಗಸಾಗಿ ಅಭಿನಯಿಸಿದ್ದಾರೆ. ಇದರಲ್ಲಿ ಎಚ್.ಟಿ. ಅರಸು ಅವರದ್ದು ಇನ್‌ಸ್ಪೆಕ್ಟರ್ ಪಾತ್ರ ಚಿಕ್ಕದಾದರೂ ಗಮನ ಸೆಳೆವ ಪಾತ್ರ ಅದಾಗಿತ್ತು ಎಂದು ಅರಸು ಹೇಳುತ್ತಾರೆ.

ಸಿನಿಮಾದಲ್ಲೊಂದು ಕಾಲು, ರಂಗಭೂಮಿಯಲ್ಲೊಂದು ಕಾಲು ಇಟ್ಟ ಸಂದರ್ಭದಲ್ಲಿ, ಅರಸು ಬಗ್ಗೆ ಪ್ರೀತಿ, ಗೌರವ ಇದ್ದವರು ಗುರ್ತಿಸಿ ಪಾತ್ರ ಕೊಡೋರು. ರಂಗಭೂಮಿ ಅಭಿನಯ ನೆನೆಸಿಕೊಂಡವರು, "ನಿಮ್ಮಂಥ ಕಲಾವಿದರು ಹೀಗೆ ಇದ್ದರೆ ಹೇಗೆ? ಬನ್ನಿ ನಮ್ಮ ಕಂಪನಿಯಲ್ಲೂ ಪಾತ್ರ ಮಾಡಿ" ಅಂದ್ರು. ಅದರಲ್ಲಿ ದೇಸಾಯಿ ಕಂಪನಿಯವರು ಮುಖ್ಯರು. ಅವರು ಕರೆದೊಯ್ದು ಕೈತುಂಬಾ ಹಣಾನೂ ಕೊಟ್ಟರು. ಆ ಕಾಲಕ್ಕೆ ಹತ್ತು ಸಾವಿರ ದೊಡ್ಡ ಮೊತ್ತ ಸಿಕ್ಕಾಗ ಕಂಪನಿ ಬಗ್ಗೆ ಗೌರವ ಮೂಡಿತು ಅನ್ನುತ್ತಾರೆ.

* * * * * *

## ತಂದೆ ಹಾಗೂ ಹೆತ್ತವ್ವನ ಸಾವಿನ ಮುಖ ಕಾಣದ್ದು ವಿಧಿ ಆಟವೋ?

ತಂದೆ ಸತ್ತಾಗ ಗೋಕಾಕ್ ಕಂಪನಿ ಬೀಡು ಬಿಟ್ಟಿದ್ದ ಭದ್ರಾವತಿಯಲ್ಲಿದ್ದರು. ಆಗ ಹುಟ್ಟೂರಿಗೆ ಹೋಗಿ ಬರಲು ಸಾರಿಗೆ ವ್ಯವಸ್ಥೆಯೇ ಇರಲಿಲ್ಲ. ಜೊತೆಗೆ ಈಗಿನಷ್ಟು ಆಧುನಿಕ ಸಂಪರ್ಕ ಸೌಲಭ್ಯಗಳೂ ಲಭ್ಯವಿರಲಿಲ್ಲ. ತಂದೆಯವರ ಅಂತ್ಯಕ್ರಿಯೆಯ ಸಂದರ್ಭದ ಮುಖದರ್ಶನ ಆಗಲೇ ಇಲ್ಲ. ಹುಡುಗನಾಗಿದ್ದಾಗ ಸಣ್ಣ ಪಾತ್ರ ಮಾಡಿದ್ದನ್ನು ನೋಡಿ ಖುಷಿಪಟ್ಟಿದ್ದ ತಂದೆ, ಮುಂದೆ ರಂಗ ಕಲಾವಿದನಾಗಿ ವೃತ್ತಿ ಆಯ್ಕೆ ಮಾಡಿಕೊಂಡಾಗ ಸಣ್ಣ ಭಿನ್ನಾಭಿಪ್ರಾಯ ಹೊಂದಿದ್ದರೂ ಅಂತರಾಳದಲ್ಲಿ ಮಗನ ಶ್ರೇಯೋಭಿವೃದ್ಧಿಗೆ ಆಶಿಸಿದ್ದರೂ ಕೊನೆಯಲ್ಲಿ ಮಣ್ಣಿನ ಋಣವೂ ಇಲ್ಲದ ನೋವು ಉಳಿಯಿತು.

ಇಂಥಾದ್ದೇ ಸಂದರ್ಭ ಪುನಃ ಹೆತ್ತವ್ವನ ಸಾವಿನಲ್ಲೂ ಬಂದೊದಗಿತು. ಆಗ ಕೊಳ್ಳೇಗಾಲದ ಕ್ಯಾಂಪ್‌ನಲ್ಲಿ ನಾಟಕವಾಡುತ್ತಿದ್ದರು. ತಾಯಿಯ ಸಾವಿನ ಸುದ್ದಿ ತಡವಾಗಿ ತಲುಪಿತು. ತಂದೆಯ ಅಂತ್ಯ ಮುಖದರ್ಶನ ಇಲ್ಲದ ದುಃಖವೂ, ತಾಯಿಯ ಅಂತ್ಯ ಸಂಸ್ಕಾರದ ಸಂದರ್ಭದಲ್ಲಿ ಆಯಿತು.

ಇದು ವಿಧಿಯ ಅಟ್ಟಹಾಸವೋ ದೌರ್ಭಾಗ್ಯವೋ ಅನ್ನುವೊಷ್ಟು ಅರಸು ಅವರ ಬದುಕಿನಲ್ಲಿ ಆಟ ಆಡಿದೆ. ತಂದೆ - ತಾಯಿಗಳ ಸಾವಿನ ಜೊತೆ ತನ್ನ ದೊಡ್ಡಣ್ಣನ ಸಾವಿನಲ್ಲೂ ವಿಧಿ ಆಟ ಆಡಿತು. ಆಗಲೂ ಸಂಚಾರಿ ನಾಟಕದಲ್ಲಿದ್ದುದರಿಂದ ಅವರ ಅಂತ್ಯ ದರ್ಶನವು ಆಗಲಿಲ್ಲ. ಕಂಪನಿ ನಾಟಕ ಸೇರಿ ಊರೂರು ಸುತ್ತುತ್ತ ಬಂದ ಅರಸು ಅವರ ಧರ್ಮಪತ್ನಿ ಹಾಗೂ ಮಗುವನ್ನು ಅಕ್ಕರೆಯಿಂದ ನೋಡಿಕೊಂಡಿದ್ದ ಅಣ್ಣನವರ ಅಂತ್ಯಕ್ರಿಯೆ ಮುಗಿದ ಎರಡು - ಮೂರು ದಿನಗಳ ನಂತರವೇ ಊರಿಗೆ ಹೋದರು.

ತಮ್ಮ ಬದುಕಿನಲ್ಲಿ ಇಂಥ ವೈಯಕ್ತಿಕ ದುಃಖ ಕಾರ್ಪಣ್ಯಗಳನ್ನು ಬದಿಗೊತ್ತಿ ರಂಗದ ಮೇಲಿನ ಬಣ್ಣದ ಪಾತ್ರಗಳಿಗೆ ಜೀವ ತುಂಬಿದ ಸಂದರ್ಭಗಳು ಎಷ್ಟೋ, ಮನೆಯಲ್ಲಿ ಶವಗಳನ್ನು ಇಟ್ಟು ಗೋಳಾಡಿದವರ ನೆನೆದೂ, ರಾಜನ ರೀತಿಯಲ್ಲೋ, ವಿಲನ್ ಪಾತ್ರದ ಅಬ್ಬರದಲ್ಲೋ ಕಿಡಿಗೇಡಿಯ ಪಾತ್ರದಲ್ಲೂ ಮುಳುಗಿ ಸೈ ಎನಿಸಿಕೊಂಡ ಅರಸು ಹೆಚ್ಚುಗಾರಿಕೆಗಾಗಿ ಬದುಕು ಸಾಗಿಸಲಿಲ್ಲ. ಆದರೂ ಅಂಥ ದುಃಖದ ಸಂದರ್ಭದಲ್ಲಿ ತಮ್ಮ ಕರ್ತವ್ಯದ ಪಾತ್ರ ಮುಗಿದ ನಂತರ ಪೋಷಾಕು ಬಿಚ್ಚಿಟ್ಟು ಸಹಜ ಉಡುಪಿನಲ್ಲಿ ಖಾಲೀ ರಂಗಭೂಮಿಯಲ್ಲಿ ಅತ್ತಿತ್ತ ಓಡಾಡುತ್ತ "ತಾಯೇ (ಅಮ್ಮಾ) ನನ್ನ ಪಾತ್ರ ಸಾರ್ಥಕ ಆಯಿತೇ?" ಎಂದು ಆತ್ಮಸಾಕ್ಷಿಗೆ ಕೇಳಿಕೊಂಡಿದ್ದುಂಟು. ಶ್ರದ್ಧೆ, ಭಕ್ತಿಯಿಂದ ಅನ್ನ ಕೊಟ್ಟ ಧಣಿ, ಕಂಪನಿಗೆ ಹಾಗೂ ರಂಗದ ಮೇಲಿನ ಪಾತ್ರಕ್ಕೆ ತಾವು ಋಣಿ ಎಂಬುದನ್ನು ಅರಸು ಸ್ಮರಿಸಿಕೊಂಡು ಭಾವುಕರಾದ ಸಂದರ್ಭಗಳಿವೆ.

ಇಂಥ ಘಟನೆಗಳು ಕಲಾವಿದನ ಬದುಕಲ್ಲಿ ಕಹಿ ಉಣಬಡಿಸಿದರೂ, ರಂಗದ ಮೇಲೆ ಪಾತ್ರಕ್ಕೆ ನ್ಯಾಯ ಸಲ್ಲಿಸಬೇಕಾದ್ದು ವೃತ್ತಿಗೆ ಕೊಡುವ ಗೌರವ ಅನ್ನುತ್ತಾರೆ ಅರಸು.

* * * * * * *

# “ಸಿಂಧೂರ ಲಕ್ಷ್ಮಣ' ನಾಟಕದಲ್ಲಿ ಸೋತು ಗೆದ್ದ ಅರಸು

ಎ.ಎಲ್. ಧುತ್ತರಗಿಯವರು ಬರೆದ 'ಸಿಂಧೂರ ಲಕ್ಷ್ಮಣ' ಅನ್ನೋ ನಾಟಕದಲ್ಲಿ 'ಲಕ್ಷ್ಮಣ'ನ ಪಾತ್ರಕ್ಕೆ ಅರಸುರವರನ್ನು ಆಹ್ವಾನಿಸಲಾಗಿತ್ತು. ದೇಸಾಯಿಯವರು, “ಈತ ಚಿತ್ರನಟ, ಒಳ್ಳೆ ಹೆಸರಿದೆ. ನಾವು ದುಡ್ಡು ತಗೋಬಹುದು' ಎಂದು ಯೋಚಿಸಿದ್ದರು. ಅಲ್ಲೋರ್ವ ಲಕ್ಷ್ಮಣನ ಪಾತ್ರಧಾರಿ ಅದಾಗಲೇ ಧುತ್ತರಗಿಯವರಿಂದ ಸಂಪೂರ್ಣ ಪ್ರಾಕ್ಟೀಸ್ ತೆಗೆದುಕೊಂಡು ತಯಾರಾಗಿ ಬಿಟ್ಟಿದ್ದ. ಇವರು ಹೋದಮೇಲೆ ಅರಸು ಅವರೇ ಈ ಪಾತ್ರ ಮಾಡುತ್ತಾರೆ ಅಂತ ಮಾಲೀಕರು ಹೇಳಿಬಿಟ್ಟರು.

ಆ ಹುಡುಗ, “ಅಣ್ಣಾ! ನಾನು ಎಂಟು ದಿವಸ ಪ್ರಾಕ್ಟೀಸೂ ಮಾಡಿದೀನಿ, ನಾ ಸ್ವಲ್ಪ ದಿವಸ ಮಾಡ್ತೀನಿ. ಆಮೇಲೆ ನೀವು ಮಾಡ್ತಿರೀಂತ ಹೇಳಿ ಅಣ್ಣಾ, ಅವರೊಂದು ಸ್ವಲ್ಪ ದಿವಸ ಮಾಡ್ಲಿ, ಆಮೇಲೆ ನಾನು ಮಾಡ್ತೀನೀಂತ ಅದ್ರಿಗೆ ಹೇಳಿ ಅಣ್ಣಾ” ಎಂದು ಅವರು ಉಳಿದುಕೊಂಡಿದ್ದ ಹೋಟಲ್ಲಿನ ರೂಮಿಗೆ ಬಂದು ಅವರ ಕಾಲಿಗೆ ನಮಸ್ಕರಿಸಿದ್ದ. ಆ ದಿನಗಳಲ್ಲಿ ಆಸೆ ಇದ್ದೇ ಇರುತ್ತೆ' ಎಂದುಕೊಂಡ ಅರಸು "ಅವ್ರು ಕಲ್ತಿದ್ದಾರೆ. ಅವ್ರು ಮಾಡ್ಲಿ. ನಾನು ಯಾವ್ದಾದ್ರೂ ಬೇರೆ ಪಾತ್ರ ಮಾಡ್ತೀನಿ” ಅಂದರು. ಅದಕ್ಕೆ ಮಾಲೀಕರು, “ಏ... ಬೇರೆ ಪಾತ್ರ ಏನಣ್ಣಾ? ಸಿಂಧೂರ ಲಕ್ಷ್ಮಣ ನೀವೇ” ಅಂದರು.

ತಕ್ಷಣ ದೇಸಾಯಿಯವರು ಧುತ್ತರಗಿಯವರನ್ನು ಕರೆದು ವಿಚಾರಿಸಿದರು. “ಒಂದು ನಾಲ್ಕು ಸೀನು ಪಾತ್ರ ಇದೆ - ಪೋಲೀಸ್ ಗೌಡನ ಪಾತ್ರ, ಅದನ್ನ ಬಿಟ್ರೆ ಮತ್ತೆ ದೊಡ್ಡ ಪಾತ್ರ ಯಾವ್ದೂ ಇಲ್ಲ” ಅಂದರು.

“ಅದ್ದೇ ಮಾಡ್ತೀನಿ ಬಿಡಿ ನಾನು” ಎಂದು ಬಿಟ್ಟರು ಅರಸು.

“ಏ... ನಿಮ್ಮನ್ನ ಚಿತ್ರನಟರೂಂತ ಅಲ್ಲಿಂದ ಕರೆಸಿ, ಆ ಪಾತ್ರ ನೀವು ಮಾಡೋದsss” ಆತಂಕದಿಂದಲೇ ದೇಸಾಯಿ ಅಂದರು. ಆಗ ಅರಸು ಹೇಳಿದರು: ಕಲಾವಿದನಿಗೆ ಯಾವ ಪಾತ್ರ ಆದ್ರೇನು? ಅಭಿನಯಿಸಿ ಮೆಚ್ಚುಗೆ ಪಡೆಯೋದು ಮುಖ್ಯ ಅಲ್ವೆ ಎಂದು ಪ್ರತಿಕ್ರಿಯಿಸಿದ್ರು.

ಸರಿ, ಒಪ್ಪಿಗೆಯೂ ಸಿಕ್ಕಿತು. ನಂತರ ಅವರು ಅದೇ ಪಾತ್ರವನ್ನು ಅದೆಷ್ಟು ಚೆನ್ನಾಗಿ , ಅಭಿನಯಿಸಿದ್ದರೆಂದರೆ ಆ ಪಾತ್ರ ಮಾಡಿದ ಮೇಲೆ ಸಿಂಧೂರ ಲಕ್ಷ್ಮಣನ ಪಾತ್ರವೇ ಅಡಗಿಹೋಗಿ ಬಿಡ್ತು! ಇದು ಹೈಲೈಟಾಯ್ತು!

ಆ ನಾಲ್ಕು ದೃಶ್ಯಗಳನ್ನು ಸಿಂಧೂರ ಲಕ್ಷ್ಮಣನೊಡನೆ ಅಭಿನಯಿಸಿದಾಗ ಆತನೇ ಹೇಳುತ್ತಿದ್ದ:

"ಗುರುಗಳೇ, ಆ ನಾಲ್ಕು ದೃಶ್ಯ ನಾನು ಠಳಾಯಿಸಿಕೊಂಡು ಮುಂದೆ ಹೋಗ್ಬೇಕಾದ್ರೆ ಬಹಳ ಕಷ್ಟವಾಗೋದು. ನಿಮ್ಮ ಜೊತೆ ಒಂದರಡು ಸೀನ್‌ನಲ್ಲಿ ಮಾತಾಡೋ ಸೀನಿದೆಯಲ್ಲಾ, ಅಲ್ಲಿ ಏನು ತಿಪ್ಪರಲಾಗ ಹೊಡೆದ್ರೂ ನಾನು ಮೇಲೆ ಹೋಗೋಕಾಗ್ಲಿಲ್ಲ.”

ಅಷ್ಟಾದ ಮೇಲೆ ಬಣ್ಣ, ಮೇಕಪ್ಪು ತೆಗೆದು ಸುಮ್ಮೆ ಕೂತ್ಕೋತಿದ್ದರು. “ಸೋಮ್ಯ” ಅಂತ ಪಾತ್ರದ ಹೆಸರು. ಪಾಳೇಗಾರ ಅವನು. ಆ ಪಾತ್ರವನ್ನು ಸ್ವತಃ ಧುತ್ತರಗಿಯವರೇ ಮಾಡುತ್ತಿದ್ದರು.

“ನೀವ್ಯಾಕೆ ಮಾಡ್ತೀರಿ ಕವಿಗಳೇ?” ಅಂದರು ಅರಸು.

“ಏನು? ಯಾರೂ ಇಲ್ಲ ಏನ್ಮಾಡೋದು? ನಾನೇ ಮಾಡಿದೆ.” ಅಸಹಾಯಕರಂತೆ ಅಂದರು ಧುತ್ತರಗಿಯವರು.

“ನನಗೆ ಕೊಡಿ” ಕೇಳಿದರು ಅರಸು.
“ಏ... ಚಿಕ್ಕಪಾತ್ರ; ನೀವೇನು? ನಿಮಗೆ ಬ್ಯಾಡ.”

“ಪಾತ್ರ ಮಾಡೋಕೇನು? ಕೊಡ್ರಿ. ನೀವ್ಯಾಕೆ ಮಾಡ್ತೀರಿ ಕವಿಗಳೆ? ನಾವು ನಟರು. ಈ ಪಾತ್ರ ಮುಗಿದಿರುತ್ತಲ್ಲ. ಬಿಡುವಿದೆ ಆ ಪಾತ್ರ ಮಾಡ್ತೀನಿ ಕೊಡಿ” ಎಂದರು ಅರಸು.

ಆ ಪಾತ್ರ ಕೈಗೆ ಸಿಕ್ತು. ಅರಸುರವರು ನೀಗ್ರೋಗಳ ಥರಾ ಮೇಕಪ್ ಮಾಡಿ ಒಂದು. ವಿಗ್ ಹಾಕ್ಕೊಂಡು, ಮೀಸೆ-ಗೀಸೆ ಎಲ್ಲಾ ಕೆಳಗೆ ಬಿಟ್ಕೊಂಡು, ಜುಬ್ಬಾ-ಗಿಬ್ಬಾ ಹಾಕ್ಕೊಂಡು ಗನ್ನು ಹೆಗಲಿಗೆ ನೇತಾಕ್ಕೊಂಡು, ಪಂಚೆ ಉಟ್ಕೊಂಡು ಗೌಡನ ಹಿಂದೆ ಬರುವರು. ಗೌಡನ ಹಿಂದ್ಗಡೆ ಬಂದು ಅಲ್ಲಿ ಒಂದು ನೋಟ ಕೊಟ್ಟು ಹಿಂಗೆ ನಿಂತ್ಕೊಂಡು ಬಿಟ್ರೆ ಜನ “ಭರ್‍ರೋ...!” ಅಂತ ಚಪ್ಪಾಳೆ ತಟ್ಟಿಬಿಟ್ಟರು!

ಅರಸು ಈ ಪಾತ್ರ ಮಾಡಿದಾಗ ದೇಸಾಯಿಯವರು ಬಂದು ಕೂತ್ಕೋಳೋರು. 'ಇವ್ನು ಇಂಥಾ ಪಾತ್ರನೂ ಹ್ಯಾಗೆ ಮಾಡ್ತಾನೆ?! ನೋಡೋಣ ಅಂತ. ಎರಡು ದಿನ ಆದ್ಮೇಲೆ ಆ ಸೋಮ್ಲ್ಯನ ಪಾತ್ರ ಅವನೇ ಮಾಡ್ಬೇಕಪ್ಪಾ, ಇನ್ಯಾರಿಗೂ ಕೊಡಿಸ್ಬೇಡ್ರಿ” ಅಂದ್ರು. ಅರಸು ಕಡೆ ತಿರುಗಿ, “ತಮ್ಮಾ ನೀನೇ ಈ ಕ್ಯಾಂಪ್ ಮುಗಿಯೋವರ್ಗೂ ಮಾಡ್ಬೇಕು, ಇನ್ಯಾರು ಮಾಡಿದ್ರೂ ಆ ಥರಾ ಆಗೋದಿಲ್ಲ ಅಂತಂದ್ರು.

ಆ ಪಾತ್ರದ ಜನಪ್ರಿಯತೆ ಎಷ್ಟಿತ್ತೆಂದರೆ ಕಾಲೇಜಿನ ಹುಡುಗರು ನಾಟಕ ಅರ್ಧ ಆಗಿರುವಾಗ ಟಿಕೆಟ್ ತಗೊಂಡು ಬರೋವ್ರು, ಆ ಸೋಮ್ಲ್ಯಾನ ಪಾತ್ರ ನೋಡೋದಿಕ್ಕೆ. ಅರಸು ಪುಟ್ಟ ಪಾತ್ರಕ್ಕೂ ಜೀವಕೊಟ್ಟು ಮಾಲೀಕರನ್ನು, ಪ್ರೇಕ್ಷಕರನ್ನು ತೃಪ್ತಿಪಡಿಸುತ್ತಿದ್ದರು.

## ಏಳಿಗೆ ಸಹಿಸದೆ ಒಳಗೇ ಕರುಬಿದ ಮಂದಿ

ಅರಸುರವರು ವಿಲನ್ ಪಾರ್ಟು ಮಾಡುವವರಾದರೆ, ಶ್ರೀಕಂಠಮೂರ್ತಿ ಅನ್ನುವವರು ರಾಜಾ ಪಾರ್ಟು ಮಾಡುವವರು, “ಆದ್ರೆ ಶ್ರೀಕಂಠಮೂರ್ತಿ ಸ್ಟೇಜ್ ಮೇಲೆ ಹಾಡಿದ್ರೆ ಎಲ್ಲರೂ - ತಲೆ ದೂಗಬೇಕು. ಅಂಥಾ ಹಾಡುಗಾರಿಕೇನ ನಾನು ನೋಡಿಲ್ಲ. ಅಷ್ಟು ತಲ್ಲೀನತೆಯಾಗಿ, ಬಹಳ ಸೊಗಸಾಗಿ ಹಾಡೋವ್ರು” ಎಂದು ತುಂಬು ಹೃದಯದಿಂದ ಅವರನ್ನು ಕೊಂಡಾಡುತ್ತಾರೆ ಅರಸು.

ಒಂದು ದಿನ ಶ್ರೀಕಂಠಮೂರ್ತಿಗಳು ಬೆಂಗಳೂರಿನ ಕ್ಯಾಂಪ್‌ನಲ್ಲಿ ಮಹಾದೇವ ಸ್ವಾಮಿಗಳನ್ನು ಕೇಳಿದ್ರು,

“ಎಲ್ಲಾ ಕಡೇಲೂನೂ ಅರಸು ಅವ್ರದ್ದೇ ಬ್ಯಾನರ್ ಇದ್ದಾವೆ. ನಮ್ದು ಕಡಿಮೆ ಇದ್ದಾವೆ. ನನ್ನು ಅಲ್ಲಿ - ಇಲ್ಲಿ ಒಂದೊಂದು ಕಾಡ್ತಾವೆ, ನಮ್ಮ ಬ್ಯಾನರ್ ಯಾಕಿಲ್ಲ?” ಅಂತ.

ಆಗ ಮಹಾದೇವ ಸ್ವಾಮಿಗಳು ನಕ್ಕು, “ಅದು ಯಾಕೆ ಬೇಕಾಗಿದೆ ಶ್ರೀಕಂಠಮೂರ್ತಿ ನಿನಗೆ?” ಅಂದ್ರು.

“ಅಲ್ಲ ಸುಮ್ಮೆ ಕೇಳಿದೆ” ಅಂತ ಅವರಂದ್ರು.

“ನೋಡಪ್ಪಾ, ನಿಜವಾದ ಮಾತು ಹೇಳ್ಬೇಕಂದ್ರೆ ಬೆಂಗಳೂರಿನಲ್ಲಿ ನಾನು ವಿಧಾನಸೌಧಕ್ಕೆ ಹೋಗ್ತಿರ್ತೀನಿ, ವಿಧಾನಸೌಧದಲ್ಲಾಗ್ಲೀ ಎಲ್ಲಿ ಹೋದ್ರೂನೂ ನಾನು ಹೋದಲ್ಲಿ ಆ ಎಚ್.ಟಿ. ಅರಸೂನ ಕೇಳ್ತಾರೇ ಹೊರ್ತು ನಿನ್ನನ್ನ ಕೇಳೋದಿಲ್ಲ. ನಿನ್ನ ಬಗ್ಗೆ ಏನಾದ್ರೂ ಪ್ರಸ್ತಾಪ ಬಂದಾಗ 'ಬಹಳಾ ಚೆನ್ನಾಗಿ ಹಾಡ್ತಾರಪ್ಪಾ, ತುಂಬಾ ಒಳ್ಳೆ ನಟರು. ರಾಜಾ ಪಾರ್ಟು ಬಹಳ ಚೆಂದ ಮಾಡ್ತಾರೆ' ಅಂತ ಹೇಳ್ತಾರೆ. ಎಲ್ನೋಡಿದ್ರೂ ಅವನನ್ನೇ ಕೇಳ್ತಾರಪ್ಪಾ. ಮತ್ತೆ ಆತನ್ನ ಕೇಳಿ ಟಿಕೆಟ್ ತಗೊಳ್ತಾರೆ. ನಾನು ಬುಕಿಂಗ್ ಜಾಗದಲ್ಲಿ ಕೂತ್ಕೊಂಡಿದ್ದೀನಿ. ಒಂದು ದಿವಸ ಅವನು ಪಾತ್ರ ಮಾಡೋದು ಬಿಟ್ಟಿದ್ದ. ತಿರುಗಿ ಮೂರನೇ ದಿವಸ ನಾನು ಬುಕ್ಕಿಂಗ್ ಜಾಗದಲ್ಲಿ ಕೂತ್ಕೊಂಡಿದ್ದಾಗ, ನಿನ್ನೆ ಬೇರೆಯವರು ಪಾತ್ರ ಮಾಡಿದ್ರು. ಆ ಅರಸು ಮಾಡೋ ಹಾಗಿದ್ರೆ ನಮಗೆ ಟಿಕೆಟ್ ಕೊಡಿ, ಇಲ್ದಿದ್ರೆ ನಮಗೆ ಬೇಡ ಅಂತಂದ್ರು. ಅದನ್ನ ಹೇಳ್ಬಾರ್ದು, ನಿನಗೆ ಅವಮಾನವಾಗುತ್ತೆ. ನೀನು ಒಳ್ಳೆಯ ಹಾಡುಗಾರಿಕೆ ಮನುಷ್ಯ.”

ಅಂತ ಇಷ್ಟು ಹೇಳಿ ಸಮಾಧಾನ ಮಾಡಿದ್ರು.

## ಹಾಸನದಲ್ಲಿ ಜಯಭೇರಿ ಬಾರಿಸಿದ 'ರಾಜಾವಿಕ್ರಮ'

ಮೊದಲು ರಾಜಾವಿಕ್ರಮ ನಾಟಕದಲ್ಲಿ ಅರಸುರವರೇ ವಿಕ್ರಮನ ಪಾತ್ರ ಮಾಡ್ತಿದ್ದರು. ಅದು ಬಿ.ಸಿ. ಶ್ರೀನಿವಾಸ್‌ರವರು ಬರೆದ ನಾಟಕ. ಅವರೇ ನಾಟಕ ಕೊಡಿಸಿದ್ದರು. ಮೈಸೂರು ಟೌನ್ ಹಾಲಲ್ಲಿ ನಾಟಕ ಪ್ರದರ್ಶಿತವಾಗುತ್ತಿತ್ತು. ಅದಕ್ಕೆ ಆಗ ಕಲೆಕ್ಷನ್ ಆಗ್ಲಿಲ್ಲ.

"ನಾಟಕ ಚೆನ್ನಾಗಿದೆ, ನಾಟಕ ಚೆನ್ನಾಗಿದೆ" ಅಂದರೇ ಹೊರತು ಕಲೆಕ್ಷನ್ ಮಾತ್ರ ಆಗ್ಲಿಲ್ಲ. ಆಮೇಲೆ ಮಹಾದೇವಸ್ವಾಮಿಗಳು, ನಾಟಕ ನಿಲ್ಲಿಸ್ಬೇಕು. ನಾನು ಎಲ್ಲಾ ಕಂಪೆನಿ Management ಮಾಡಿದ್ರೂ ಕೂಡಾ ನನ್ನ ಕಂಪೆನಿಗೇ ದುಡ್ಡಾಗ್ಲಿಲ್ಲಾ ಅಂತಂದ್ರೆ ಇನ್ನು ನಾಟಕ ಮಾಡೋದ್ರಲ್ಲೇನು ಉಪಯೋಗ? ನಾಟಕ ನಡೆಸೋದು ಬೇಡ" ಅಂತ ತೀರ್ಮಾನಿಸಿಬಿಟ್ಟರು.

ಆ ಸಮಯದಲ್ಲಿ ಅರಸು, ಓಬಳೇಶ್ವರ್ ಇಬ್ರೂ ಜೊತೇಲಿ ಹೋಗಿ ಮಹಾದೇವಸ್ವಾಮಿಗಳ ಮುಂದೆ ಕುಳಿತರು.

"ಏನ್ರಪ್ಪಾ ಬಂದ್ಬಿಟ್ರಿ? ಏನು ವಿಷಯ?" ಎಂದರು ಮಾಲೀಕರು.

"ಸ್ವಾಮಿ, ನೀವು ನಾಟಕದ ಕಂಪನಿ ನಿಲ್ಲಿಸ್ತೀರಂತ ಸುದ್ದಿ ಕೇಳಿದ್ವಿ. ಮತ್ತೆ ನಮ್ಮನ್ನ ಉತ್ತರ ಕರ್ನಾಟಕದಿಂದ ಕರ್ಕೊಂಡು ಬಂದಿದ್ದೀರಿ ನೀವು. ಈಗ ನಾವೊಂದು ಸಲಹೆ ಹೇಳ್ತೀವಿ. ಅಷ್ಟು ಮಾಡ್ತೀರಾ?" ಅಂತ ಇವರಿಬ್ರೂ ಕೈ ಮುಗಿದರು.

"ಏನು?" ಅಂತಂದ್ರವು,

"ಈಗೆಲ್ಲಾನೂ ಸೆಟ್ಟಿದೆ. ನೀವೇನೂ ತಗೊಂಬರ್ಬೇಕಾಗಿಲ್ಲ. ನೀವು ಹಾಸನ ಕ್ಯಾಂಪ್ ಮಾಡಿ, ಜಾತ್ರೆ ಇದೆ. ಅಲ್ಲಿ ನಾಟಕ ಹಾಕಿ. ಅಲ್ಲಿಯೂ ನಿಮಗೆ ನಾಟಕ ಹಿಡಿಸಲಿಲ್ಲಾಂತಂದ್ರೆ ನೀವು ಊರಿಗೆ ಬಂದ್ಬಿಡಿ. ನಾವು ಆ ಕಡೆಗೆ ಹೋಗ್ತಿವಿ' ಅಂತ ಸಲಹೆ ಮಂಡಿಸಿದರು.

ಆ ಸಲಹೆ ಮಾಲೀಕರಿಗೆ ಮೆಚ್ಚಿಗೆಯಾಯ್ತು. ಅಂತೆಯೇ ಆ ಜಾತ್ರೆಯಲ್ಲಿ 'ರಾಜಾವಿಕ್ರಮ' ಆದಿಯಾಗಿ ಪ್ರದರ್ಶಿತವಾದ ಇಪ್ಪತ್ತು ನಾಟಕಗಳೂ ಹೌಸ್‌ಫುಲ್ ಕಲೆಕ್ಷನ್!

ಮುಂದೆ ಕನಕಪುರದಿಂದ ಚೆನ್ನಪಟ್ಟಣ ಕ್ಯಾಂಪ್ ಮಾಡಿದರು. ಅಲ್ಲಿ, ಗುಬ್ಬಿ ಕಂಪೆನಿ ರಾಯಚೂರಿನ ಕ್ಯಾಂಪಿನಲ್ಲಿ ನಿಂತು ಹೋಯ್ತು. ಎಲ್ಲಾ ನಟರೂ ಊರಿಗೆ ಹೋಗ್ತಾರೆ ಅಂತನ್ನೋ ವಿಷಯ ಮಾಲೀಕರಿಗೆ ತಿಳಿಯಿತು. ಅಷ್ಟೊತ್ತಿಗೆ ಶ್ರೀಕಂಠಮೂರ್ತಿ, ಪುಟ್ಟಬಸಪ್ಪ, ದೊಡ್ಡ ಮುನಿಸ್ವಾಮಿ ಎಲ್ಲರೂ ಅಲ್ಲೇ ಇದ್ರು. ರಂಗಸ್ವಾಮಿ ಅಂತ ಒಬ್ಬರಿದ್ರು - ಅವರನ್ನ ಕರ್ಕೊಂಡ್ಬಾ ಅಂತ ಹೇಳಿ ಕಂಪೆನಿಯಲ್ಲಿದ್ದ ಒಬ್ಬ ಮೇಸ್ತ್ರಿ ನಂಜಪ್ಪ ಅನ್ನೋವ್ರನ್ನ ಕಳಿಸಿ ಅವರನ್ನ ಕರೆಸಿದ್ದರು.

ಆ ಕ್ಯಾಂಪಿನಲ್ಲೇ ಯೋಗಾನರಸಿಂಹಮೂರ್ತಿಗೆ ಹೇಳಿದ್ರು: "ಯೋಗಾ, ಈ ನಾಟಕವನ್ನ ಸೀನ್ ಬೈ ಸೀನ್ ನಿನ್ನ ಸಾಹಿತ್ಯದಲ್ಲಿ ಬರೆದುಬಿಡು. ಬಿ.ಸಿ. ಶ್ರೀನಿವಾಸ್‌ದು ಬೇಡ. ಮತ್ತೆ ಆ ಒಂದು ಪಾತ್ರ ಇದೆಯಲ್ಲಾ ದುರ್ಜಯನ ಅಂತ್ಹೇಳಿ ಅದು ಚೆನ್ನಾಗಿಲ್ಲ. ಆ ಪಾತ್ರಾನ ಖಳನಾಯಕನ ಪಾತ್ರ ಅಂತ ಕ್ರಿಯೇಟ್ ಮಾಡಿ ಬರೆದು, ಆ ರಾಜಾ ಪಾತ್ರಾನ ಶ್ರೀಕಂಠಮೂರ್ತಿಗೆ ಕೊಟ್ಬಿಡಿ. ಅವರು ದಕ್ಷರಾಗಿ, ಚೆನ್ನಾಗಿ, ಹಾಡ್ತಾರೆ, ಅವರು ರಾಜಾ ಪಾರ್ಟಿಗೆ ಸರಿ ಹೋಗ್ತಾರೆ. ಅರಸುಗೆ ಖಳನಾಯಕನ ಪಾತ್ರ ಮಾಡಿಸಿಬಿಡೋಣ" ಅಂತದ್ರು ಮಾಲೀಕರು.

"ಹಾಗಾದ್ರೆ ನಾನು ನಾಟಕ ಬರೀತೀನಿ" ಅಂತ್ಹೇಳಿ ಅವರು ಬರೆದರು. ಆಗ ಅರಸುರವರನ್ನೂ ಕರ್ಕೊಂಡು ಹೋಗ್ತಿದ್ರು. ರಾತ್ರಿ ಸಮಯದಲ್ಲಿ ಆ ನಾಟಕದ ಪಾಡಿಗೆ ನಾಟಕ ನಡೀತಿತ್ತು. ಇವರು ಒಂದು ರೂಂನಲ್ಲಿ ಕೂತ್ಕೊಂಡು ಬರೀತಾ ಇದ್ರು.

'ಹೀಗಿರಬೇಕು, ಹೀಗಿರಬೇಕು' ಅಂತ ಒಂದ್ಬಲ ಅವರು ಹೇಳೋದು, ಇವರೊಂದ್ಸಲ ಹೇಳೋದು - ಹೀಗಾಗಿ ಆ ದುರ್ಜಯನ ಪಾತ್ರ ಕ್ರಿಯೇಟ್ ಆಯ್ತು. ಅದನ್ನೇ ಎಚ್.ಟಿ. ಅರಸು ಊರ ಹೊರಗಡೆ ಹೋಗಿ ಪ್ರಾಕ್ಟೀಸ್ ಮಾಡಿ ಮಾಡಿ ಕರಗತ ಮಾಡಿಕೊಂಡು ಸಕ್ಸಸ್ ಮಾಡಿಬಿಟ್ರು. ಅಲ್ಲಿಂದ ದುರ್ಜಯನ ಪಾತ್ರ ಬಹಳ ಜನರ ಕಣ್ಣಿಗೆ ಕಟ್ಟಕ್ಕೆ ಶುರುವಾಯ್ತು.

## ಶ್ರೀಕಂಠಮೂರ್ತಿಗಳೊಡನಿದ್ದ ಸಂಬಂಧ

“ಶ್ರೀಕಂಠಮೂರ್ತಿ ತುಂಬಾ ಒಳ್ಳೆ ಮನುಷ್ಯ. ತುಂಬಾ ವಿದ್ಯಾವಂತರು. ಅಲ್ಲಿ ಅವ್ರಿಗೂ ನಮಗೂ ಹೆಚ್ಚಿಗೆ ಸಂಪರ್ಕ ಇರಲಿಲ್ಲ. ಆದ್ರೆ ಬಿಟ್ಟು ಬಂದ್ಮೇಲೆ ಅವರೂ ನನ್ನನ್ನ ನೆನಸೋತಿದ್ರು. ನಾನೂ ಅವ್ರನ್ನ ನೆನಸ್ಕೋತಿದ್ದೆ” ಎಂದು ತಮಗೂ ಶ್ರೀಕಂಠಮೂರ್ತಿಗೂ ಇದ್ದ ಆತ್ಮೀಯತೆಯನ್ನು ನೆನಪಿಸಿಕೊಂಡು ಅವರ ಬಗ್ಗೆ ಅಭಿಪ್ರಾಯಪಡುತ್ತಾರೆ ಅರಸು.

ಒಂದು ದಿವಸ ಶ್ರೀಕಂಠಮೂರ್ತಿಗಳು ನಂಜನಗೂಡಿಗೆ ಬಂದರು. ಆಗ ಅರಸುರವರಿಗೆ ಎಲ್ಲರನ್ನೂ "ಗುರುಗಳೇ, ಗುರುಗಳೇ" ಅನ್ನೋ ಪದ್ಧತಿ. ಅವರನ್ನು ಕಂಡೊಡನೆ,

“ಏನ್ ಗುರುಗಳೇ? ಬಂದ್ಬಿಟ್ರಿ ನೀವು” ಎಂದರು ಇವರು.

“ಏ... ಅಲ್ಲಿ ನನಗೆ ಸರಿ ಹೋಗ್ಲಿಲ್ಲ. ಮಹಾದೇವಸ್ವಾಮಿಗಳು ಹೋಗ್ಬಿಟ್ರು. ಮಕ್ಕಳ ಆಡಳಿತದಲ್ಲಿ ನಮಗೆ ಸರಿಹೋಗ್ಲಿಲ್ಲ. ನಾನು ಬಿಟ್ಟು ಬಂದ್ಬಿಟ್ಟೆ. ಆದ್ರೆ ಈಗ ನಿನ್ಹತ್ರ ಬರಬೇಕಾದ್ರೆ ನನಗೊಂದು ಕಾರಣ ಇದೆ. ನಾನೂ ನಾಟಕ ಕಂಪೆನಿ ಮಾಡೇ ಬಿಡ್ತೀನಿ. 'ರಾಜಾವಿಕ್ರಮ', 'ಚಂದ್ರಹಾಸ' ಎರಡು ನಾಟಕ ಆಡೋಣ. ನೀವು ಬರ್ತೀರಿ ಅಂತ ನಾನು ಕಂಪೆನಿ ಮಾಡ್ತೀನಿ” ಅಂದ್ರು.

ಅಲ್ಲಿಂದ ಅವರಿಬ್ಬರಿಗೂ ಗಳಸ್ಯ - ಕಂಠಸ್ಯ ಶುರುವಾಯ್ತು. ಪರಸ್ಪರರೂ ಬಹಳ ಆತ್ಮೀಯತೆಯಿಂದ ಇದ್ದರು. ಯಾವ ಕ್ಯಾಂಪ್‌ನಲ್ಲಿ ಹೋದರೂ ಕೂಡ ಶ್ರೀಕಂಠಮೂರ್ತಿಗಳು ಹೇಳೋರು,

“ಅರಸು ಅವರೇ, ಇವತ್ತು ಮೊದಲ್ನೇ ನಾಟಕ, ದುರ್ಜಯನ ಪಾತ್ರ ಒಳ್ಳೇ ಸಖತ್ತಾಗಿ ಮಾಡ್ಬಿಡಿ. ಇಪ್ಪತ್ತೈದು ನಾಟಕ ಹೋಗಿಬಿಟ್ರಪ್ಪಾ ನನಗೆ ಕಲೆಕ್ಷನ್ ಚೆನ್ನಾಗಾಗುತ್ತೆ. ಮತ್ತೆ ಮುಂದೆ ನಾಟಕ ಒದ್ದಾಯ್ಕೋಣ” ಅಂತ ಅನ್ನೋವ್ರು.

ಅವರೆಂದೂ ತಮ್ಮನ್ನ ಹೊಗಳಿಕ್ಕೊಳ್ತಿರಲಿಲ್ಲ.

“ಶ್ರೀಕಂಠೇಶ್ವರ ನಾಟಕ ಮಂಡಳಿ, ಮೈಸೂರು" ಎಂಬ ಹೆಸರಿನಿಂದ ಪ್ರಾರಂಭವಾದ ಕಂಪೆನಿಯ ನಾಟಕ ಪ್ರದರ್ಶನ ಮೊದಲು ನಂಜನಗೂಡಿನಲ್ಲಿ ಶುರುವಾಗಿ, ಆಮೇಲೆ ಟಿ. ನರಸೀಪುರ, ಕೊಳ್ಳೇಗಾಲ, ಅಲ್ಲಿಂದ ಹಾಗೇ ಉತ್ತರ ಕರ್ನಾಟಕಕ್ಕೆ ಹೋಗಿ, ದಾವಣಗೆರೆ, ಗದಗ್, ಹುಬ್ಬಳ್ಳಿ, ಬೆಳಗಾಂ, ಧಾರವಾಡ ಎಲ್ಲಾ ಸುತ್ತಿ ಕೊನೆಗೆ ಅರಸೀಕೆರೆಗೆ ಬಂದಿತು.

ಅರಸೀಕೆರೆಗೆ ಬಂದಾಗ ಮಾಲೀಕರು ಸಂಬಳ ಕೊಡೋದು ಸ್ವಲ್ಪ ಲೇಟಾಯ್ತು. ಇವರು ಬೇರೆ ಕಡೆಗೆ ದುಡಿಯೋ ಹಾಗೂ ಇಲ್ಲ. ಇತ್ತ ಸಂಬಳವೂ ಇಲ್ಲದಾದಾಗ ಅರಸುರವರಿಗೆ ಪಿತ್ತನೆತ್ತಿಗೇರಿತು.

“ನಾವು ಹೊಟ್ಟೆಗೆ ಕಷ್ಟಪಟ್ಕೊಂಡ್ರೂ ಕಂಪೆನಿಗೆ ದುಡೀಬೇಕಾದ ಕಾರಣ ಏನು ನಮಗೆ? ಮತ್ತೆ ಬೇರೆ ಕಂಪೆನಿಗೆ ಹೋಗಕ್ಕೆ ಬರೋದಿಲ್ಲ ನಾವು” ಎಂದು ಮಾಲೀಕರ ಮೇಲೆ ರೇಗಿದರು ಅರಸು.

ಅವರೇನೋ ಸ್ವಲ್ಪ ಉಚಾಯಿಸಿ ಮಾತಾಡಿದರು. ಆಗ ಕೆರಳಿದ ಅರಸು,

"ನೋಡೀ, ನೀವು ಮಾತಾಡಿದ್ದಾಗೇ ನಾನೂ ಮಾತಾಡ್ತೀನಿ, ಮಹಾದೇವಸ್ವಾಮಿ ನಾಟಕ ಕಂಪನಿ ಮಾಡೋದಿಕ್ಕೆ ಅವರು ನಟರೇ? ನಟರಲ್ಲ. ಅವ್ರು ಯಾರು ಚೆನ್ನಾಗಿ ಪಾತ್ರ ಮಾಡ್ತಾರೋ ಅವರ್ನ ಬಹಳ ಪ್ರೀತಿಯಿಂದ ಕಾಣೋರವ್ರು. ಅಂಥಾ ಮಾಲೀಕರು ನೀವಲ್ಲ. ಇದೇ ಮೊದಲು ಇದೇ ಕೊನೆ. ನೀವು ಕೊಡ್ಲಿಲ್ವಾ, ಬೇಡವೇ ಬೇಡ. ಇದು ಕ್ಯಾಂಪ್. ಇಲ್ಲಿನ ಕ್ಯಾಂಪ್ ಪೂರ್ತಿ ಮಾಡ್ತೀನಿ. ನೆಕ್ಸ್ಟ್ ಮೈಸೂರು ಕ್ಯಾಂಪು ಹತ್ತುತೀನಿ, ಮೈಸೂರು ಕ್ಯಾಂಪಿಗೆ ನಾನು ಪಾತ್ರ ಮಾಡೋದಿಲ್ಲ. ನೀವು ನನ್ನ ಪಾತ್ರಕ್ಕೆ ಯಾರ್ನಾದ್ರೂ ನೋಡ್ಕೊಳಿ" ಅಂತ ಹೇಳೇಬಿಟ್ಟರು.

ಇದಾದ ಮೇಲೆ ಮೈಸೂರಿನಲ್ಲಿ ಉಳಿದರು. ಅಲ್ಲಿ ಅವರ ಮನೆಯವರು ಅಮೆಚೂರ್ಸ್ ಮಾಡ್ತಿದ್ರು. ಹಾಗೇ ಸ್ವಲ್ಪ ದಿವಸ ಅಲ್ಲಿದ್ದು, ಆಮೇಲೆ ಬೆಂಗಳೂರಿಗೆ ಬಂದು ಅರಸು ಸೆಟ್ಲಾಗಿ ಬಿಟ್ಟರು - ಖಾನಾವಳಿಯಲ್ಲಿ!..

## ಮಗಳ ಮದುವೆಗಾಗಿ ವೃತ್ತಿರಂಗಭೂಮಿಗೆ ಮತ್ತೆ ಹಿಂದಿರುಗಿದ ಅರಸು

ಅದೇ ಕಲೆಯ ಪ್ರಪಂಚದಲ್ಲಿ ಅಮೆಚ್ಯೂರ್ಸ್‌ನಲ್ಲೇ ಪಾತ್ರ ಮಾಡುತ್ತಿದ್ದರು ಅರಸು. ಆಗ ಎಲ್ಲದಕ್ಕೂ ಅಮೆಚ್ಯೂರ್ಸ್‌ನವರೇ ಕರೆಯಲಿಕ್ಕೆ ಬರುತ್ತಿದ್ದರು.

"ಆದ್ರೆ ಅಮೆಚ್ಯೂರ್ಸ್‌ನಲ್ಲಿ ನಾವು ಪಾತ್ರ ವೈಖರಿ, ಕಲೆ ತೋರ್ಸೋದಿಕ್ಕೆ ಆಗ್ಲಿಲ್ಲ. ಆ ವೈಭವವೇ ಬೇರೆ. ಅಮೆಚ್ಯೂರ್ಸ್ ನಲ್ಲಿ ಇರೋ ವೈಭವವೇ ಬೇರೆ. ಯಾರದ್ದೋ ಜಗಲಿ ಮೇಲೆ, ಯಾವುದೋ ಒಂದು ಸೀನ್ಸ್ ಕಟ್ಟಿ, ಅಲ್ಲಿ ನಾಟ್ಕ ಆಡೋದು ಸರಿ ಇರ್ಲಿಲ್ಲ. ಆದ್ರೆ ಅದಕ್ಕೆ ಹೊಂದಿಕೊಂಡು ನಾವು. ಅದೇನು ಅದರ ಬಗ್ಗೆ ದಯೆ ತೋರಿಸ್ಬೇಕಾದ ಅಗತ್ಯ ಇರ್ಲಿಲ್ಲ. ಡೈಲಾಗ್ಸ್ ಮಾತಾಡೋದು, ಮುಗಿಸಿ ಬಿಡೋದು ನಾಟಕಾನೇ" ಅಂತ ಅಮೆಚ್ಯೂರ್ಸ್‌ನ ಬಗ್ಗೆ ಅರಸು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಸ್ವಲ್ಪ ದಿವಸ ಆದೇಲೆ ದೇಸಾಯಿಯವರ ಕರೆಯ ಮೇರೆಗೆ ಅರಸು ಮತ್ತೆ ರಂಗಭೂಮಿಗೆ ಹಿಂತಿರುಗಬೇಕಾದ ಪ್ರಸಂಗ ಬಂತು. ಆಗವರಿಗೆ ಮನೆಯಲ್ಲಿ ತಾಪತ್ರಯವಿತ್ತು. ಮಗಳ ಮದುವೆಗಾಗಿ ಹಣ ಬೇಕಿತ್ತು. ಸಿನೆಮಾದಲ್ಲಿ ಪಾತ್ರ ಮಾಡಿದ್ದು ಒಂದಷ್ಟು ಅಂದರೆ ಇಪ್ಪತ್ತೈದರಿಂದ ಮೂವತ್ತು ಸಾವಿರದಷ್ಟು ದುಡ್ಡಿತ್ತು. ಇನ್ನೂ ಸ್ವಲ್ಪ ದುಡ್ಡು ಬೇಕಾಗಿತ್ತು.

ದೇಸಾಯಿಯವರು ಬಂದಾಗ, "ನಮ್ಮ ಕಂಪೆನಿಗೆ ಬಾರಪ್ಪ, ಸ್ವಲ್ಪ ದಿವಸ ಸರ್ವೀಸ್ಮಾಡು. ಒಂದೆರಡು ವರ್ಷ" ಅಂತಂದ್ರು.

"ನೋಡೋಣ. ನನ್ನ ಮಗಳ ಮದುವೆಯಾಗ್ಬೇಕು, ಆಮೇಲೆ ಬರ್ತೀನಿ'' ಅಂತಂದ್ರು ಅರಸು.

"ನಾನು ಕೊಡ್ತೀನಿ ಬಾರಪ್ಪಾ, ನಿನಗೆಷ್ಟು ದುಡ್ಡು ಬೇಕು?"

"ನನಗೊಂದು ಹತ್ತು - ಹದಿನೈದು ಸಾವಿರ ರೂಪಾಯಿ ನೀವು ಸಹಾಯ ಮಾಡಿದ್ರೆ ಬರ್ತೀನಿ ನಾನು" ಎಂದರಿವರು.

ಅಲ್ಲೇ ಆಗಲೇ ಅಷ್ಟು ಹಣ ಕೊಟ್ಟೇಬಿಟ್ಟರು ದೇಸಾಯಿಯವರು.

ನಂತರ ಊರಿಗೆ ಹೋಗಿ ಪತ್ನಿಯೊಡನೆ ಚರ್ಚಿಸಿದರು ಅರಸು, ಕಾಕತಾಳೀಯವೆಂಬಂತೆ ಅವರ ಮಗಳಿಗೆ ಮಾಂಗಲ್ಯ ಭಾಗ್ಯವೂ ಕೂಡಿ ಬಂದಿತ್ತು. ಗಂಡೂ ಸೆಟ್ಟಾಗಿ ಬಿಟ್ಟಿತು. ಮುಂದಿನ ಮೂರು ತಿಂಗಳಲ್ಲಿ ಮಗಳ ಮದುವೆ ಮುಗಿಸಿ, ಮತ್ತೆ ನಾಟಕ ಕಂಪನಿಗೆ ಹಿಂದಿರುಗಿದರು.

## ಸ್ತ್ರೀ ಪಾತ್ರಧಾರಿಗಳು

ತಮ್ಮೊಡನೆ ಸರಿಸಮನಾಗಿ ಪಾತ್ರ ಮಾಡುತ್ತಿದ್ದ ಸ್ತ್ರೀ ಪಾತ್ರದವರನ್ನು ಅರಸು ಪ್ರಶಂಸಿಸುತ್ತಾರೆ.

ನಮ್ಮ ಜೊತೇಲಿ ಎಲ್ಲೂ ಪಾತ್ರ ಮಾಡಿದ್ದಾರೆ. ಆದ್ರೆ ಪಾತ್ರದಲ್ಲಿ ನಾವು ಹೊಗಳುವಂಥಾ ನಟಿಯರೇ ಕೆಲವು ಜನ ಇದಾರ. ಆಗ ನಮ್ಮ ಮಹಾದೇವಸ್ವಾಮಿ ಕಂಪನಿಯಲ್ಲಿ ಹೆಚ್.ಪಿ. ಸರೋಜ ಅಂತಿದ್ರು. ಸರೋಜಮ್ಮ, ಲೀಲಮ್ಮ, ಇಂದ್ರಮ್ಮ, ಹಾಗೂ ಇತ್ತೀಚೆಗೆ ನಿಧನರಾದ ರಂಗ ಕಲಾವಿದೆ ಹಾಗೂ ಡಬ್ಬಿಂಗ್ ಕಲಾವಿದೆ ಸರ್ವಮಂಗಳಾ ಹೀಗೆ - ಒಂದು ನಾಲ್ಕಾರು ಜನ ಒಳ್ಳೆ ಉತ್ತಮ ಕಲಾವಿದರು, ಚೆನ್ನಾಗಿ ಹಾಡೋರು, ಚೆನ್ನಾಗಿ ಡ್ಯಾನ್ಸ್ ಮಾಡೋರು, ಡೈರೆಕ್ಟರ್ ಇಲ್ದೇ ಇದ್ರೂ, ಅವರ ಪಾತ್ರ, ಸನ್ನಿವೇಶ ಅರ್ಥಮಾಡಿಕೊಂಡು ಬಹಳ ಚೆನ್ನಾಗಿ ಮಾಡೋರು. ಒಬ್ಬೊಬ್ಬರು ಒಂದೊಂದು ಪ್ರತಿಭೆ ಇದ್ದೋರು. ಅವರೆಲ್ಲಾ ನಮ್ಜೊತೆಗೆ ಸರಿಯಾಗಿ ಪಾತ್ರ ಮಾಡೋರು" ಎಂದು ತುಂಬು ಅಭಿಮಾನದಿಂದ ಸ್ಮರಿಸುತ್ತಾರೆ ಅರಸು.

## ಸಾಂಸಾರಿಕ ಜೀವನ

ಅರಸುರವರ ದೊಡ್ಡ ಮಗ ಅವರ ಮಾವನ ಬಳಿ ಬೆಳೆದರೆ, ಚಿಕ್ಕ ಮಗ ಅವರ ತಮ್ಮನ ಹತ್ತಿರ ಬೆಳೆದರು. ಹೀಗೆ ಬೆಳೆದ ಅವರ ಮಕ್ಕಳೆಲ್ಲರೂ ಈಗೊಂದು ಹಂತ ತಲುಪಿದ್ದಾರೆ.

ಅರಸು ದಂಪತಿಗಳಿಗೆ ನಾಲ್ಕು ಜನ ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು, ಇಬ್ಬರು ಗಂಡುಮಕ್ಕಳು.

"ನನ್ನ ಮೊದಲ ಮಗಳ ಹೆಸ್ರು ಬಸಮ್ಮ ಅಂತ. ಎರಡನೆಯವನು ಬಸವರಾಜ ಅಂತ. ಮೂರನೆಯವರು ನಾರಾಯಣ ಅಂತ. ನಾಲ್ಕನೆಯವಳು ಅನಸೂಯಾ ಅಂತ. ಹೀಗೆ ನಾಲ್ಕು ಜನ ಮಕ್ಕಳು ನಂಗೆ ಇಬ್ರೂ ಹೆಣ್ಣು ಮಕ್ಕಳು, ಇಬ್ರು ಗಂಡು ಮಕ್ಕಳು.

ಮೊದಲನೇ ಮಗಳಿಗೆ ಮಕ್ಕಳಿಲ್ಲ. ಎರಡನೆಯವನಿಗೆ ಮೂರು ಜನ ಮಕ್ಕಳು. ಒಂದು ಗಂಡು, ಎರಡು ಹೆಣ್ಣು ಮಕ್ಕಳು. ಮೂರನೆಯವನಿಗೆ ಒಂದು ಗಂಡು, ಒಂದು ಹೆಣ್ಣು, ನಾಲ್ಕನೆಯವಳಿಗೂ ಒಂದು ಗಂಡು, ಒಂದು ಹೆಣ್ಣು - ಹೀಗೆ ಎರಡು ಮಕ್ಕಳಿವೆ.

ದೊಡ್ಡವಳು.... ಹುಬ್ಬಳ್ಳಿ ಹತ್ರ ನವನಗರ ಅಂತಿದೆ. ಅಳಿಯ ಸರ್ಕಾರಿ ಕೆಲಸದಲ್ಲಿದ್ದಾರೆ. ಮನೆ ಕಟ್ಕೊಂಡಿದ್ದಾರೆ.

ನಾರಾಯಣನ ಹೆಂಡ್ತಿ ತವರುಮನೆ ಹುಬ್ಬಳ್ಳಿ ಅವರ್ಮನೆಗೆ ಹೋಗ್ತಿರ್ತೀನಿ. ಮತ್ತೆ ಇಳಕಲ್ಲಂತೂ ನಮ್ಮ ತಾಯಿ ತವರ್ಮನೆ ಅದು. ಅಲ್ಲಿ ನನ್ನ ಮಗನಿಗೆ ಹೆಣ್ಣು ಕೊಟ್ಟಿದ್ದು. ನಾ ಹೋದ್ರೆ ಇಳಕಲ್ಲಿಗೆ ಹೋಗ್ತಿನಿ."

ಅರಸು ತಮ್ಮ ಸಾಂಸಾರಿಕ ಬದುಕಿನ ಹರವನ್ನು ಬಿಚ್ಚಿಕೊಂಡಿದ್ದು ಹೀಗೆ.

****

ತಮ್ಮ ಜೀವನದ ಹಾದಿಯಲ್ಲಿ ಅನೇಕ ಏಳುಬೀಳುಗಳನ್ನು ಕಂಡಿರುವ ಈ ನಟನಿಗೆ ವಯೋಸಹಜವೆಂಬಂತೆ ಆಧ್ಯಾತ್ಮದ ಗೀಳು ಅಂಟಿಕೊಂಡಿದೆ. ಅವರಿಗೆ ಆಧ್ಯಾತ್ಮಿಕತೆಯಿಂದ ದೊರೆತಿರುವ ನೆಮ್ಮದಿ ಜೀವನ ಕೊಟ್ಟಿರುವ ಸಮಾಧಾನಗಳನ್ನು ಭಾವುಕವಾಗಿ ಅವರೇ ವರ್ಣಿಸುತ್ತಾರೆ.

"ನಾನು ಎಂಭತ್ತು ವರ್ಷ ಬದುಕಿರೋದು ಅದು ಭಗವಂತನಿಚ್ಛೆ. ನಾನು ದಿವ್ಸಾ ಯೋಗಾಸನ ಮಾಡ್ತೀನಿ. ಮತ್ತೆ ಇತ್ತೀಚೆಗೆ ಇಪ್ಪತ್ತು - ಇಪ್ಪತ್ತೈದು ವರ್ಷಗಳಿಂದೀಚೆಗೆ, ಬೆಂಗಳೂರಿಗೆ ಬಂದಾಗಿಂದ ನನಗೆ ಆಧ್ಯಾತ್ಮಿಕದ ಗೀಳು ಹೆಚ್ಚಾಗಿದೆ. ಇಲ್ಲಿ ಆನಂತಸ್ವಾಮಿ ಆಶ್ರಮದಲ್ಲಿ ಭಗವತ್ಪಾದರು ಅಂತ್ಹೇಳಿ ಬರ್ತಿದ್ರು. ಅವರು ಹದಿನಾರು ವರ್ಷ ಇಲ್ಲೇ ಚಾತುರ್ಮಾಸದಲ್ಲಿ ಬಂದು ಪ್ರವಚನ ಮಾಡ್ತಿದ್ರು. ಆವಾಗ ನಾನು ತಪ್ಪದೆ ಬರ್ತಿದೆ. ಬಂದು ಇಲ್ಲೇ ಪ್ರವಚನ ಕೇಳ್ತಿದ್ದೆ. ನನಗೇನಾದ್ರೂ ಕನ್‌ಫ್ಯೂಸ್ ಆಯ್ತು ಅಂದ್ರೆ ಗುರುಗಳ ಹತ್ರ ಕೇಳ್ಬೇಕು. 'ಹೀಗಿದೆಯಲ್ಲಾ ಗುರುಗಳೇ, ಹೀಗಿದೆಯೆಲ್ಲಾ ಗುರುಗಳೇ' ಅಂತ. ಅವೆಲ್ಲಾ ಹೇಳ್ತಾ ಇದ್ರು. ಹಾಗೇ ಕೇಳಿ ಕೇಳಿ ನಂಗದೇ ಒಂದು ಗೀಳಾಗಿ ಬಿತ್ತು. ಈಗ್ಲೂ ಭಗವಂತನ ನಾಮಸ್ಮರಣೆ ಧ್ಯಾನ ಮಾಡೋದು, ಭಗವಂತನಲ್ಲಿ ಬೇಡ್ಕೊಳ್ಳೋದು, ಆಧ್ಯಾತ್ಮದ ಪುಸ್ತಕಗಳನ್ನೋದೋ ಅಭ್ಯಾಸ ಹೆಚ್ಚು ನನಗೆ...

... ಹೀಗೆಲ್ಲಾ ಆದ್ಮಲೆ, ನಾನು ಯಾರ ಹತ್ರಾನೂ, ಯಾವ ಮಕ್ಕಳ ಹತ್ರಾನೂ ಅಧೀನನಾಗಿರೋದು ಬೇಡ ಅಂತಾನೇ ಬೆಂಗಳೂರಿಗೆ ಬಂದಿರೋದು. ನಾವು ನೆಲಕಚ್ಚಿ ಮಲಗಿದಾಗ ಅವ್ರೇ ಯಾರಾದ್ರೂ ಬಂದು ಹೊತ್ಕೊಂಡು ಹೋಗ್ಬಿಡ್ತಾರೆ. ಅಲ್ಲೀವರ್ಗೂ ನಾನು ಯಾರ್ಗೂ ಅಧೀನ ಆಗ್ಬಾರ್ದು.

ನನ್ನ ಕಲಾ ಸೇವೆ ಗುರುತಿಸಿ ನಾಟಕ ಅಕಾಡೆಮಿ ಪ್ರಶಸ್ತಿ, ಸರಕಾರ ರಾಜ್ಯೋತ್ಸವ ಪ್ರಶಸ್ತಿ ಕೊಟ್ಟಿದೆ. ಇದರಿಂದ ನನಗೆ ಗೌರ್ಮೆಂಟ್‌ನೋರು ಒಂದ್ಸೈದುನೂರು ರೂಪಾಯಿ ಪೆನ್ಷನ್ ಕೊಡ್ತಾ ಇದ್ದಾರೆ. ಮತ್ತೆ ಈಗ ಇತ್ತೀಚೆಗೆ ವೈದ್ಯಕೀಯ ಸವಲತ್ತು ಅಂತ ಕೊಡ್ತಾರೆ. ಅದೆಲ್ಲಾ ನನಗೆ ಒಂದು ಸ್ವಲ್ಪ ಅನುಕೂಲವಾಗಿದೆ. ನಾನಿರೋ ಜಾಗದಲ್ಲಿ ಖಾನಾವಳಿಯವರೂ 'ನಿಮಗೆ ಅನುಕೂಲವಾಗಿ ಕೊಟ್ಟಷ್ಟು ಕೊಡಿ' ಅಂತಾರೆ. ಮತ್ತೆ ಎಲ್ರಿಗೂ ಊಟಕ್ಕೆ ಪೂರ್ತಿ ಚಾರ್ಜು ತಗೊಂಡ್ರೆ ನಂಗೆ ಅರ್ಧ ಚಾರ್ಜು ತಗೋತಾರೆ. ಹೀಗೆ ಭಗವಂತ ನಮಗೆ ಅನುಕೂಲ ಮಾಡ್ಕೊಟ್ಟಿದ್ದಾನೆ. ಹೀಗಿರುವುದಕ್ಕೋ ಏನೋ ಯಾರೂ ಸೈಟೂ ಕೊಡ್ಲಿಲ್ಲ. ಇಷ್ಟೆಲ್ಲಾ ಮಾಡಿದೀನಿ. ಎಲ್ಲಾ ಗುರ್ತು ಹಿಡಿದಿದ್ದಾರೆ. 'ಅರಸು' ಅಂತಂತಾರೆ. ಅಷ್ಟೇ ಸಾಕು. ಇನ್ನೇನು? ಮನೆ, ಮಠ ಕಟ್ಕೊಂಡು ಏನಾಗ್ಬೇಕಾಗಿದೆ? ಕೊಟ್ರೆ ಮಕ್ಕಳು ಬಂದು ಕೇಳ್ತಾರೆ.

'ನಮಗೆ ಕೊಡಿ, ನಮಗೆ ಕೊಡಿ' ಅಂತ ಕೇಳ್ತಾರೆ. ಕೊಟ್ರೆ ಮಕ್ಕಳು ತಗೊಳ್ತಾರೆ. ಇಲ್ಲಾಂದ್ರೆ ಇಲ್ಲ. ನಾನು ಸಿನಿಮಾದಲ್ಲೂ ಐವತ್ತು - ಐವತ್ತೆರಡು ವರ್ಷದತನಕ ಪಾತ್ರ ನಾಯಕನ ಪಾತ್ರ, ಪೋಷಕ ಪಾತ್ರ ಮಾಡಿದ್ದೇನೆ. ಕಲಾವಿದರ ಸಂಘಕ್ಕೂ ಹೋಗ್ತೇನೆ. ಅದೂ ಅಷ್ಟೇನೆ, ಇದೂ ಅಷ್ಟೇನೆ."

ಬಾಳಿನುದ್ದಕ್ಕೂ ಇವರ ಜತೆಗಾತಿಯಾದ ಸಹಧರ್ಮಿಣಿ ಊರಿನಲ್ಲಿದ್ದಾಗ, ಬಾಳು ಬೆಳಗಿದ, ಬೆಳಗುತ್ತಿರುವ ಆ ಜ್ಯೋತಿ ಇಳಕಲ್‌ನಲ್ಲಿರುವ ತಮ್ಮ ತವರುಮನೆಯಲ್ಲಿದ್ದಾರೆ.

ಅರಸುರವರ ಸ್ವಂತ ಊರಾದ ಹನುಮಸಾಗರದಲ್ಲಿ ಅಲ್ಪಸ್ವಲ್ಪ ಆಸ್ತಿಯಿದೆ. ಪಿತ್ರಾರ್ಜಿತವಾದ ಹನ್ನೆರಡು - ಹದಿಮೂರೆಕರೆ ಜಮೀನು ಮೂರು ಜನ ಅಣ್ಣತಮ್ಮಂದಿರ ನಡುವೆ ಭಾಗವಾಗಿ, ಒಂದು ಮೂರ್‍ನಾಲ್ಕು ಎಕರೆ ಜಮೀನು ಅರಸುರವರ ಪಾಲಿಗಿದೆ. ಅರಸುರವರ ತಂದೆಯವರು ಕೊಟ್ಟಿದ್ದೊಂದು ಮನೆ ಇದೆ. ಅಷ್ಟು ಬಿಟ್ಟರೆ ಮಿಕ್ಕ ಸಂಪಾದನೆಯೆಲ್ಲಾ ಅವರವರ ಸ್ವಯಾರ್ಜಿತ ಆಸ್ತಿ, ಅರಸುರವರ ಹಿರಿಯ ಮಗ ಅದೇ ಮನೆಯಲ್ಲಿದ್ದಾರೆ. ಅವರೇ ಎಲ್ಲಾ ಸುಧಾರಿಸಿಕೊಳ್ಳುತ್ತಾರೆ.

ರಂಗಭೂಮಿ, ಸಿನೆಮಾ, ಅಮೆಚೂರ್ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಪಳಗಿರುವ ಈ ಹಿರಿಯ ನಟ ಕಿರುತರೆಯಿಂದೇನೂ ಹೊರತಾಗಿಲ್ಲ. ಇಂದಿನ ಎಲ್ಲಾ ಮನರಂಜನಾ ಮಾಧ್ಯಮಗಳನ್ನೂ ಹಿಂದೆ ಹಾಕಿ, ಜನಪ್ರಿಯತೆಯ ಶೃಂಗದಲ್ಲಿರುವ ಟಿ.ವಿ. ಧಾರಾವಾಹಿಗಳಲ್ಲೂ ಅರಸು ನಟಿಸಿದ್ದಾರೆ.

ಕಿರುತೆರೆಯ ನಿರ್ದೇಶಕರಾದ ಶಿವಶಂಕರ್‌ರವರು ತಮ್ಮ 'ವಿಪ್ರದರ್ಶನ' ಎಂಬ ನಾಟಕದಲ್ಲಿ ಒಂದು ಮುಖ್ಯ ಪಾತ್ರದಲ್ಲಿ ಅರಸು ಅಭಿನಯಿಸಿದ್ದಾರೆ. ಅದೊಂದು ಬ್ರಾಹ್ಮಣರ ಸಬ್ಜೆಕ್ಟ್, ಅಲ್ಲದೆ, 'ತ.ರಾ.ಸು. ಅವರ 13 ಕಥೆಗಳು' ಎಂಬ ಧಾರಾವಾಹಿಯಲ್ಲಿ ಒಂದು ಕಥೆ 'ಇವನು ಎಲ್ಲಿದ್ದ?' ಎಂದು. ಅದರಲ್ಲಿನ ಮುಖ್ಯ ಪಾತ್ರಧಾರಿ ಅರಸು.

ಇತ್ತೀಚೆಗೂ ಸುಮಾರು ಧಾರಾವಾಹಿಗಳಲ್ಲಿ ಅರಸು ಅಭಿನಯಿಸಿದ್ದಾರೆ. ಆದರೆ ತಮ್ಮ ನಟನೆಯನ್ನು ತಾವು ನೋಡುವ ಭಾಗ್ಯ ಈ ನಟನಿಗಿಲ್ಲ.

"ನಾನು ಇರುವ ಖಾನಾವಳಿಯಲ್ಲಿ ಟಿ.ವಿ. ಇಲ್ಲ. ನಾನು ನೋಡೋಕಾಗೋದಿಲ್ಲ. ನೋಡ್ಡೋರು ಹೇಳ್ತಾರೆ. "ಮೊನ್ನೆ ನಿಮ್ಮ ಧಾರಾವಾಹಿ ಬಂದಿತ್ರೀ. ಸಿನಿಮಾ ಬಂದಿತ್ರಿ ನೀವು ಇಂಥಾ ಪಾತ್ರ ಮಾಡಿದ್ರಿ' ಅಂತ ಕೇಳ್ತಾರೇ ಹೊರ್ತು ನಾ ನೋಡಿಲ್ಲ ಅದನ್ನ" ಎನ್ನುತ್ತಾರೆ.

### ಇತ್ತೀಚಿನ ಯುವ ಪೀಳಿಗೆಗೆ / ರಂಗಕಲಾವಿದರಿಗೆ ಕಿವಿ ಮಾತು

ವೃತ್ತಿ ರಂಗಭೂಮಿಯಲ್ಲಿ ನಿಷ್ಕಳಂಕವಾಗಿ ದುಡಿದು, ಕಲಾದೇವತೆಯ ಸೇವೆ ಮಾಡಿದ ಮುಕುಟಮಣಿಗಳಲ್ಲೊಂದಾದ ವ್ಯಕ್ತಿತ್ವ ಎಚ್.ಟಿ. ಅರಸುರವರದು. ಅಂತಹ ಜ್ಞಾನವೃದ್ಧರು ಇಂದಿನ ಯುವಪೀಳಿಗೆ / ರಂಗ ಕಲಾವಿದರ ಬಗ್ಗೆ ತಮ್ಮ ಅನುಭವಪೂರಿತವಾದ ಅನಿಸಿಕೆಗಳನ್ನು, ಕೆಲವೊಂದು ಬುದ್ಧಿ ಮಾತುಗಳನ್ನು ಹೇಳುತ್ತಾರೆ. ಆ ಅಣಿಮುತ್ತುಗಳ ಸಾರವನ್ನು ಹನಿ ಹನಿಯಾಗಿ ಅವರ ನುಡಿಗಳಲ್ಲೇ ಸವಿದರೆ ಚೆನ್ನ......

"ಇತ್ತೀಚಿನ ರಂಗಭೂಮಿಗೆ, ನಾವು ಮಾಡಿದ ರಂಗಭೂಮಿಗೆ ವ್ಯತ್ಯಾಸ ಬಹಳ ಇದೆ. ಕಾರಣ ಇಷ್ಟೇ, ನಾವು ಆವಾಗ ಕಲೆಸೇವೆ ಮಾಡ್ಬೇಕಾದ್ರೆ ನಮ್ಮ ದುಡ್ಡು, ಸಂಬಳ ಇದರ ಮೇಲೆ Depend ಆಗ್ಲಿಲ್ಲ. ಕಲೆ ಸೇವೆ ಮಾಡ್ಬೇಕು, ಕೀರ್ತಿ ಸಂಪಾದನೆ ಮಾಡ್ಬೇಕು, ಒಳ್ಳೇ Artist, ಒಳ್ಳೆ ನಟಾಂತ ಅನ್ನಿಸ್ಕೊಬೇಕು ಅನ್ನೋ ಅಭಿಪ್ರಾಯವೇ ಇತ್ತು. ಆವಾಗ ಗುರು - ಹಿರಿಯರಿಗೆ, ನಾಟಕ ಕಂಪನಿ ಮಾಲೀಕರಿಗೆ, ಕವಿಗಳಿಗೆ, ಒಂದು ವಿನಯ - ವಿಧೇಯತೆಗಳಿಂದ ನಡ್ಕೊಳ್ತಿದ್ವಿ. ಈಗ ಇದಿಲ್ಲ. ಈಗದು ಅವ್ರಿಗೆ ಯಾಕಿಲ್ಲ ಅಂದ್ರೆ ಈಗಿನ ಅವರ ಪರಿಸರವೇ ಹಾಗಿದೆ. ಈಗಿನ ಖರ್ಚು - ವೆಚ್ಚಕ್ಕೆ, ಅವ್ರು ಆ ರೀತೀಲಿ ದುಡಿಲೇ ಬೇಕು, ಆ ರೀತಿ ಮಾಡ್ಲೇಬೇಕು. ಆವಾಗ ನಮ್ಗೆ  ಹಾಗೇನಿದ್ದಿಲ್ಲ.

ಆದ್ರೆ ಒಂದು ವಿಷ್ಯ ಏನು ಹೇಳ್ಬೇಕಂದ್ರೆ ಕಲಾವಿದರಲ್ಲಿ ಮೂರು ಗುಂಪಿದೆ. ಕಲೆ ಹುಡುಕ್ಕೊಂಡ್ಹೋಗಿ ಜೀವನ ಮಾಡೋ ಕಲಾವಿದರು ಬೇರೆ ಇದಾರೆ; ಕಲೆಯಲ್ಲಿಯೇ ಇದ್ದು, ಕಲೆಯಲ್ಲಿಯೇ ಜೀವನ ಮಾಡ್ಕೊಂಡು, ಕಲೆಯಲ್ಲಿಯೇ ಸವೆಸ್ಕೊಂಡು, ತಮ್ಮ ಜೀವನವನ್ನ ಧಾರೆ ಎರೆಯೋರು ಇನ್ನೊಂದು ಗುಂಪಿದೆ; ಇನ್ನು ಕಲೆಯನ್ನ ತಾನಾಗೇ ಹುಡುಕ್ಕೊಂಡು ಹೋಗಿ ಜೀವನ ಮಾಡೋ ಕಲಾವಿದರಿದ್ದಾರೆ. ಈ ಥರಾ ಮೂರು ಜನ ಕಲಾವಿದರಿದ್ದಾರೆ.

. ಇನ್ನು ವೃತ್ತಿ ರಂಗಭೂಮಿ ಅಂತಂತಾರೆ, ಹವ್ಯಾಸೀ, ಅಮೆಚೂರ್ಸ್ ಅಂತಾರೆ ಹೊರ್ತು ಕಲೆ ಮಾತ್ರ ಒಂದೇನೇ, ಆವಾಗ್ಲೂ ಒಂದೇನೇ, ಇನ್ನೂ ಒಂದೇನೇ.

ಈ ಲಾಂಗ್ವೇಜು ಅಂತ ಹೇಳ್ತೀರಲ್ಲಾ, ಕಲೆಗೆ ಲಾಂಗ್ವೇಜೇ ಇಲ್ಲ. ಕೋಪ ಮಾಡ್ಕೊಂಡು ಮಾತಾಡ್ಬೇಕಾದ್ರೆ ಇಂಗ್ಲೀಷ್‌ನಲ್ಲಾಗ್ಲೀ, ತಮಿಳಿನಲ್ಲಾಗ್ಲೀ, ತೆಲುಗಿನಲ್ಲಾಗ್ಲೀ, ಮುಖಭಾವ ಒಂದೇ ಥರಾ ಬರ್ತದೆ. ಬೇಕಾದ್ದು ಏನೇ ಹೇಳಲಿ ಮುಖ ಹಾಗೇ ಬರ್ತದೆ. ನವರಸ ಏನಿದೆ, ಅವು ಇಂಗ್ಲೆಂಡ್‌ನಲ್ಲಾಗ್ಲೀ, ಮಹಾರಾಷ್ಟ್ರದಲ್ಲಾಗ್ಲೀ, ಕರ್ನಾಟಕದಲ್ಲಾಗ್ಲೀ, ಆಂಧ್ರದಲ್ಲಾಗ್ಲೀ, ಮುಖ ಒಂದೇನೇ ಬರ್ಬೇಕು.

ಅದು ಪರಕಾಯ ಪ್ರವೇಶ ಮಾಡೋ ಅಂಥಾದ್ದು ಕಲೆ, ಕಲೆ ಕಣ್ಣಿಗೆ ಕಾಣ್ಸೋದಿಲ್ಲ. ಒಂದು ನಾಟಕ : ಯಾರೋ ಒಬ್ಬ. ನಾನು - ಅವನೂ ಸ್ನೇಹಿತರಾಗಿರ್‍ತೀವಿ. ಒಬ್ಬ ಶ್ರೀಮಂತನಾಗಿರ್‍ತಾನೆ. ಒಬ್ಬ ಬಡವನಾಗಿರ್‍ತಾನೆ ನಾಟಕ ಕಂಪನಿಯಲ್ಲಿ.

'ಅಪ್ಪಾ, ನನ್ನ ಮಗಳ ಮದುವೆ ಮಾಡ್ಬೇಕು, ದುಡ್ಡು ಕೊಡು' ಅಂತ ನಾ ಕೇಳ್ತೀನಿ. ಅವನು ಹಿಡ್ಕಂಡು ಒದೀತಾನೆ ನನಗೆ.

'ಹಿಂದೆ ಮಾಡಿದ ಸಾಲ ಬೇಕಾದಷ್ಟಿದೆ. ಮತ್ತೆ ಕೇಳಕ್ಕೆ ಬಂದಿದೀನೋ, ಅಂತ ಹೊಡೀತಾನೆ. ನಾನು ಅತ್ಕೊಂಡು ಕೇಳ್ತೀನಿ. ಅವನು ದರ್ಪ ಮಾಡಿ ಹೊಡೀತಾನೆ. ರಂಗದ ಮೇಲೆ ಇದನ್ನ ಎರಡು ಪಾತ್ರಗಳಾಗೇ ಅಭಿನಯಿಸಿ, ಪ್ರೇಕ್ಷಕನ ಮನದಲ್ಲಿ ನಾಟುವಂತೆ ತೋರಿಸ್ಬೇಕಾಗುತ್ತೆ. ನಾಟಕ ಮುಗಿದ ಮೇಲೆ ಅವನು ನಾವಿಬ್ರೂ ಸ್ನೇಹಿತ್ರೇ.

ಆ ಕಲೆ ಕಣ್ಣಿಗೆ ಕಾಣ್ಸೋದಿಲ್ಲ. ನಮ್ಮ ನಿಜ ಜೀವನಕ್ಕೆ ನಾವು ಮಾಡ್ತಿರೋ ಪಾತ್ರ ಹುಸಿ ತೋರಿಕೆ ಅದು. ಕಲೆ ಹುಸಿತೋರಿಕೆ, ಕಲೆ ಅಂದ್ರೆ Artificial. ಹೀಗಿತ್ತೂಂತ ಮಾಡಿ ತೋರಿಸ್ಬೇಕು. ನಿಜವಾದ ಹೂವನ್ನ Plasticನಲ್ಲಿ ಮಾಡಿ ತೋರಿಸ್ತಾರೆ. ನಿಜವಾದ ಹೂವಿನ ಹಾಗೇ ಇರುತ್ತೆ. ಮುಟ್ಬೇಕು ನಾವು ಹಾಗಿರ್‍ತದೆ. ಆದರೆ ನೈಸರ್ಗಿಕವಾಗಿ ಬಿಟ್ಟ ಹೂವಲ್ಲಿ ವಾಸನೆ ಇರುತ್ತೆ. ಇದರಲ್ಲಿ ಇರಲ್ಲ, ಅಷ್ಟೇ. ಅದರಲ್ಲಿ ಭಗವಂತನಿದಾನೆ, ಇದರಲ್ಲಿ ಭಗವಂತಿಲ್ಲ. ಇದು ಹುಸಿ ತೋರಿಕೆ.

ನಾಟಕ ಅಂದ್ಮೇಲೆ ಎಲ್ರೂ ನಟರು ಒಂದೇ ಆಗಿರ್‍ತೀವಿ. ಒಬ್ಬನು ಬಂದು ಹೊಡೀತಾನೆ. ಆ ಸನ್ನಿವೇಶ ಅಂಥಾದ್ದು. ಉಗೀತಾನೆ. ಶ್ರೀಮಂತನಾದವನು ಒಂದು ಹೆಣ್ಣಿನ ಶೀಲ ಕೆಡಿಸ್ತಾನೆ. ಅದೆಲ್ಲಾ ನಾಟ್ಕ, ಹುಸಿ ತೋರಿಕೆ ಅದು.

... ಅದನ್ನ ಈಗ ಅರ್ಥ ಮಾಡ್ಕೊಂಡಿಲ್ಲ. ಅವ್ರು ಏನ್ಮಾಡ್ತಾರೇಂದ್ರೆ ಕಷ್ಟ ಬೇಕಾಗಿಲ್ಲ. ದುಡ್ಡು ಬೇಕು. ಆ ಸಂಸ್ಕೃತಿ ಇಲಾಖೆಗೆ ಹೋಗಿ ನಾಟ್ಕ ಕೊಡು ಅಂತ ಕೇಳ್ತಾರೆ. ಅವರು ಇವರ ಕಾಟಕ್ಕೆ ಕೊಡ್ತಾರೆ, ಸರಿ. ಒಂದಷ್ಟು ದುಡ್ಡು ಕೊಟ್ಟು ಕಲಾಕ್ಷೇತ್ರವನ್ನು ಬಾಡಿಗೆಗೆ ಹಿಡೀತಾರೆ. ನಾಟ್ಕ ಮಾಡ್ತಾರೆ. ಸಾಯಂಕಾಲ ಅಷ್ಟು ದುಡ್ಡು ಉಳಿದ್ಮೇಲೆ ಎಲ್ರೂ ಗುಂಡು ಹಾಕ್ಕೊಂಡು ಹಾಯವಾಗಿ ನಕ್ಕೊಂತ ಮನೆಗ್ಹೋಗಿ ಬಿಡ್ತಾರೆ. ಎಲ್ಲಾ ತಂಡಗಳೂ ಹೀಗೆ ಮಾಡ್ತಾವೆ ಅಂತ ನಾನು ಹೇಳ್ತಿಲ್ಲ. ಹತ್ತಾರು ಹವ್ಯಾಸಿ ತಂಡಗಳು ಒಳ್ಳೆ ನಾಟಕ ಇವೊತ್ತೂ ಆಡ್ತಿವೆ. ಆದರೆ ಪೌರಾಣಿಕ ನಾಟಕದಲ್ಲಿ ಒಂದು ಶಿಸ್ತು ಇಲ್ಲ.

ಇದು ಕಲೆ ಸೇವೆ ಮಾಡೋದಲ್ಲ. ಕಲೆ ಸೇವೆ ಮಾಡೋದ್ರಲ್ಲಿ ವಿಚಾರ ಬೇರೆ ಇರುತ್ತೆ. ಕಲೆಗೆ ನಾವು ಭಕ್ತಿಯಿಂದ ಸೇವೆ ಮಾಡ್ಬೇಕು, ಕಲೆ ಅನ್ನೋದು ಏನೂಂತ ಮೊದಲು ಅರ್ಥ ಮಾಡ್ಕೋಬೇಕು. ಅರಿತವನು, ನುರಿತವನು, ಬೆರೆತವನು, ಮೈಮರೆತವನು, ಅರೀಬೇಕು, ಇನ್ನು ಅವರ ಜೊತೇಲಿ ಬೆರೆಯಬೇಕು. ಅವುಗಳ ಜೊತೆಗೆ ರಂಗಭೂಮಿ ಸಿಕ್ಕಾಗ ನುರೀಬೇಕು. ಒಳ್ಳೆ Artist ಎದುರ್ಗಡೆ ಸಿಕ್ಕಾಗ ಅವ್ರು ನಾವು ಕ್ಲೈಮ್ಯಾಕ್ಸ್ ನಡೆದಾಗ ನಾವಿಬ್ರೂ ಮೈಮರೀಬೇಕು. ಅವಾಗ್ಲೇ ಕ್ಲಾಪ್ಸ್ ಬರೋದು (ಚಪ್ಪಾಳೆ) ಬೇಷ್... ಬೇಷ್... ಅಂತಂತಾರೆ ಆಡಿಯನ್ಸ್, ಇದನ್ನೆಲ್ಲಾ ಯುವ ಪೀಳಿಗೆ ಹಾಗೂ ರಂಗ ಕಲಾವಿದರು ತಿಳ್ಕೋಬೇಕು.

ಇದನ್ನೇನಾದ್ರೂ ಅವ್ರಗೆ ಕೇಳಲಿಕ್ಕೆ ಹೋದ್ರೆ 'ಇವ್ರುದ್ದೇನೋ ಪುರಾಣ ಬೇರೆ ಇದ್ಯಪ್ಪಾ'. ಅಂತ ತಿಳ್ಕೊಂಡು ಅವರು ಏ... ಸಾಯಂಕಾಲ ಕುಡ್ಕಳೋದು... ಒಂದಿಷ್ಟು ಬಳಕಳೋದು... 'ಹ್ಞೂಂ! ಆಯ್ತು. ನಿಂದು ಪಾತ್ರ ರಡಿ ಇದ್ಯಾ? ರಡಿ ಇದ್ಯಾ? ಆಯ್ತು. ನಾಟಕ ಕೊಟ್ಬಿಡಾಣ ಕೊಟ್ಬಿಡ್ತಾರೆ. ತಮಗೆ ಸಿಕ್ದಾಗೆ ಮಾತಾಡ್ತಾರೆ ಅಷ್ಟೇ. ಮಾಡ್ತಾರೆ, ಹ್ಯಾಗೋ ಮಾಡ್ತಾರೆ. ಅದನ್ನJudge ಮಾಡ್ಬೇಕು, ವೃತ್ತಿ ರಂಗಭೂಮಿಯಲ್ಲಿ ಇವತ್ತು ಮೂವತ್ತು ನಾಟಕ, ನಲವತ್ತು ನಾಟಕ, ಐವತ್ತು ನಾಟಕ, ಅಂತಂತೀವಿ. ನಿಮ್ಮ ನಾಟಕ ನಿರಂತರವಾಗಿ ಬೋರ್ಡ್ ಚೇಂಜ್ ಮಾಡ್ದಲೇ ಆಗಿದವಾ ಎಲ್ಲಾರ ನಾಟಕ?

ಆದ್ರೆ ನಿಮ್ಮನ್ನ ಅಲ್ಲಗಳೆಯದಿಲ್ಲ. ನಮ್ಮ ಹಿಂದೆ ನೀವು ಬಂದಿದೀರಿ. ನೀವೂ ಕಲೆಗಾದ್ರೆ. ನಾವೂ ಕಲೆಗಾರ. ಆದ್ರೆ ನಿಮ್ಮನ್ನ ನಾವು ತೆಗಳದು ಬೇಡ. ನಮ್ಮನ್ನ ನೀವು ತೆಗಳದು ಬೇಡ. ನಮ್ಹಾಗೇ ಆಗ್ಬೇಕೂಂದ್ರೆ ಮೊದಲು ಕಷ್ಟಪಡಿ. ಒಂದು ನಾಟ್ಕನ ಮೂರು ತಿಂಗಳು, ಆರು ತಿಂಗಳವರೆಗೂ ಅದನ್ನ ಸರಿಯಾಗಿ ತರಬೇತಿ ತಗಳಿ ಹೆಜ್ಜೆ ಇಡ್ಬೇಕಾದ್ರೆ ಹ್ಯಾಗಿಡ್ಬೇಕು, ಮುಖ ನೋಡ್ಬೇಕಾದ್ರೆ ಹೇಗೆ ನೋಡ್ಬೇಕು, Look ಹೇಗೆ ಕೊಡ್ಬೇಕು, ಹೇಗ್ಮಾಡ್ಬೇಕು, ಇದನ್ನೆಲ್ಲಾ ಸ್ಟಡಿ ಮಾಡಿ.

ಆ ನಾಟ್ಕ ನೀವು ಆಡ್ಲಿಕ್ಕೆ ಶುರು ಮಾಡಿದ್ರೆ ಒಂದು ವರ್ಷ ಒಂದು ವರ್ಷಗಟ್ಲೆ ನಾಟ್ಯ ಆಡ್ಬೋದು. ಈಗಿನ ಕಾಲದಲ್ಲಿ ರಂಗಸಜ್ಜಿಕೆಗಳನ್ನ ಸರಿ ಮಾಡಿ, ಭಾವಪೂರ್ಣವಾಗಿ ನಾಟ್ಯ ಆಡಿದ್ರೆ ಎಷ್ಟು ದಿನವಾದ್ರೂ ಬೋರ್ಡ್ ಚೇಂಜ್ ಮಾಡ್ದಲೆ.

ನಾಟ್ಕ ಯಾಕೆ ನೋಡೋದಿಲ್ಲ? ನೋಡೋರ ದೃಷ್ಟಿಗೆ ಮೋಡಿ ಮಾಡ್ಬಿಟ್ರೆ ನಾಳೆ ಅದಕ್ಕೆರಡರಷ್ಟು ಬರ್ತಾರೆ ಜನ.

'ಏನ್ ಚೆನ್ನಾಗಾಡ್ತಾರಪ್ಪಾ ಏನ್ ಚೆನ್ನಾಗಾಡ್ತಾರೆ' ಅಂತ ಅವರೇ ಹೊಗಳ್ತಾರೆ, ಅವರೇ ಪಬ್ಲಿಕ್ ಮಾಡ್ತಾರೆ. ನಾವೇನೂ ಕಷ್ಟಪಡಲಾರ್ದೇನೇ ನಾಟ್ಕ ಬಿಟ್ಮೇಲೆ, “ನೀನಲ್ಲಿ ಸರಿಗೇ ಮಾಡದಿಲ್ಲ ಬಿಡ್ಲೇ ಅನ್ನೋದು. ಅದಕ್ಕವನು 'ಏ... ಎರಡು ದಿವಸದಲ್ಲಿ ನೋಡ್ಕಂಡಿದ್ದಪ್ಪ. ಇನ್ನೇನ್ಮಾಡಕಾಗುತ್ತೆ' ಅಂತ ಅವನನ್ನೋದು ಹೀಗೆ ನಾಟ್ಕ ಮಾಡಿ ಅಲ್ಲಗಳೀತಾರೆ.

ಅವ್ರಿಗೆ ನಮಗೆ ಇರೋ ವ್ಯತ್ಯಾಸ ಅಷ್ಟೇನೆ. ಈಗದನ್ನ ಹೇಳ್ಬೇಕು, ಕಲೆಗೆ ನೀವು ಬೆಲೆ ಕೊಡ್ಬೇಕಾದ್ರೆ ನೀವದನ್ನ ಸಾಧನೆ ಮಾಡ್ಬೇಕು, ಸಾಧನೆ ಮಾಡಿ, ಕಷ್ಟಪಟ್ಟು ನೋಡ್ದಾಗ ನಿಮಗೆ ಗೊತ್ತಾಗುತ್ತೆ. ಒಂದು ಸಂದರ್ಭದಲ್ಲಿ ಸುಮ್ಸುಮ್ನೆ ಅಳ್ಬೇಕಾದ್ರೆ ಭಾವಪೂರ್ವಕವಾಗಿ ಬದಲಾವಣೆ ಬರೋದಿಲ್ಲ. ಆ ಅಳೋದು ದುಃಖದಿಂದ ಅಳ್ಬೇಕಾದ್ರೆ, ಒಂದು ಮಾತು ಹೇಳ್ಬೇಕಾದ್ರೆ ಭಾವನೆಗಳ ತುಂಬಿಕೊಳ್ಳಬೇಕಾಗುತ್ತೆ.

> ಹೇ ಕೃಷ್ಣ ಪರಮಾತ್ಮ, ಏನು ನಿನ್ನ ವಿಚಿತ್ರ ಲೀಲೆ? ನಾವು
> ನಿರಹಂಕಾರಿಗಳೆಂದು ಹೇಳಿಕೊಳ್ಳುವವರಲ್ಲೂ ಸಹಾ ತಮ್ಮ ಮನದಲ್ಲಿ
> ತಾವು ಎಲ್ಲವನ್ನೂ ಬಲ್ಲವರೆಂಬ ಅಹಂಭಾವಪೀಡಿತರಾಗಿರುವರಲ್ಲಾ! ನಿನ್ನ
> ವಿಶ್ವದ ಅನಂತ ವಿಚಿತ್ರ ಲೀಲೆಗಳಲ್ಲಿ ಅಡಕವಾಗಿರುವ ಸತ್ಯದ
> ಸಹಸ್ರಾಂಶಗಳಲ್ಲಿ ಒಂದಂಶವಾದರೂ ಜನಮನದಲ್ಲಿ ಉಳಿದರೆ ಲೋಕ
> ಪಾವನವಲ್ಲವೇ? ನೀನು ಜಗತ್ತಿಗೆ ಇತ್ತಿರುವ ಉದಾರ ಆಶ್ರಯದಲ್ಲಿ
> ಮಾನವನು ತನ್ನ ಸಂಕುಚಿತ ಸ್ವಭಾವವನ್ನು ಬೆರೆಸಿಯೇ ನೋಡುವನಲ್ಲ!
> ಸ್ವಾರ್ಥ, ಮತ್ಸರ, ಬೇಧ, ಅಹಂಕಾರಗಳ ಸಮ್ಮಿಶ್ರಣವನ್ನು ಮಾಡಿ, ನಿನ್ನ
> ಅಮರ ಸಂದೇಶವನ್ನು ಛಿದ್ರಿಸಲು ಹವಣಿಸುತ್ತಿರುವರಲ್ಲಾ! ಅರಿವು
> ಮೂಡಿಸು ಹರಿಯೇ! ಜ್ಞಾನಿಗಳಿಗೆ ಜಾತಿಯಿಲ್ಲ. ಚಿನ್ನ ಮಣ್ಣಿನಲ್ಲಿ, ಕಮಲ
> ಕೆಸರಿನಲ್ಲಿ, ರತ್ನ ಭೂಮಿಯಲ್ಲಿ, ಮುತ್ತು ಚಿಪ್ಪಿನಲ್ಲಿ ಹುಟ್ಟಿತು ಎಂದ
> ಬಳಿಕ ಅವುಗಳ ಸಂಬಂಧ ಗುಣವೇ ನಮಗೆ ಮುಖ್ಯವಲ್ಲವೇ? ಜನ್ಮಸ್ಥಾನದ
> ಗಣನೆಯೇಕೆ? ಈ ಭಾವವನ್ನ ಎಲ್ಲರ ಮನದಲ್ಲಿ ಸ್ಥಿರಗೊಳಿಸು
> ಪರಮಾತ್ಮ.

ಇದನ್ನ ಹೇಳ್ಬೇಕಾದ್ರೆ ಯಾವ ಭಾವದಿಂದ ಹೇಳ್ಬೇಕು? ಇದನ್ನ ಎಷ್ಟು ದಿವಸ ಸ್ಟಡಿ ಮಾಡ್ಬೇಕು? ಅಲ್ಲಿ ಕೂತ ಆಡಿಯನ್ಸಿನ ಹೃದಯಾನೇ ಅಲುಗಾಡ್ಬೇಕಲ್ಲಾ. ಹಾಗೆ ಸ್ಟಡಿ ಮಾಡ್ಬೇಕು? ಎಂದು ಇಂದಿನ ರಂಗಭೂಮಿ ಕಲಾವಿದರಿಗೆ ಕಿವಿಮಾತು ಹೇಳುತ್ತಾರೆ ಅರಸು.

ಮೇಲಿನ ನುಡಿಗಳು 'ಭಕ್ತ ಕನಕದಾಸ'ದಲ್ಲಿನ ವ್ಯಾಸರಾಯರ ಪಾತ್ರದ ನುಡಿಗಳು. ಆ ಪಾತ್ರಧಾರಿ ಅರಸು. ಆ ಪಾತ್ರವನ್ನು ಈ ಹಿಂದೆ ಕನ್ನಡಿಗರ ಕಣ್ಮಣಿ ಡಾ. ರಾಜ್‌ಕುಮಾರ್‌ರವರು ನೋಡಿ ಅರಸುರವರನ್ನು ಪ್ರಶಂಸಿಸಿದ್ದರು. ಈಗಾಗ್ಲೇ ಈ ನಾಟಕ ಸುಮಾರು ಅರವತ್ತು ಪ್ರದರ್ಶನಗಳನ್ನು ಕಂಡಿದೆ. 'ಗುರುರಾಜ ನಾಟಕ ಮಂಡಳಿ' ತಂಡದಲ್ಲಿ ಇಂದು ಅರಸುರವರು ಎಲ್ಲಾ ಕಡೆ ನಾಟಕಗಳ ಪ್ರಯೋಗದಲ್ಲಿ ಅಭಿನಯಿಸುತ್ತಿದ್ದಾರೆ. ಅರುಣಕುಮಾರ್‌ರವರ ಶಿಷ್ಯಂದಿರಾದ ಕಂಪೆನಿಯ ಮಾಲೀಕರು ಕರೆದಡೆ ಪಾತ್ರ ಮಾಡಲು ಎಂಬತ್ತರ ಇಳಿ ವಯಸ್ಸಲು ಅರಸು ಸದಾ ಸಿದ್ಧ!

## ಉಪಸಂಹಾರ

ಎರಿಬತ್ತು ವಸಂತಗಳನ್ನು ದಾಟಿರುವ ವಯೋವೃದ್ಧ ಎಚ್.ಟಿ. ಅರಸು ಅವರು ಹಿರಿಯ ರಂಗಕಲಾವಿದರಲ್ಲಿ ಉಳಿದಿರುವ ಅಪರೂಪದ ವ್ಯಕ್ತಿತ್ವವುಳ್ಳವರು. ಅಂದಿನ ಸಂದರ್ಭಕ್ಕೆ ಅಗತ್ಯ ಹಾಗೂ ಅನಿವಾರ್ಯವಾಗಿದ್ದ ವೃತ್ತಿ ಕಂಪನಿಗಳ ಪೌರಾಣಿಕ, ಸಾಮಾಜಿಕ ನಾಟಕಗಳ ವಸ್ತು, ಸಂಭಾಷಣಾ ವೈಖರಿ, ಅದ್ದೂರಿ ಸೀನರಿಗಳ ರಂಗಮಂಚ, ಪ್ರೇಕ್ಷಕವರ್ಗದ ಉತ್ಸಾಹ, ಕಲಾವಿದರಿಗೆ ಕಂಪನಿ ಮಾಲೀಕರಿಂದ ಸಿಕ್ಕುತ್ತಿದ್ದ ಗೌರವ, ಪ್ರೀತಿಯ ಆಸರೆಗಳು ಸಿಹಿ, ಸವಿ ನೆನಪಾಗಿ ಉಳಿದಿವೆ.

ರಂಗಕಲಾವಿದನ ಬದುಕಲ್ಲಿ ಸದಾ ಸಿಹಿಯ ಸುದ್ದಿಗಳೇ ಇರುವುದಿಲ್ಲ. ವೈಯಕ್ತಿಕ ಬಡತನದಿಂದ ಕಲಾವಿದರಾಗುವ ಅನಿವಾರ್ಯತೆ ಒದಗಿ ಬಂದ ಸಂದರ್ಭದಿಂದ ತಾನು ನಿರ್ವಹಿಸುವ ಭಿನ್ನ ಪಾತ್ರಗಳಲ್ಲಿ ಕಾಣುವ ತೃಪ್ತಿಯೂ ಇಲ್ಲಿ ಸೇರಿರುತ್ತದೆ. ಕಲಾವಿದರಲ್ಲಿ ಪರಸ್ಪರ ಅಸೂಯೆ, ದ್ವೇಷ, ಮತ್ಸರ, ಸೇಡಿನ ಮನೋಭಾವ, ವೃತ್ತಿಗೆ ಅವಮಾನಕರವಾಗುವ ಸನ್ನಿವೇಶಗಳ ಎದುರು - ಬದುರಾಗುವುದು ಸರ್ವೇಸಾಮಾನ್ಯ ಸಂಗತಿ.

ಇಂಥ ಸಿಹಿ - ಕಹಿ ಎರಡನ್ನೂ ಸವಿದು ನಮ್ಮೊಡನಿರುವ ಎಚ್.ಟಿ. ಅರಸು ಸೌಮ್ಯ-ಸ್ವಭಾವದ, ಮಾನವೀಯ ಹೃದಯಿ. ಗತಕಾಲದಲ್ಲಿ ನಿಂತು ವಾಸ್ತವಕ್ಕೆ ಕನ್ನಡಿ ಹಿಡಿವ ಅರಸು ಆಧುನಿಕ ರಂಗಭೂಮಿ ಪಡೆದುಕೊಂಡ ವಿವಿಧ ಆಯಾಮಗಳಿಗೆ ಮುಖಾಮುಖಿ ಆದವರು. 'ರಾಜಾವಿಕ್ರಮ'ದ ದುರ್ಜಯನ, 'ಚಂದ್ರಹಾಸ'ದ ದುಷ್ಟಬುದ್ಧಿ ಪಾತ್ರಗಳ ಮೂಲಕ ಪ್ರತಿ ನಾಯಕನಾಗಿ 1950 - 60ರ ದಶಕದ ರಂಗಭೂಮಿಗೆ ಚಾಲನಶಕ್ತಿಯಾದ ಅಂದಿನ ಐದಾರು ಪ್ರಮುಖ ರಂಗತಂಡಗಳಲ್ಲಿ ಎಚ್.ಟಿ. ಅರಸು ಪ್ರಮುಖ ಪಾತ್ರ ನಿರ್ವಹಿಸಿದವರು.

ರಾಯಚೂರು ಜಿಲ್ಲೆ ತೊರೆದು ಉತ್ತರ ಕರ್ನಾಟಕದ ಪ್ರಮುಖ ರಂಗ ತಂಡಗಳಲ್ಲಿ ಅನುಭವ ಪಡೆಯುತ್ತ, ತಮ್ಮ ಸಂಸಾರ ಜೀವನವನ್ನು ಗಂಭೀರವಾಗಿ ಪರಿಗಣಿಸದೆ ರಂಗಭೂಮಿಗೇ ನಿಷ್ಠೆ ತೋರಿದ ಎಷ್ಟೋ ಪ್ರಮುಖರ ಪಟ್ಟಿಗೆ ಅರಸು ಸೇರುತ್ತಾರೆ. ಉತ್ತರ ಕರ್ನಾಟಕದ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಪ್ರಮುಖ ತಾಲ್ಲೂಕು ಕೇಂದ್ರಗಳಲ್ಲಿ ಕ್ಯಾಂಪ್ ಮಾಡುತ್ತ, ಅಲ್ಲಿನ ಪ್ರೇಕ್ಷಕರಿಂದ ಮೆಚ್ಚುಗೆ ಪಡೆದು ಹಳೇ ಮೈಸೂರ ಕಡೆ ಬಂದವರು ತಿರುಗಿ ಉತ್ತರ ಕರ್ನಾಟಕದ ಕಡೆ ಹೋಗಿ ಬಂದದ್ದೇ ಕಡಿಮೆ. ಮೈಸೂರು ಕಡೆ ಮಹಾರಾಜರ ಆಶ್ರಯದಲ್ಲಿದ್ದ ಕೆಲವೇ ರಂಗತಂಡಗಳು ಸಮೃದ್ಧವಾಗಿದ್ದರಿಂದ ಅವು ಅಲ್ಪ ತೃಪ್ತಿ ಹೊಂದಬೇಕಾಯಿತು. ಅರಸು ತಮ್ಮ ದೀರ್ಘಕಾಲದ ರಂಗಭೂಮಿ ಅಭಿನಯವನ್ನು ಮೈಸೂರಿನ ಎಂ.ಸಿ. ಮಹಾದೇವಸ್ವಾಮಿ ಅವರ ಕನ್ನಡ ಥೇಟರ್‌ನಲ್ಲಿ ಕಳೆದರು.

ಮೈಸೂರಿನ ಕ್ಯಾಂಪ್‌ಗಳಲ್ಲಿದ್ದ ಹನುಮಸಾಗರದ ತಿಪ್ಪರಾಜ್ ಅವರು ಎಚ್.ಟಿ. ಅರಸ್ ಆದ ಮೇಲೆ ಆ ಹೆಸರಿನ ಯೋಗದಿಂದಲೋ ಏನೋ ಚಲನಚಿತ್ರಕ್ಕೂ ಕಾಲಿಡುವಂತೆ ಮಾಡಿತು. ಶಂಕರ್‌ಸಿಂಗ್‌ರ 'ಮಂಗಳಸೂತ್ರ'ದ ಹೀರೋ ಆದವರು ಮುಂದೆ ದೊಡ್ಡ ದೊಡ್ಡ ಬ್ಯಾನರ್‌ಗಳಲ್ಲಿ ಅಭಿನಯಿಸಿದರು. ಬಿ.ಆರ್. ಪಂತುಲು ಅವರಂತೂ ಅರಸು ಅವರಿಗೆ ಪ್ರಿಯವಾಗಿದ್ದರು.

ಚಲನಚಿತ್ರ - ರಂಗಭೂಮಿ ಎರಡರಲ್ಲೂ ಹೆಜ್ಜೆ ಮೂಡಿಸಿದ ಅರಸು; ರಾಜಧಾನಿ ಬೆಂಗಳೂರಿನ ಸೋಮೇಶ್ವರ ಖಾನಾವಳಿಯಲ್ಲೇ ತಮ್ಮ ನೆಲೆಗೂಡು ಕಂಡುಕೊಂಡು ಇಪ್ಪತ್ತೈದು ವರ್ಷಗಳಿಗೂ ಮಿಕ್ಕಿ ಅಲ್ಲೇ ವಾಸ್ತವ್ಯ ಹೂಡಿರುವುದು ಕುತೂಹಲದ ಸಂಗತಿ.

ದೂರದ ಊರಲ್ಲಿ ಸಂಸಾರ ಬಿಟ್ಟು, ಆಗೊಮ್ಮೆ ಈಗೊಮ್ಮೆ ಊರಿಗೆ ಹೋಗಿ ಬರುತ್ತ, ಕಲಾಕ್ಷೇತ್ರ ಹಾಗೂ ನಗರದ ಸುತ್ತಮುತ್ತ ನಡೆವ ಪೌರಾಣಿಕ, ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸುತ್ತ, ಆ ತಂಡಗಳು ಕೊಟ್ಟಷ್ಟು ಪಡೆಯುತ್ತ, ಎಲ್ಲರೊಂದಿಗೂ ನಗು ನಗುತ್ತಾ ಸಹಕರಿಸುತ್ತಿರುವ ಅರಸು ನಾಟಕ ಅಕಾಡೆಮಿ, ರಾಜ್ಯೋತ್ಸವ ಪ್ರಶಸ್ತಿ ಪಡೆದರೂ, ತಮ್ಮ ನೆಲೆಗಾಗಿ ಒಂದು ನಿವೇಶನ ಪಡೆಯಲು ಕನ್ನಡ ಸಂಸ್ಕೃತಿ ಇಲಾಖೆ, ಸಂಬಂಧಿಸಿದ ಮಂತ್ರಿಗಳು, ವಿಧಾನಸೌಧದ ಬಾಗಿಲುಗಳನ್ನು ಸುತ್ತಿದ್ದಾರೆ. "ನಮ್ಮಂಥವರಿಗೆ ಯಾರು ಕರುಣೆ ತೋರಬೇಕು?" ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

ಇಷ್ಟಾಗ್ಯೂ ಸರಕಾರ ಪ್ರತೀ ತಿಂಗಳು ರೂ. 500 ಕಲಾವಿದರ ಮಾಸಾಶನ, ವೈದ್ಯಕೀಯ ಖರ್ಚು ಕೊಡುತ್ತಿರುವುದಕ್ಕೆ ಕೃತಜ್ಞತೆ ಅರ್ಪಿಸುತ್ತಾರೆ.

'ಅನುಭವದಲ್ಲಿ ಅಮೃತತ್ವವಿದೆ' ಅನ್ನುವಂತೆ ವೈಯಕ್ತಿಕ ಬದುಕು, ರಂಗಭೂಮಿ ಬದುಕು ಕಲಿಸಿದ ಪಾಠಗಳು ಅರಸು ಅವರಲ್ಲಿ ಮೊಗೆದಷ್ಟು ನಿಧಿಯಂತೆ ಹೊರಬರುತ್ತವೆ.

ಗಾಂಧಿನಗರದಲ್ಲೇ ಇರುವ ನಗರಸಭೆಯ ಗುಬ್ಬಿವೀರಣ್ಣ ರಂಗಮಂದಿರದಲ್ಲಿ ನಡೆವ ದಾವಣಗೆರೆ ಕೆ.ಬಿ.ಆರ್. ಡ್ರಾಮಾ ಕಂಪನಿಯ ನಾಟಕಗಳನ್ನು ಸ್ವಲ್ಪಕಾಲ ನೋಡಿ, ಅಲ್ಲಿ ಸಿಕ್ಕ ಕಂಪನಿಯ ಚಿಂದೋಡಿಲೀಲಾ, ಚಿಂದೋಡಿಬಂಗಾರೇಶ್ ಹಾಗೂ ಇತರ ಕಲಾವಿದರೊಂದಿಗೆ ಕಾಲಕಳೆದು ಬೇಸರ ನೀಗಿಕೊಳ್ಳುತ್ತಾರೆ.

ಸಂಜೆ ಶ್ವೇತವಸ್ತ್ರಧಾರಿಗಳಾಗಿ ಕೈಯಲ್ಲಿ ಕೋಲೂರುತ್ತ, ಕನ್ನಡಕ ಸರಿಪಡಿಸಿಕೊಳ್ಳುತ್ತ ಗತಕಾಲದ ನೆನಪು ಮರುಕಳಿಸಿಕೊಳ್ಳುತ್ತ ಆಧ್ಯಾತ್ಮದ ನೆಲೆ ಇರುವ ಅನಂತಸ್ವಾಮಿ ಆಶ್ರಮದ ಕಡೆ ಹೆಜ್ಜೆ ಹಾಕುತ್ತಾರೆ. ಅಲ್ಲಿಗೆ ನಡೆಸಿಕೊಂಡು ಹೋಗುವ ಕೈಯ ಕೋಲು, ಕಾಲುಗಳಾಗಿ ಹೆಜ್ಜೆ ಹಾಕುತ್ತದೆ. ಪಶ್ಚಿಮಕ್ಕೆ ಸಂಜೆ ತನ್ನ ಮನೆಗೂಡು ಸೇರುವ ಸೂರ್ಯನಿಗೆ ನಮಸ್ಕರಿಸಿ ದೇವರ ಮುಂದೆ ಕೈ ಜೋಡಿಸಿ ಭಜನೆ, ಹರಿಕಥೆಯಲ್ಲಿ ಪಾಲ್ಗೊಳ್ಳುತ್ತಾರೆ - ಎಚ್.ಟಿ. ಅರಸು.

ಮಾರ್ಚ್, ೨೦೦೦

# ಅನುಬಂಧ

## ಎಚ್.ಟಿ. ಅರಸು (ಹನುಮಸಾಗರದ ತಿಪ್ಪರಾಜ್ ಅರಸು)

## ಜೀವನ ವಿವರ:

| | | |
|---|---|---|
| ಜನನ | : | 1920 |
| ಜನ್ಮಸ್ಥಳ | : | ಹನುಮಸಾಗರ, ಕುಷ್ಟಗಿ ತಾಲ್ಲೂಕು, ರಾಯಚೂರು ಜಿಲ್ಲೆ |
| ತಂದೆ | : | ಯಮುನಪ್ಪ |
| ತಾಯಿ | : | ನಾಗರತ್ನಮ್ಮ |
| ವೃತ್ತಿ | : | ನೇಕಾರಿಕೆ |
| ಸಹೋದರರು | : | ಹಿರಿಯರು ಚಂದ್ರಪ್ಪ, ಮೂರನೆಯವರು ರಾಮಚಂದ್ರಪ್ಪ, (ಎರಡನೆಯವರು ತಿಪ್ಪರಾಜ್) |
| ವಿದ್ಯಾಭ್ಯಾಸ | : | ಮುಲ್ಕಿ (ಏಳನೇ ತರಗತಿ) |
| ವಿವಾಹ | : | 1938 (18ನೇ ವಯಸ್ಸು) |
| ಪತ್ನಿ | : | ಹೇಮಾವತಿ |
| ಮಕ್ಕಳು | : | ನಾಲ್ಕು ಜನ (2 ಗಂಡು, 2 ಹೆಣ್ಣು)<br>1. ಬಸಮ್ಮ, 2. ಬಸವರಾಜ,<br>3. ನಾರಾಯಣ, 4. ಅನಸೂಯ |

## ರಂಗ ಭೂಮಿ


| | | |
|---|---|---|
| ರಂಗಪ್ರವೇಶ | : | 1927<br>ಏಳನೇ ವಯಸ್ಸಿಗೆ 'ಭಕ್ತಪ್ರಹ್ಲಾದ' ನಾಟಕ<br>(ಪ್ರಹ್ಲಾದನ ಪಾತ್ರ) 14ನೇ ವಯಸ್ಸಿಗೆ ಸ್ತ್ರೀಪಾತ್ರ |
| ಅಭಿನಯಿಸಿದ ವೃತ್ತಿ<br>ನಾಟಕ ಕಂಪನಿಗಳು | : | ಜಯಲಕ್ಷ್ಮಿ ನಾಟ್ಯಸಂಘ, ನಾಟಕ : ಭೌಮಾಸುರ ಏಣಗಿ ಬಾಳಪ್ಪನವರ ಕಲಾವೈಭವ ನಾಟ್ಯ ಸಂಘ (ನಾಟಕ : ಕಲ್ಯಾಣ ಕ್ರಾಂತಿ, ದ್ರುಪದ ಕನ್ಯ, ಕುಂಕುಮ, ಭಕ್ತಕುಂಬಾರ ಇತ್ಯಾದಿ) ಗೋಕಾಕ್ ಕಂಪನಿ (ಚಿತ್ರದುರ್ಗ ಕ್ಯಾಂಪ್) (ಓಬಳೇಶ್ವರ್, ಎಲಿವಾಳ ಸಿದ್ದಯ್ಯ, ಮಾರ್ತಾಂಡರಾವ್, ರಟ್ಟಿಹಳ್ಳಿ ಗಂಗಾಧರಪ್ಪ ಅವರ ಒಡನಾಡಿ) ಮುಂದೆ ಅರಸೀಕೆರೆ, ಕೆ.ಆರ್.ನಗರ, ಚಾಮರಾಜನಗರ, ನಂಜನಗೂಡು, ಮೈಸೂರು, ಮಂಡ್ಯ ಕ್ಯಾಂಪ್. (ನಾಟಕ : ಬೆಳ್ಳಿ ಚುಕ್ಕಿ, ಚಿತ್ರಾಂಗದ, ಕುರುಕ್ಷೇತ್ರ, ದೌಪದೀ ಸ್ವಯಂವರ, ಅಕ್ಷಯಾಂಬರ, ರಕ್ತರಾತ್ರಿ, ಬಾಣಸಿಗಭೀಮ, ಮಾನವತಿ, ಆದಿತ್ಯ) ಕನ್ನಡ ಥೇಟರ್ಸ್ (ಮಾಲೀಕರು : ಎಂ.ಸಿ. ಮಹಾದೇವಸ್ವಾಮಿ) ವೃತ್ತಿ ತಂಡ, ಮೈಸೂರು (ನಾಟಕಗಳು : ಅತ್ತೆ ಸೊಸೆ, ಬಿಡುಗಡೆ, ರಾಜಾವಿಕ್ರಮ, ಚಂದ್ರಹಾಸ ಇತ್ಯಾದಿ) ದೇಸಾಯಿ ಕಂಪನಿ : ಸಿಂಧೂರ ಲಕ್ಷ್ಮಣ ಶ್ರೀ ಕಂಠೇಶ್ವರ ನಾಟಕ ಮಂಡಳಿ (ಶ್ರೀಕಂಠಮೂರ್ತಿ) |

## ಪ್ರಶಸ್ತಿ/ಪುರಸ್ಕಾರ

| | | |
|---|---|---|
| | : | ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ<br>ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ<br>ಹತ್ತಾರು ಸಂಘ ಸಂಸ್ಥೆಗಳಿಂದ ಪುರಸ್ಕಾರ |

## ಸಿನಿಮಾ ಪ್ರವೇಶ

| | | |
|---|---|---|
| **ಮಹಾತ್ಮಾ ಸಂಸ್ಥೆ** | : | ಶಂಕರ್‌ಸಿಂಗ್ ನಿರ್ದೇಶನದ 'ಮಂಗಳಸೂತ್ರ'<br>ನಾಯಕ, ನಾಯಕಿ : ಆದವಾನಿ ಲಕ್ಷ್ಮಿದೇವಿ, ಪ್ರತಿಮಾದೇವಿ,<br>ಭಗವಾನ್ ಇತರ ಕಲಾವಿದರು "ಧರ್ಮಸ್ಥಳ ಮಹಾತ್ಮ' (ಅಣ್ಣಪ್ಪನ ಪಾತ್ರ)<br>'ಪಾತಾಳ ಮೋಹಿನಿ' (ಮಂತ್ರವಾದಿ) |
| **ಬಿ.ಆರ್. ಪಂತುಲು**<br>**(ಪದ್ಮನಿ ಸಂಸ್ಥೆ ಚಿತ್ರಗಳು)** | : | ಕಿತ್ತೂರು ಚನ್ನಮ್ಮ (ಟಿಪ್ಪುಸುಲ್ತಾನ್)<br>ಚಿನ್ನದ ಗೊಂಬೆ (ಪಟೇಲ್ ಚೌಡಯ್ಯ)<br>ಶ್ರೀಕೃಷ್ಣದೇವರಾಯ |
| **ರಾಜಕುಮಾರ್ ಜೊತೆ**<br>**ಇತರ ಸಂಸ್ಥೆಗಳ ಚಿತ್ರಗಳು** | : | ಮಾರ್ಗದರ್ಶಿ, ಮೇಯರ್ ಮುತ್ತಣ್ಣ, ಮಯೂರ<br>(ಇತರ ಕಲಾವಿದರೊಂದಿಗೆ ಐವತ್ತಕ್ಕೂ ಹೆಚ್ಚು<br>ಚಿತ್ರಗಳು) |
| **ವಿಳಾಸ** | **:** | **ಎಚ್.ಟಿ. ಅರಸು**<br>ಕೇರಾಫ್: ಸೋಮೇಶರ ಖಾನಾವಳಿ,<br>ಗಾಂಧೀನಗರ, ಸಿಂಡಿಕೇಟ್ ಬ್ಯಾಂಕ್ ಪಕ್ಕ,<br>ಬೆಂಗಳೂರು - 560 009. |



' ಬಿಡುಗಡೆ ' ನಾಟಕದಲ್ಲಿ ಎಚ್. ಟಿ. ಅರಸು




' ಅತ್ತೆ ಸೊಸೆ ' ನಾಟಕದಲ್ಲಿ ಮಾರವಾಡಿ ಪಾತ್ರದಲ್ಲಿ



' ವಿಪ್ರ ದರ್ಶನ ' ನಾಟಕದಲ್ಲಿ



' ಧರ್ಮಸ್ಥಳ ಮಹಾತ್ಮೆ ' ಯಲ್ಲಿ ಅಣ್ಣಪ್ಪಸ್ವಾಮಿ ಪಾತ್ರದಲ್ಲಿ



' ಧರ್ಮಸ್ಥಳ ಮಹಾತ್ಮೆ ' ಯಲ್ಲಿ ಪ್ರತಿಮಾದೇವಿ ಹಾಗೂ ಅರಸು



'ನಂಜುಂಡೇಶ್ವರ ಮಹಾತ್ಮೆ' ಸಿನೆಮಾದಲ್ಲಿ ಜಮದಗ್ನಿ ಪಾತ್ರದಲ್ಲಿ



'ಕಿತ್ತೂರು ಚೆನ್ನಮ್ಮ' ಚಿತ್ರದಲ್ಲಿ ಟಿಪ್ಪುಸುಲ್ತಾನ್ ಪಾತ್ರದಲ್ಲಿ



' ಪ್ರಚಂಡ ರಾವಣ ' ನಾಟಕದಲ್ಲಿ ಎಚ್. ಟಿ. ಅರಸು ಹಾಗೂ ಸಹಕಲಾವಿದ



ಭಾರತದ ಪ್ರಧಾನಮಂತ್ರಿ ಜವಾಹರಲಾಲರು ನಾಟಕ ನೋಡಿ ಪ್ರಶಂಸಿದರು



'ಕನಕದಾಸ' ನಾಟಕದಲ್ಲಿ ವ್ಯಾಸರಾಯರಾಗಿ ಅರಸು -
ಡಾ. ರಾಜಕುಮಾರರಿಂದ ಅಭಿನಂದನೆ



ಮುಖ್ಯಮಂತ್ರಿ ಬಂಗಾರಪ್ಪನವರಿಂದ
ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವದು (೧೯೯೨)



ಮೈಸೂರು ಕಲಾಮಂದಿರದಲ್ಲಿ ಚಿತ್ರದುರ್ಗದ ಮುರುಘಾಮಠಾಧೀಶರಾದ
ಶ್ರೀ ಶಿವಮೂರ್ತಿ ಸ್ವಾಮಿಗಳಿಂದ ಅಭಿನಂದನೆ

# ಕರ್ನಾಟಕ ನಾಟಕ ಅಕಾಡೆಮಿ

## ಅಧ್ಯಕ್ಷರು ಮತ್ತು ಸದಸ್ಯರು

೧. ಶ್ರೀ ಸಿ. ಜಿ. ಕೃಷ್ಣಸ್ವಾಮಿ, ಬೆಂಗಳೂರು
ಅಧ್ಯಕ್ಷರು
೨. ಪ್ರೊ. ಸಿದ್ದಲಿಂಗ ಪಟ್ಟಣಶೆಟ್ಟಿ, ಧಾರವಾಡ
೩. ಶ್ರೀ ಚೆನ್ನವೀರ ರಭಳಕಿ, ಬಿಜಾಪುರ
೪. ಶ್ರೀ ಪಿ. ಮುನಿರೆಡ್ಡಿ, ಮದ್ದೇರಿ
೫. ಶ್ರೀಮತಿ ಕೆ. ನಾಗರತ್ನಮ್ಮ, ಮರಿಯಮ್ಮನಹಳ್ಳಿ
೬. ಶ್ರೀ ಶಿವರಾಂ, ಮಂಡ್ಯ
೭. ಶ್ರೀ ಸಿ. ಎಂ. ನರಸಿಂಹಮೂರ್ತಿ, ಚಾಮರಾಜನಗರ
೮. ಶ್ರೀ ಶಂಕ್ರಯ್ಯ ಘಂಟಿ, ಗುಲ್ಬರ್ಗಾ
೯. ಶ್ರೀ ಎಸ್. ವಿ. ಪಾಟೀಲ, ಗುಂಡೂರು
೧೦. ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಧಾರವಾಡ
೧೧. ಶ್ರೀ ಚಿಂದೋಡಿ ಶಂಭುಲಿಂಗಪ್ಪ, ದಾವಣಗೆರೆ
೧೨. ಶ್ರೀ ಹೆಚ್. ಎಂ. ಮಯಾಬ್ರಹ್ಮಾಚಾರ್, ಬೆಂಗಳೂರು
೧೩. ಶ್ರೀ ಕೆ. ವಿ. ನಾಗರಾಜಮೂರ್ತಿ, ಬೆಂಗಳೂರು
೧೪. ಶ್ರೀ ಕಾಸರಗೋಡು ಚಿನ್ನಾ, ಕಾಸರಗೋಡು
೧೫. ಶ್ರೀ ಟಿ. ರಘು, ಬೆಂಗಳೂರು
೧೬. ಶ್ರೀ ಎಂ. ಸಂಪಂಗಿ, ಬೆಂಗಳೂರು
೧೭. ಶ್ರೀ ಎಚ್. ಎಸ್. ನೀಲಕಂಠ, ಬೆಂಗಳೂರು
೧೮. ಶ್ರೀಮತಿ ಎಸ್. ಮಾಲತಿ, ಸಾಗರ
೧೯. ಶ್ರೀ ಸಿ. ಕೆ. ಗುಂಡಣ್ಣ, ಬೆಂಗಳೂರು
೨೦. ಶ್ರೀಮತಿ ಪಂಕಜ ರವಿಶಂಕರ್, ಬೆಂಗಳೂರು
೨೧. ಶ್ರೀ ಕಾಗೋಡು ಅಣ್ಣಪ್ಪ, ಸಾಗರ
೨೨. ಶ್ರೀ ಎಚ್. ಎಸ್. ಉಮೇಶ್, ಮೈಸೂರು
೨೩. ಶ್ರೀ ಮಾ. ನರಸಿಂಹಮೂರ್ತಿ, ಬೆಂಗಳೂರು
೨೪. ಶ್ರೀ ಐ. ಕೆ. ಬೊಳುವಾರ್, ಪುತ್ತೂರು
೨೫. ಶ್ರೀ ಹೂಲಿ ಶೇಖರ್, ಅಂಬಿಕಾನಗರ
೨೬. ಶ್ರೀ ಬಿ. ಟಿ. ಮುನಿರಾಜಯ್ಯ
ರಿಜಿಸ್ಟ್ರಾರ್
೨೭. ಆರ್. ಎಸ್. ದಳವಾಯಿ
ಅರ್ಥಸದಸ್ಯರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ